# ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 26 | ಜೂನ್ 21–27, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com




## ಕುಬೇರರ ಕೂಟದ ಸಭೆಯಲ್ಲಿ ಪ್ರಧಾನಿಯ ಅದ್ಭುತ ನಟನೆ

G7 Cornwall United Kingdom 2021




## ವ್ಯಾಕ್ಸಿನ್ ಎಂಬ ಉಸಿರು ನಿರಾಕರಿಸುತ್ತಿರುವ ಸರ್ಕಾರ






## ಶ್ರಮಜೀವಿಗಳ ಆಶಯಗಳಿಗೆ ದನಿ ನೀಡಿದ ಡಾ. ಸಿದ್ದಲಿಂಗಯ್ಯ

**ಜೂನ್ 16-30:**

ಎಡ ಪಕ್ಷಗಳಿಂದ ಪ್ರತಿಭಟನಾ ಪಕ್ಷಾಚರಣೆ

**ಜೂನ್ 21:**

‘ಉದ್ಯೋಗ ಖಾತ್ರಿ ಯೋಜನೆ ಉಳಿಸಿ’

**ಜೂನ್ 26:**

‘ಕೃಷಿ ಉಳಿಸಿ-ಪ್ರಜಾಪ್ರಭುತ್ವ ಉಳಿಸಿ’ ದಿನಾಚರಣೆ

# ಪೆಟ್ರೋಲ್ ಬೆಲೆಯೇರಿಕೆಗಳನ್ನು ಹಿಂತೆಗೆದುಕೊಳ್ಳಬೇಕು
# ಅಗತ್ಯ ಸರಕುಗಳ, ಔಷಧಿಗಳ ಬೆಲೆಗಳನ್ನು ನಿಯಂತ್ರಿಸಬೇಕು

**ಜೂನ್ 16ರಿಂದ 30: ಪ್ರತಿಭಟನಾ ಪಕ್ಷಾಚರಣೆಗೆ ಎಡಪಕ್ಷಗಳ ಕರೆ**

ಎಲ್ಲ ಆವಶ್ಯಕ ಸರಕುಗಳ ಬೆಲೆಗಳು ಸತತವಾಗಿ ಏರುತ್ತಿರುವುದರಿಂದಾಗಿ ಜನಗಳ ಜೀವನಾಧಾರಗಳ **ಮೇಲೆ ಹೆಚ್ಚೆಚ್ಚು ದಾಳಿಗಳು ನಡೆಯುತ್ತಿವೆ. ಮೋದಿ ಸರಕಾರ ಕೊವಿಡ್ ಆರೋಗ್ಯ ವಿಪತ್ತಿನ ಹಾವಳಿಗಳನ್ನು ಎದುರಿಸಲು ಜನರಿಗೆ ನೆರವಾಗುವ ಬದಲು ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳನ್ನು ಏರಿಸುತ್ತಲೇ ಇದೆ. ಇದರ ವಿರುದ್ಧ ದೇಶಾದ್ಯಂತ ಪ್ರತಿಭಟನೆ ನಡೆಸಬೇಕೆಂದು ಐದು ಎಡಪಕ್ಷಗಳು, ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್)–ಲಿಬರೇಷನ್, ಫಾರ್ವರ್ಡ್ ಬ್ಲಾಕ್ ಮತ್ತು ಆರ್‌ಎಸ್‌ಪಿ ಜನಗಳಿಗೆ ಕರೆ ನೀಡಿವೆ.**

ಮೇ 2 ರಂದು ವಿಧಾನಸಭಾ ಚುನಾವಣಾ ಫಲಿತಾಂಶಗಳು ಪ್ರಕಟವಾದ ಮೇಲೆ ಕನಿಷ್ಟ 21 ಬಾರಿ ಬೆಲೆಗಳನ್ನು ಮೋದಿ ಸರಕಾರ ಏರಿಸಿದೆ. ಇದು ಬೇರೆಲ್ಲ ಸರಕುಗಳ ಮೇಲೂ ಸರಣಿ ಪರಿಣಾಮಗಳನ್ನು ಬೀರಿ ಹಣದುಬ್ಬರದ ಸುರಳಿಗಳನ್ನು ಹರಿಯಬಿಟ್ಟಿದೆ. ಇದರಿಂದಾಗಿ ಸಗಟು ಬೆಲೆ ಸೂಚ್ಯಂಕ ಕಳೆದ ಹನ್ನೊಂದು ವರ್ಷಗಳಲ್ಲಿ ಕಾಣದಷ್ಟು ಮಟ್ಟಕ್ಕೆ ಏರಿದೆ.

ಆಹಾರ ವಸ್ತುಗಳ ಬೆಲೆಗಳು ಎಪ್ರಿಲ್ ತಿಂಗಳಲ್ಲಿ 5% ದಷ್ಟು ಏರಿವೆ. ಪ್ರಾಥಮಿಕ ಸರಕುಗಳ ಬೆಲೆಗಳು 10.16% ದಷ್ಟು ಮತ್ತು ತಯಾರಿತ ಸರಕುಗಳ ಬೆಲೆಗಳು 9.01% ದಷ್ಟು ಏರಿವೆ. ಇವು ಚಿಲ್ಲರೆ ಮಾರುಕಟ್ಟೆಯನ್ನು ಸೇರುವ ವೇಳೆಗೆ, ಬಳಕೆದಾರರು ಇನ್ನೂ ಹೆಚ್ಚಿನ ಬೆಲೆಗಳನ್ನು ತೆರಬೇಕಾಗುತ್ತಿದೆ.

ಅತ್ತ ಅರ್ಥವ್ಯವಸ್ಥೆ ಆಳವಾದ ಹಿಂಜರಿತ, ನಿರುದ್ಯೋಗದ ನಾಗಾಲೋಟ, ಜನಗಳ ಖರೀದಿ ಶಕ್ತಿಯಲ್ಲಿ ಕುಸಿತ ಮತ್ತು ಹಸಿವಿನ ಮಟ್ಟ ಹೆಚ್ಚುತ್ತಿರುವುದನ್ನು ಕಾಣುತ್ತಿರುವಾಗ ಇವೆಲ್ಲ ಸಂಭವಿಸುತ್ತಿವೆ ಎಂದು ಎಡಪಕ್ಷಗಳು ಹೇಳಿವೆ.

ಕಾಳಸಂತೆ ಮತ್ತು ಕಳ್ಳ ದಾಸ್ತಾನು ಸರಕಾರೀ ಕೃಪಾಪೋಷಣೆಯಲ್ಲೇ ನಡೆಯುತ್ತಿದೆ ಎಂಬುದು ಸ್ಪಷ್ಟವಾಗಿ ಕಾಣುತ್ತಿದೆ. ಮೋದಿ ಸರಕಾರ ಇಂತಹ ಕಾಳಸಂತೆಯನ್ನು, ಮುಖ್ಯವಾಗಿ ಜನಗಳು ಬದುಕುಳಿಯಲು ಆವಶ್ಯಕವಾದ ಔಷಧಿಗಳಲ್ಲಿ ಕಾಳಸಂತೆಯನ್ನು ಕಟ್ಟುನಿಟ್ಟಾದ ಕ್ರಮಗಳ ಮೂಲಕ ಹತ್ತಿಕ್ಕಬೇಕು.

ತಕ್ಷಣವೇ ಮೋದಿ ಸರಕಾರ ಆದಾಯ ತೆರಿಗೆ ವ್ಯಾಪ್ತಿಯೊಳಕ್ಕೆ ಬಾರದ ಕುಟುಂಬಗಳಿಗೆ ಆರು ತಿಂಗಳು ಮಾಸಿಕ 7500ರೂ.ಗಳ ನಗದು ವರ್ಗಾವಣೆ ಮಾಡಬೇಕು.

ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಯೋಜನೆಯ ಅಡಿಯಲ್ಲಿ 5 ಕೆಜಿ ಆಹಾರಧಾನ್ಯಗಳನ್ನು ಕೊಡುವುದನ್ನು ದೀಪಾವಳಿಯ ವರೆಗೆ ವಿಸ್ತರಿಸುವುದಾಗಿ ಪ್ರಧಾನಿ ನರೇಂದ್ರ ಮೋದಿ ಪ್ರಕಟಿಸಿದ್ದಾರೆ. ಇದು ಏನೇನೂ ಸಾಲದು. ಇದನ್ನು ಎಲ್ಲ ವ್ಯಕ್ತಿಗಳಿಗೆ ತಿಂಗಳಿಗೆ 10 ಕೆಜಿಯಂತೆ ಕೊಡಬೇಕು, ಇದರಲ್ಲಿ ಬೇಳೆಕಾಳುಗಳು, ಅಡುಗೆ ಎಣ್ಣೆ, ಸಕ್ಕರೆ, ಮಸಾಲೆ ಸಾಮಾನುಗಳು, ಚಹಾ ಇತ್ಯಾದಿಗಳೂ ಸೇರಿರುವ ಆಹಾರ ಕಿಟ್‌ಗಳನ್ನು ಕೂಡ ಉಚಿತವಾಗಿ ಹಂಚಬೇಕು.

ಇವನ್ನೆಲ್ಲ ಆಗ್ರಹಿಸಿ ಜೂನ್ 16ರಿಂದ 30 ರ ವರೆಗೆ ಪ್ರತ್ರಿಭಟನಾ ಪಕ್ಷಾಚರಣೆ ನಡೆಸಬೇಕು ಎಂದು ಎಡಪಕ್ಷಗಳು ಜನತೆಗೆ ಕರೆ ನೀಡಿವೆ. ಈ ಪ್ರತಿಭಟನೆಗಳನ್ನು ಕೊವಿಡ್ ಪರಿಸ್ಥಿತಿಗಳಿಂದಾಗಿ ಮುನ್ನೆಚ್ಚರಿಕೆಗಳು ಮತ್ತು ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಲೇ, ಆಯಾಯ ರಾಜ್ಯಗಳಲ್ಲಿನ ಮೂರ್ತ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡು ನಡೆಸಬೇಕು ಎಂದು ಈ ಐದು ಎಡಪಕ್ಷಗಳ ಪ್ರಧಾನ ಕಾರ್ಯದರ್ಶಿಗಳಾದ ಸೀತಾರಾಮ್ ಯೆಚುರಿ, ಡಿ.ರಾಜ, ದೀಪಂಕರ್ ಭಟ್ಟಾಚಾರ್ಯ, ದೇಬಬ್ರತ ಬಿಸ್ವಾಸ್ ಮತ್ತು ಮನೋಜ್ ಭಟ್ಟಾಚಾರ್ಯ ಜಂಟಿ ಹೇಳಿಕೆಯಲ್ಲಿ ಕರೆ ನೀಡಿದ್ದಾರೆ.

# ಯುಎಪಿಎ ಪ್ರಕರಣದಲ್ಲಿ ದಿಲ್ಲಿ ಹೈಕೋರ್ಟ್ ತೀರ್ಪು
# ಅತ್ಯಂತ ಸ್ವಾಗತಾರ್ಹ–ಸಿಪಿಐ(ಎಂ) ಪೊಲಿಟ್‌ಬ್ಯುರೊ
## “ನ್ಯಾಯಾಲಯ ಸರಕಾರದ ಮುಖಕ್ಕೆ ಕನ್ನಡಿ ಹಿಡಿದಿದೆ”

ಈಶಾನ್ಯ ದಿಲ್ಲಿಯ ಹಿಂಸಾಚಾರಕ್ಕೆ ಸಂಬಂಧಪಟ್ಟ ಯು.ಎ.ಪಿ.ಎ. ಪ್ರಕರಣದಲ್ಲಿ ದಿಲ್ಲಿ ಹೈಕೋರ್ಟ್ ಮೂವರು ಬಂಧಿತರಿಗೆ ಜಾಮೀನು ನೀಡಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸ್ವಾಗತಿಸಿದೆ. ಸಂವಿಧಾನಬಾಹಿರ ಸಿ.ಎ.ಎ. ವಿರುದ್ಧ ಪ್ರತಿಭಟಿಸುತ್ತಿದ್ದ ಕಾರ್ಯಕರ್ತರ ವಿರುದ್ಧ ಕೇಸುಗಳನ್ನು ಉತ್ಪಾದಿಸುವ ಮೂಲಕ ಗೃಹ ಮಂತ್ರಾಲಯ ಎಸಗಿರುವ ದೊಡ್ಡ ಅನ್ಯಾಯವನ್ನು ಸರಿಪಡಿಸುವತ್ತ ಇದು ಒಂದು ಅತ್ಯಂತ ಸ್ವಾಗತಾರ್ಹ ಹೆಜ್ಜೆ ಎಂದು ಅದು ಹೇಳಿದೆ.

ಅದರಲ್ಲೂ **“ಭಿನ್ನಮತವನ್ನು ಹತ್ತಿಕ್ಕುವ ಆತುರದಲ್ಲಿ, ಗೃಹ ಮಂತ್ರಾಲಯದ ಮನದಲ್ಲಿ ಸಂವಿಧಾನ ಭರವಸೆ ನೀಡಿರುವ ಪ್ರತಿಭಟನೆಯ ಹಕ್ಕು ಮತ್ತು ಭಯೋತ್ಪಾದಕ ಚಟುವಟಿಕೆಯ ನಡುವಿನ ಗೆರೆ ಸ್ವಲ್ಪಮಟ್ಟಿಗೆ ಮಸುಕಾಗುತ್ತಿರುವಂತೆ ಕಾಣುತ್ತದೆ. ಈ ಮನೋಭಾವ ಜಾಡು ಹಿಡಿದರೆ ಅದು ಪ್ರಜಾಪ್ರಭುತ್ವಕ್ಕೆ ಒಂದು ವಿಷಾದಕರ ದಿನವಾಗುತ್ತದೆ”** ಎಂದು ಹೈಕೋರ್ಟ್ ಹೇಳಿರುವುದು ಗಮನಾರ್ಹವಾಗಿದೆ ಎಂದು ಸಿಪಿಐ(ಎಂ) ಹೇಳಿದೆ.

ನ್ಯಾಯಾಲಯ ಸರಕಾರದ ಮುಖಕ್ಕೆ ಕನ್ನಡಿ ಹಿಡಿದಿದೆ. ಇದು, ಯಾವುದೇ ರೂಪದ ಭಿನ್ನಮತವನ್ನು ರಾಷ್ಟ್ರ–ವಿರೋಧಿ ಎಂದು ಹೇಳುವ ಮತ್ತು ವ್ಯಕ್ತಿಗಳನ್ನು ಪೀಡಿಸುವ, ಭಯಪಡಿಸುವ, ಬೆದರಿಸುವ, ಯುಎಪಿಎ ಮತ್ತು ರಾಜದ್ರೋಹದ ಕಾಯ್ದೆಗಳ ಅಡಿಯಲ್ಲಿ ಜೈಲಿಗಟ್ಟುವ ಅಸಂಖ್ಯಾತ ಕೇಸುಗಳಿಗೆ ಅನ್ವಯವಾಗುತ್ತದೆ ಎಂದಿರುವ ಸಿಪಿಐ(ಎಂ) ಈ ತೀರ್ಪನ್ನು ಸ್ವಾಗತಿಸುತ್ತಲೇ ಸರಕಾರ ಈ ಮಾನಕವನ್ನು ಎಲ್ಲ ಸುಳ್ಳು ಕೇಸುಗಳಿಗೆ ಅನ್ವಯಿಸಬೇಕು ಮತ್ತು ಎಲ್ಲ ರಾಜಕೀಯ ಬಂಧಿತರನ್ನು ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದೆ.

### ಕೊನೆಗೂ ಜಾಮೀನಿನಲ್ಲಿ ಬಿಡುಗಡೆ

ದಿಲ್ಲಿ ಹೈಕೋರ್ಟ್ ಆದೇಶ ನಿಡಿದರೂ ದಿಲ್ಲಿ ಪೋಲೀಸ್ ಯುಎಪಿಎ ಅಡಿಯಲ್ಲಿ ಒಂದು ವರ್ಷಕ್ಕೂ ಹೆಚ್ಚು ಸಮಯ ಜೈಲಿನಲ್ಲಿಟ್ಟಿದ್ದ ಜೆಎನ್‌ಯು ವಿದ್ಯಾರ್ಥಿಗಳಾದ ದೇವಾಂಗನಾ ಕಲಿತಾ ಮತ್ತು ನತಾಶಾ ನರ್ವಾಲ್ ಹಾಗೂ ಜಾಮಿಯ ಮಿಲಿಯ ವಿದ್ಯಾರ್ಥಿ ಅಸಿಫ್ ತನ್ಹಾರವನ್ನು ಬಿಡುಗಡೆ ಮಾಡಲು ಮತ್ತೆ 36 ಗಂಟೆ ತಗೊಂಡಿತು. ಈ ನಡುವೆ ದಿಲ್ಲಿ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ, ದಿಲ್ಲಿ ಹೈಕೋರ್ಟಿನ ಆದೇಶಕ್ಕೆ ತಡೆಯಾಜ್ಞೆ ನೀಡಬೇಕು ಎಂದು ಕೋರಿ ಸುಪ್ರಿಂ ಕೋರ್ಟಿಗೆ ಅರ್ಜಿ ಸಲ್ಲಿಸಿತು.




ಸೆರೆವಾಸದಿಂದ ಸದ್ಯಕ್ಕೆ ಹೊರಬಂದಿರುವ ಅಸಿಫ್ ತನ್ಹ, ದೇವಾಂಗನಾ ಕಲಿತಾ, ನತಾಶಾ ನರ್ವಾಲ್–ತಿಹಾರ್ ಜೈಲಿನ ಹೊರಗೆ

ಈ ಬಗ್ಗೆ ಟಿಪ್ಪಣಿ ಮಾಡುತ್ತ “ಗೃಹಮಂತ್ರಿ ಅಮಿತ್ ಷಾ ಅಡಿಯಲ್ಲಿ ದಿಲ್ಲಿ ಪೋಲಿಸ್ ನ್ಯಾಯಾಲಯದ ಆದೇಶವನ್ನು ನಿರರ್ಥಕಗೊಳಿಸಲು ಎಂತಹ ಮಟ್ಟಕ್ಕೆ ಇಳಿಯುತ್ತಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಹೇಳಿದ್ದಾರೆ.

ಈ ಮೂವರು ವಿದ್ಯಾರ್ಥಿ ಪ್ರತಿಭಟನಾಕಾರರನ್ನು ಜೈಲಿನಲ್ಲೇ ಮುಂದುವರೆಸುವ ದಿಲ್ಲಿ ಪೋಲೀಸಿನ ಪ್ರಯತ್ನ ಸದ್ಯಕ್ಕೆ ವಿಫಲವಾಗಿದೆ. ಜೂನ್ 17ರಂದು ಈ ಮೂವರನ್ನೂ ಬಿಡುಗಡೆ ಮಾಡಲೇ ಬೇಕಾಗಿ ಬಂದಿದೆ.

ಸುಪ್ರಿಂ ಕೋರ್ಟ್ ಕೂಡ ಸದ್ಯಕ್ಕೆ ತಾನು ದಿಲ್ಲಿ ಹೈಕೋರ್ಟಿನ ಆದೇಶವನ್ನು ತಡೆ ಹಿಡಿಯುವುದಿಲ್ಲ, ಸರಕಾರದ ಅರ್ಜಿಯ ವಿವರವಾದ ವಿಚಾರಣೆಯನ್ನು ಜುಲೈ 19ರಿಂದ ಆರಂಭವಾಗುವ ವಾರದಲ್ಲಿ ಎತಿಕೊಳ್ಳಲಾಗುವುದು ಎಂದಿದೆ.

# ಜೂನ್ 26:“ಕೃಷಿ ಉಳಿಸಿ–ಪ್ರಜಾಪ್ರಭುತ್ವ ಉಳಿಸಿ”ದಿನಾಚರಣೆ– ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಕರೆ

**ಜೂನ್ 14, 2021ರಂದು ಸಂಯುಕ್ತ ಕಿಸಾನ್ ಮೋರ್ಚಾದ ನೇತೃತ್ವದಲ್ಲಿ ರೈತರು ರಾಷ್ಟ್ರೀಯ ರಾಜಧಾನಿ ದಿಲ್ಲಿಗೆ ಹೋಗುವ ಹೆದ್ದಾರಿಗಳಲ್ಲಿ ಕೂತು ನಡೆಸುತ್ತಿರುವ ಸತತ ಪ್ರತಿಭಟನೆ 200 ದಿನಗಳನ್ನು ಪೂರ್ಣಗೊಳಿಸಿದೆ. ಈ ಚಳುವಳಿಗೆ ಏಳು ತಿಂಗಳುಗಳಾಗುವ ಜೂನ್ 26, 2021ನ್ನು ದೇಶಾದ್ಯಂತ “ಕೃಷಿ ಉಳಿಸಿ–ಪ್ರಜಾಪ್ರಭುತ್ವ ಉಳಿಸಿ” ದಿನವಾಗಿ ಆಚರಿಸಲು ಹತ್ತು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ತಮ್ಮ ಸದಸ್ಯರಿಗೆ ಮತ್ತು ಎಲ್ಲ ಜನವಿಭಾಗಗಳಿಗೆ ಕರೆ ನೀಡಿವೆ.**

ಜೂನ್ 26 ದೇಶದ ಪ್ರಖ್ಯಾತ ರೈತ ನೇತಾರ ಸ್ವಾಮಿ ಸಹಜಾನಂದ ಸರಸ್ವತಿಯವರ ಮರಣ ವಾರ್ಷಿಕದ ದಿನವೂ ಆಗಿದೆ.

ರೈತರು ಮೂರು ಕೃಷಿ ಕಾಯ್ದೆಗಳನ್ನು ರದ್ದುಗೊಳಿಸಬೇಕು ಮತ್ತು ವಿದ್ಯುತ್ (ತಿದ್ದುಪಡಿ) ಸುಗ್ರೀವಾಜ್ಞೆಯನ್ನು ಹಿಂದಕ್ಕೆ ಪಡೆಯಬೇಕು ಹಾಗೂ ಕನಿಷ್ಟ ಬೆಂಬಲ ಬೆಲೆಗಳಿಗೆ ಕಾನೂನಿನ ಖಾತ್ರಿ ಕೊಡಬೇಕು ಎಂದು ಆಗ್ರಹಿಸಿ ಈ 200ದಿನಗಳಲ್ಲಿ ಕೊರೆಯುವ ಚಳಿ, ಸುಂಟರಗಾಳಿ, ಸುಡುಬಿಸಲು ಮತ್ತು ಈಗ ಮಳೆಯನ್ನು ಎದುರಿಸಿ ಈ ಹೋರಾಟವನ್ನು ನಡೆಸಿದ್ದಾರೆ, ಮುಂದುವರೆಸಿಕೊಂಡು ಹೋಗುತ್ತಿದ್ದಾರೆ, ತಮ್ಮ 500 ಸಂಗಾತಿಗಳನ್ನು ಇದುವರೆಗೆ ಕಳಕೊಂಡಿದ್ದಾರೆ. ಆದರೆ ಕಾರ್ಪೊರೇಟ್–ಪರವಾದ ಕೇಂದ್ರ ಸರಕಾರ ಈ ಮೂರು ಕಾಯ್ದೆಗಳು ಮತ್ತು ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಮುಂದೊತ್ತಲು ಟೊಂಕ ಕಟ್ಟಿ ನಿಂತಿದೆ. ಇದರ ವಿರುದ್ಧ ಜೂನ್ 26 ರಂದು ಈ ಕಾರ್ಯಾಚರಣೆ ನಡೆಸಲು ಕೇಂದ್ರೀಯ ಕಾಮಿಕ ಸಂಘಟನೆಗಳು ನಿರ್ಧರಿಸಿವೆ.

ಈ ರೈತ ಹೋರಾಟವಲ್ಲದೆ, ದೇಶ ಇಂದು ಅನುಭವಿಸುತ್ತಿರುವ ಸರ್ವಾಧಿಕಾರಶಾಹೀ ಬಿಜೆಪಿ ಆಳ್ವಿಕೆ ಮತ್ತು ಅದರ ಅಘೋಷಿತ ತುರ್ತು ಪರಿಸ್ಥಿತಿಯ ವಿರುದ್ಧ ಇನ್ನೂ ಹಲವು ಹೋರಾಟಗಳು ನಡೆಯುತ್ತಿವೆ. ಪುಟ್ಟ ದ್ವೀಪ ಲಕ್ಷದ್ವೀಪದ ನಿವಾಸಿಗಳೂ ಬಿಜೆಪಿಯ ಸರ್ವಾಧಿಕಾರಶಾಹೀ ನಡಾವಳಿಯ ವಿರುದ್ಧ ದನಯೆತ್ತಿದ್ದಾರೆ. ಇನ್ನು ಕೊವಿಡ್–19ರ ವಿನಾಶಕಾರೀ ಎರಡನೇ ಅಲೆಯನ್ನು ಎದುರಿಸುವಲ್ಲಿಯಂತೂ ಈ ಸರಕಾರ ಸಂಪೂರ್ಣ ಗೊಂದಲವನ್ನೇ ಸೃಷ್ಟಿಸಿದೆ.

ಆದ್ದರಿಂದ ಜೂನ್ 26ರಂದು ದೇಶಾದ್ಯಂತ ಜಿಲ್ಲೆಗಳ, ತಹಸೀಲುಗಳ ಮಟ್ಟದ ಪ್ರತಿಭಟನೆಗಳಲ್ಲದೆ, ವಿವಿಧ ರಾಜ್ಯಗಳಲ್ಲಿ ರಾಜಭವನಗಳ ಮುಂದೆ ಧರಣಿ ನಡೆಸಲಾಗುವುದು ಎಂದು ಈ ಕೇಂದ್ರೀಯ ಕಾರ್ಮಿಕ ಸಂಘನೆಗಳು ಹೇಳಿವೆ.

ಈ “ಕೃಷಿ ಉಳಿಸಿ– ಪ್ರಜಾಪ್ರಭುತ್ವ ಉಳಿಸಿ” ದಿನಾಚರಣೆಯ ಏಳು ಬೇಡಿಕೆಗಳು ಹೀಗಿವೆ:

1.ನಾಲ್ಕು ಕಾರ್ಮಿಕ ಸಂಹಿತೆಗಳು, ಮೂರು ಕೃಷಿ ಕಾಯ್ದೆಗಳು ಮತ್ತು ವಿದ್ಯುತ್ (ತಿದ್ದುಪಡಿ) ಸುಗ್ರೀವಾಜ್ಞೆಯನ್ನು ರದ್ದು ಮಾಡಬೇಕು;

2.ರೈತರ ಉತ್ಪನ್ನಗಳಿಗೆ ಕನಿಷ್ಟ ಬೆಂಬಲ ಬೆಲೆಗಳಿಗೆ ಕಾನೂನಾತ್ಮಕ ಖಾತ್ರಿಯನ್ನು ಕೊಡಬೇಕು;

3.ಒಂದು ನಿರ್ದಿಷ್ಟ ಸಮಯ ಚೌಕಟ್ಟಿನಲ್ಲಿ ಸಾರ್ವತ್ರಿಕ ಉಚಿತ ಲಸಿಕೀಕರಣ;

4.ಅಗತ್ಯವಿರುವ ಪ್ರತಿವ್ಯಕ್ತಿಗೂ 10 ಕೆಜಿ ಆಹಾರ ಧಾನ್ಯಗಳನ್ನು ಮತ್ತು ಆದಾಯ ತೆರಿಗೆ ವ್ಯಾಪ್ತಿಯ ಹೊರಗಿರುವ ಪ್ರತಿ ಕುಟುಂಬಕ್ಕೆ ಪ್ರತಿ ತಿಂಗಳು ರೂ.7500 ಕೊಡಬೇಕು;

5.ಸಾರ್ವಜನಕ ವಲಯದ ಉದ್ದಿಮೆಗಳು ಮತ್ತು ಸರಕಾರೀ ಇಲಾಖೆಗಳ ಖಾಸಗೀಕರಣದ ನೀತಿಯನ್ನು ಹಿಂದಕ್ಕೆ ಪಡೆಯಬೇಕು.

6.ರೈಲ್ವೆ, ರಸ್ತೆ ಸಾರಿಗೆ, ಕಲ್ಲಿದ್ದಲು, ರಕ್ಷಣೆ, ಉಕ್ಕು ಪ್ರಾಧಿಕಾರ (ಸೇಲ್), ಬಿಹೆಚ್‌ಇಎಲ್, ದೂರಸಂಪರ್ಕ ಮತ್ತು ಅಂಚೆ ಸೇವೆಗಳು, ಬ್ಯಾಂಕುಗಳು, ವಿಮೆ, ವಿದ್ಯುತ್, ನೀರು, ಶಿಕ್ಷಣ, ಆರೋಗ್ಯ ಸೇವೆಗಳು, ಭವಿಷ್ಯ ನಿಧಿ ಸಂಘಟನೆ, ಬಂದರು ಮತ್ತು ಹಡಗುಕಟ್ಟೆಗಳಲ್ಲಿ ರಾತ್ರಿ–ಹಗಲೆನ್ನದೆ ದುಡಿಯುತ್ತಿರುವ ಸರಕಾರಿ ಮತ್ತು ಸಾರ್ವಜನಿಕ ವಲಯದ ನೌಕರರನ್ನು ಮುಂಚೂಣಿಯ ಸಿಬ್ಬಂದಿ ಎಂದು ಪರಿಗಣಿಸಿ ಅದಕ್ಕನುಗುಣವಾಗಿ ಅವರಿಗೆ ಪರಿಹಾರ ನೀಡಬೇಕು.

7.ಆಶಾ, ಅಂಗನವಾಡಿ ನೌಕರರು, ಸಫಾಯಿ ಕಾರ್ಮಿಕರು ಸೇರಿದಂತೆ ಎಲ್ಲ ಮುಂಚೂಣಿಯ ಕಾರ್ಯಕರ್ತರಿಗೆ ರೂ. 50 ಲಕ್ಷ ವಿಮೆ ಮತ್ತು ಕೊವಿಡ್–19ರಿಂದಾಗಿ ಸತ್ತಿರುವ ಕಾರ್ಮಿಕರ ಕುಟುಂಬಗಳಿಗೆ ಸಾಕಷ್ಟು ಪರಿಹಾರ ಕೊಡಬೇಕು.

ಐಎನ್‌ಟಿಯುಸಿ, ಎಐಟಿಯುಸಿ, ಹೆಚ್‌ಎಂಎಸ್, ಸಿಐಟಿಯು, ಎಐಯುಟಿಯುಸಿ, ಟಿಯುಸಿಸಿ, ಎಸ್‌ಇಡಬ್ಲ್ಯುಎ, ಎಐಸಿಸಿಟಿಯು, ಎಲ್‌ಪಿಎಫ್ ಮತ್ತು ಯುಟಿಯುಸಿ ಜೂನ್ 26ರ ಈ ದೇಶವ್ಯಾಪಿ ಕಾರ್ಯಾಚರಣೆಗೆ ಜಂಟಿಯಾಗಿ ಕರೆ ನೀಡಿವೆ.

ಸಂಪಾದಕೀಯ

# ಉದ್ಯೋಗ ಖಾತ್ರಿ ಯೋಜನೆ ಉಳಿಸಲು, ಜೂನ್ 21 ರಂದು ಪ್ರತಿಭಟನೆ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕೆಲಸಗಾರರಿಗೆ ಜಾತಿ ಆಧಾರದಲ್ಲಿ ತಾರತಮ್ಯ ಮಾಡುವುದನ್ನು ವಿರೋಧಿಸಿ ದೇಶಾದ್ಯಂತ ಪ್ರತಿಭಟನೆ.

ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ ಅಡಿಯಲ್ಲಿ ಕೆಲಸ ಮಾಡುವ ಕೆಲಸಗಾರರಿಗೆ ವೇತನ ನೀಡುವಾಗ ತಾರತಮ್ಯ ಮಾಡುವ ಸರ್ಕಾರದ ಉದ್ದೇಶವನ್ನು ಬಲವಾಗಿ ಖಂಡಿಸಬೇಕು ಹಾಗೂ ದೇಶಾದ್ಯಂತ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಮತ್ತು ದಲಿತ ಶೋಷಣ್ ಮುಕ್ತಿ ಮೊರ್ಚಾದ ನೇತೃತ್ವದಲ್ಲಿ ಜೂನ್ 21 ರಂದು ಪ್ರತಿಭಟಿಸಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಲಾಗುತ್ತಿದೆ. ಉದ್ಯೋಗ ಖಾತ್ರಿ ವೇತನವನ್ನು ಜಾತಿ ಆಧಾರದಲ್ಲಿ ವಿಭಜಿಸುವುದು ಮತ್ತು ಅವರಲ್ಲಿ ಎಸ್.ಸಿ., ಎಸ್.ಟಿ. ಮುಂತಾದ ತಾರತಮ್ಯ ಮಾಡುವುದು ಎಂದಿಗೂ ಸಮರ್ಥನೀಯವಲ್ಲ.

ಇದರಿಂದಾಗಿ ಸಮಾನ ವೇತನ ಪಡೆಯಬೇಕಾದ ಕೆಲಸಗಾರರಿಗೆ ತಾರತಮ್ಯ ಮಾಡಿದಂತಾಗುವುದು. ವೇತನ ಪಾವತಿಯಲ್ಲಿ ಅನಗತ್ಯ ವಿಳಂಬ ಆಗುವುದು. ವೇತನ ಪಾವತಿಯ ಪ್ರಕ್ರಿಯೆಯಲ್ಲಿ ಯಾವ ಸದುದ್ದೇಶವಿಲ್ಲದ ಗೊಂದಲಕ್ಕೆ ಆಸ್ಪದ ಮಾಡಿದಂತಾಗುವುದು. ಇದರಿಂದ ಸಮಾನ ವೇತನ ಪಾವತಿಯ ಸಿದ್ಧಾಂತಕ್ಕೆ ಧಕ್ಕೆಯಾಗುವುದು. ಎಸ್.ಸಿ., ಎಸ್.ಟಿ., ಕೆಲಸಗಾರರ ಹಕ್ಕುಗಳಿಗೆ ಅನ್ಯಾಯವಾಗುವುದು.

ಆದ್ದರಿಂದ ಇಲಾಖೆಯ ಈ ಅನಗತ್ಯ ಶಿಫಾರಸನ್ನು ಹಿಂಪಡೆಯಬೇಕೆಂದು ಈ ಮೂಲಕ ಒತ್ತಾಯಿಸಲಾಗುತ್ತಿದೆ. ಬದಲಾಗಿ ಪ್ರತಿಯೊಂದು ಕೆಲಸ ಬಯಸುವ ಕುಟುಂಬಕ್ಕೆ ವರ್ಷದಲ್ಲಿ 200 ದಿನಗಳ ಕೆಲಸ ನೀಡಬೇಕೆಂದೂ ದಿನದ ವೇತನವನ್ನು ರೂ. 600 ಕ್ಕೆ ಏರಿಸಬೇಕೆಂದು ಆಗ್ರಹಿಸಲಾಗುವುದು. ಅಲ್ಲದೆ ಕೆಲಸಗಾರರಿಗೆ ಬಾಕಿ ಇರುವ ವೇತನವನ್ನು ಕೂಡಲೇ ಪಾವತಿ ಮಾಡಬೇಕೆಂದೂ ವೇತನ ಪಾವತಿ ಮಾಡುವುದನ್ನು ತಪ್ಪದೆ ವಿಳಂಬಮಾಡದೆ ಸಂದಾಯ ಮಾಡಬೇಕೆಂದು ಒತ್ತಾಯಿಸಲಾಗುವುದು.

ಕಾರ್ಮಿಕರು ಅಗತ್ಯ ದೈಹಿಕ ಅಂತರ ಕಾಪಾಡಿ ಕೋವಿಡ್–19 ಕ್ಕೆ ಸಂಬಂಧಪಟ್ಟ ನಿಯಮಗಳನ್ನು ತಪ್ಪದೆ ಪಾಲಿಸಬೇಕು. ಗಮನ ನೀಡಬೇಕು. ಅಧಿಕಾರಿಗಳು ಕೆಲಸ ನೀಡದಿದ್ದರೆ ಪ್ರತಿಭಟಿಸಲು ಹಿಂದೇಟು ಹಾಕಬಾರದು. ಕೆಲಸ ನೀಡುವುದನ್ನು ತಿರಸ್ಕರಿಸಲು ಯಾರಿಗೂ ಅಧಿಕಾರವಿಲ್ಲ. ಕೇಂದ್ರ ಗ್ರಾಮೀಣ ಅಭಿವೃದ್ಧಿ ಖಾತೆಯ ಸಚಿವರಿಗೆ ಪ್ರತಿಭಟನಾ ಮನವಿಯನ್ನು ಕಳುಹಿಸಬೇಕು. ದಲಿತ ಕೆಲಸಗಾರರಿಗೆ ದ್ರೋಹವಾಗುವುದನ್ನು ತಡೆಯಬೇಕು.

# ಕೋವಿಡ್ ಹಾಗೂ ಲಾಕ್ ಡೌನ್‌ಗಳ ದುಸ್ಥಿತಿಗೆ ಪರಿಹಾರಗಳ ಸಮರ್ಪಕ ಪ್ಯಾಕೇಜ್‌ಗಾಗಿ ಒತ್ತಾಯ

ಕೇಂದ್ರ ಹಾಗೂ ರಾಜ್ಯ ಸರಕಾರಗಳು ತಜ್ಞರ ಸೂಚನೆಯಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳದೇ ನಿರ್ಲಕ್ಷ್ಯ ವಹಿಸಿದ್ದರಿಂದ, ಕೋವಿಡ್ – 19 ರ ಎರಡನೇ ಅಲೆಯ ಬಾಧೆಗೆ ದೇಶ ಹಾಗೂ ರಾಜ್ಯವು ತುತ್ತಾಗಬೇಕಾಯಿತು. ಈ ದುಸ್ಥಿತಿ ಮತ್ತಷ್ಟು ಉಲ್ಬಣಗೊಳ್ಳಲು ಯಾವುದೇ ಪೂರ್ವಬಾವಿ ಕ್ರಮಗಳನ್ನು ಕೈ ಗೊಳ್ಳದೇ ಮೇಲಿಂದ, ಮೇಲೆ ಲಾಕ್ ಡೌನ್ ಗಳನ್ನು ಹೇರಲಾದದು ಕೂಡಾ ರಾಜ್ಯದ ಜನತೆಯನ್ನು ಆರ್ಥಿಕವಾಗಿ ಅತ್ಯಂತ ದುಸ್ಥಿತಿಗೀಡು ಮಾಡಿತಲ್ಲದೇ ಕೋವಿಡ್ ಮತ್ತಷ್ಟು ವಿಸ್ತಾರಗೊಳ್ಳಲು ನೆರವಾಯಿತು. ಇದರಿಂದಾಗಿ ರಾಜ್ಯದಲ್ಲಿ ಹಲವು ಶೂಸ್ರುಸೆಗಳ ಕೊರತೆಯುಂಟಾಗಿ ಸಾವಿರಾರು ಅಮಾಯಕರು ಪ್ರಾಣಕಳೆದುಕೊಳ್ಳುವಂತಾಯಿತೆಂಬುದು ಸರ್ಕಾರದ ಗಮನಕ್ಕಿದೆ.

ಇದಲ್ಲದೇ, ಜನರ ಮೇಲೆ ಪೆಟ್ರೋಲಿಯಂ ಉತ್ಪನ್ನಗಳ ಮತ್ತು ವಿದ್ಯುತ್ ದರ ಹಾಗೂ ರಸಾಯನಿಕ ಗೊಬ್ಬರಗಳ ಮತ್ತು ಇವುಗಳಿಂದಾಗಿ ಸಾರಿಗೆ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆಯ ಹೊರೆಯನ್ನು ಹೇರಲಾಗಿದೆ.

ಕೃಷಿ ಭೂಮಿ ಹಾಗೂ ಎಲ್ಲರ ಕಸುಬುಗಳನ್ನು, ಕಸಿಯುವ ಮತ್ತು ಕಾರ್ಮಿಕರನ್ನು ಹಾಗೂ ಗ್ರಾಹಕ ಸಮುದಾಯಗಳನ್ನು ಲೂಟಿಗೊಳಪಡಿಸಲು, ಕಾರ್ಪೊರೇಟ್ ಕಂಪನಿಗಳ ಪರವಾದ ಕಾಯ್ದೆಗಳನ್ನು ಮತ್ತು ವಿದ್ಯುತ್, ಸಾರಿಗೆ, ಹಣಕಾಸು ಮುಂತಾದ ಸಾರ್ವಜನಿಕ ಉದ್ದಿಮೆಗಳನ್ನು ಕಾರ್ಪೊರೇಟ್ ಲೂಟಿಗೆ ತೆರೆಯಲಾಗಿದೆ. ಜನರ ಈ ಗಂಭೀರ ದುಸ್ಥಿತಿಯ ಸಂದರ್ಭದಲ್ಲಿಯೇ, ವಿರೋಧದ ನಡುವೆ ಅವುಗಳ ಜಾರಿಯ ಕ್ರೌರ್ಯವನ್ನು ಮೆರೆಯುತ್ತಿರುವುದು ತೀವ್ರ ಖಂಡನೀಯ.

ಇವುಗಳ ಜೊತೆ, ಆಡಳಿತ ಪಕ್ಷದ ತಮ್ಮ ಕೆಲ ಶಾಸಕರು, ಸಂಘಪರಿವಾರದ ಶಕ್ತಿಗಳು, ಬೆಡ್, ಔಷಧಿ, ಲಸಿಕೆ, ಆಮ್ಲಜನಕಗಳ ಕಾಳಸಂತೆಯಲ್ಲಿ ತೊಡಗಿವೆ ಮತ್ತು ಜಾತಿ ಹಾಗೂ ರಾಜಕೀಯ ತಾರತಮ್ಯ ಎಸಗಿವೆ.

ಜನರ ಪ್ರಾಣ ಹಾಗೂ ಆರೋಗ್ಯಕ್ಕಿಂತಲೂ, ಕಾರ್ಪೊರೇಟ್ ಲೂಟಿಯೇ ಸರಕಾರಗಳಿಗೆ ಮುಖ್ಯವಾಗಿರುವುದು ವಿಷಾಧನೀಯವಾಗಿದೆ.

ಈ ಎಲ್ಲ ದುಷ್ಪರಿಣಾಮಗಳನ್ನು ರಾಜ್ಯದ ದುಡಿಯುವ ಜನರು ವರ್ತಕರು ಹಾಗೂ ಕೈಗಾರಿಕೆಗಳು, ಅಸಹಾಯಕರು, ದಲಿತರು, ಆದಿವಾಸಿಗಳು, ಮಹಿಳೆಯರು, ತೀವ್ರವಾಗಿ ಅನುಭವಿಸುತ್ತಿದ್ದಾರೆ.

ಇಂತಹ ಕೊಲೆಪಾತಕ ದುಸ್ಥಿತಿಗಳಿಗೆ ಕಾರಣವಾದ ತಮ್ಮ ಸರಕಾರಗಳೇ ಜನತೆಗೆ ಪರಿಹಾರ ನೀಡಬೇಕು ಎಂದು ಒತ್ತಾಯ.

ಜನರ ಒತ್ತಡಕ್ಕೆ ಮಣಿದು, ಒಲ್ಲದ ಮನಸ್ಸಿನಿಂದ ಅಗ್ಗದ ಪ್ರಚಾರ ಪಡೆಯಲು ಕೇವಲ 1,423 ಕೋಟಿ ರೂಗಳ ಪರಿಹಾರದ ಎರಡು ಅಸಮರ್ಪಕ ಪ್ಯಾಕೇಜ್ ಗಳನ್ನು ತಾವು ಘೋಷಿಸಿದ್ದೀರಿ. ಇವುಗಳು ಯಾವುದೇ ರೀತಿಯಲ್ಲೂ ಜನತೆಯ ಕೋವಿಡ್ ಮತ್ತಿತರೇ ಭಾರೀ ಆರ್ಥಿಕ ಸಂಕಷ್ಟಕ್ಕೆ ಪರಿಹಾರಗಳಾಗಿಲ್ಲ ಎಂದು ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳು ಸ್ಪಷ್ಟಪಡಿಸುತ್ತೇವೆ.

ಜನತೆಯ ಒತ್ತಾಯ ಹಾಗೂ ಸುಪ್ರಿಂ ಕೋರ್ಟ ಮಧ್ಯಪ್ರವೇಶಕ್ಕೆ ಮಣಿದು 18 ವರ್ಷಕ್ಕೆ ಮೇಲಿನವರಿಗೆ ಉಚಿತ ಲಸಿಕೆ ನೀಡುವುದಾಗಿ ಕೇಂದ್ರ ಸರಕಾರ ಹೇಳಿರುವುದು ದೇಶದ ಜನತೆಯ ಹೋರಾಟಕ್ಕೆ ದೊರೆತ ಜಯವಾಗಿದೆ. ಆದರೇ, ಲಾಕ್ ಡೌನ್ ಪರಿಹಾರವಾಗಿ ಕೇಂದ್ರ ಸರಕಾರ ನೀಡಿರುವುದು ಕೇವಲ 10 ಇರ ಮುಗ್ಗುಲು ಅಕ್ಕಿ ಮಾತ್ರವೇ? ಇತರ ಪರಿಹಾರದ ಘೋಷಣೆ ಮಾಡಲಿಲ್ಲ. ಇಂತಹ ಸಂಕಷ್ಟದ ಸಂದರ್ಭದಲ್ಲೂ ರಾಜ್ಯಗಳಿಗೆ ಕೊಡಬೇಕಾದ ಜಿಎಸ್ ಟಿ ಪಾಲನ್ನು ನೀಡದೇ ಸತಾಯಿಸುತ್ತಿರುವುದು ಹೇಯ ವರ್ತನೆಯಾಗಿದೆ. ರಾಜ್ಯ ಸರಕಾರ ಬಡವರಿಗೆ ನೀಡುವ ಅಕ್ಕಿಯ ಕಡಿತವನ್ನು ಹಿಂಪಡೆದಿಲ್ಲ. ಹೊಲಗಳಲ್ಲಿ ಕೊಳೆಯಲು ಬಿಟ್ಟ ಉತ್ಪನ್ನಗಳಿಗೆ ಸೂಕ್ತ ಪರಿಹಾರ ಈಗಲೂ ನೀಡಿಲ್ಲ. ಕೂಲಿಕಾರರು, ರೈತರು, ಕಸುಬುದಾರರು, ಕಾರ್ಮಿಕರು, ವಿದ್ಯಾವಂತ ನಿರುದ್ಯೋಗಿಗಳಿಗೆ ನೆರವಿಲ್ಲ.

ಇಡೀ ರಾಜ್ಯದ 6.8 ಕೋಟಿ ಜನತೆ ಕೋವಿಡ್ ಸಂಕಟದಲ್ಲಿದ್ದರೇ ರಾಜ್ಯ ಸರಕಾರ ಕೇವಲ 5 ಲಕ್ಷ ಜನರಿಗೆ ಮಾತ್ರವೇ ಪರಿಹಾರ ಘೋಷಿಸಿದೆ. ಕುಟುಂಬಕ್ಕೊಬ್ಬರಿಗೆ ಮಾತ್ರವೇ ಪರಿಹಾರವೆಂಬ ತಮ್ಮ ಸರಕಾರದ ನೀತಿಯಿಂದ ಬಹುತೇಕರು ಬೇಸ್ತು ಬೀಳಲಿದ್ದಾರೆ.

ಕೇರಳ, ತಮಿಳ್ನಾಡು, ಆಂಧ್ರ ರಾಜ್ಯಗಳಂತೆ ಪರಿಹಾರಗಳನ್ನು ನೀಡಿ ಜನರನ್ನು ರಕ್ಷಿಸಲು ಮರಳಿ ಎಡಪಕ್ಷಗಳು ಒತ್ತಾಯಿಸಿವೆ.

**ಹಕ್ಕೊತ್ತಾಯಗಳು:**

1) ಉಚಿತ ಹಾಗೂ ಸಾರ್ವತ್ರಿಕ ಲಸಿಕೀಕರಣಕ್ಕೆ ಕೂಡಲೇ ಕ್ರಮವಹಿಸಬೇಕು.
2) ಈ ಕೆಳಕಂಡ ಅಂಶಗಳನ್ನು ಒಳಗೊಂಡ ಸಮಗ್ರ ಪರಿಹಾರದ ಪ್ಯಾಕೇಜ್ ಮೊತ್ತವನ್ನು ಘೋಷಿಸಬೇಕು. ಕೇಂದ್ರ ಸರಕಾರ ನೀಡಬೇಕಾದ ಜಿಎಸ್ ಟಿ ಪಾಲನ್ನು ಪಡೆಯಬೇಕು.

ಅ) ಬೆಡ್, ಲಸಿಕೆ, ಔಷದಿ, ಆಮ್ಲಜನಕಗಳ ಹಗರಣಗಳು, ಜಾತಿ ಹಾಗೂ ರಾಜಕೀಯ ತಾರತಮ್ಯದ ಪ್ರಕರಣಗಳನ್ನು ಸ್ವತಂತ್ರ ಉನ್ನತ ನ್ಯಾಯಾಂಗ ತನಿಖೆಗೊಳಪಡಿಸ ಬೇಕು. ಈ ಅರೋಪಿ ಶಾಸಕರಿಂದ ರಾಜಿನಾಮೆಗಳನ್ನು ಪಡೆಯಬೇಕು. ಈ ಕಾರಣಗಳಿಂದ ಸತ್ತ ಎಲ್ಲ ನಾಗರೀಕರಿಗೆ ಮತ್ತು ಅನಾಥ ಮಕ್ಕಳಿಗೆ ಪರಿಹಾರ ನೀಡಬೇಕು.

ಆ) ಆದಾಯ ತೆರಿಗೆಯಡಿ ಬಾರದ ಎಲ್ಲಾ ಕುಟುಂಬಗಳಿಗೆ ಮಾಸಿಕ ತಲಾ 10 ಕೇಜಿ ಸಮಗ್ರ ಆಹಾರಧಾನ್ಯ ಮತ್ತು ಆರೋಗ್ಯ ಸುರಕ್ಷತಾ ಸಾಮಗ್ರಿಗಳ ಪೊಟ್ಟಣವನ್ನು ಮತ್ತು ಕೇಂದ್ರ ಸರಕಾರದ ಸಹಾಯ ಪಡೆದು 10,000 ರೂ.ಗಳ ನೆರವನ್ನು ಕೋವಿಡ್ ನಿಯಂತ್ರಣಕ್ಕೆ ಬರುವವರೆಗೆ ನೀಡಬೇಕು. ದಲಿತರು, ಬಡವರ ಪ್ರದೇಶಗಳಲ್ಲಿ ಇಂದಿರಾ ಕ್ಯಾಂಟೀನ್ ಗಳನ್ನು ವಿಸ್ಥರಿಸಬೇಕು, ಬಲಗೊಳಿಸಬೇಕು. ಬಡವರಿಗೆ ನೀಡಲಾಗುವ ಪಡಿತರ ಕಡಿತವನ್ನು ವಾಪಾಸು ಪಡೆಯಬೇಕು.

ಇ) ಹೊಲಗಳಲ್ಲಿಯೇ ಕೊಳೆತು ಹೋದ ಹೂ, ಹಣ್ಣು, ಆಲುಗಡ್ಡೆ, ಈರುಳ್ಳಿ ಮುಂತಾದ ಬೆಳೆಗಳಿಗೆ, ಎಕರೆಗೆ ಕನಿಷ್ಠ 25,000 ರೂಗಳನ್ನು ಒದಗಿಸಬೇಕು ಮತ್ತು ರಾಜ್ಯದ ರೈತರು, ಕೂಲಿಕಾರರು, ಕಾರ್ಮಿಕರು, ಕಸುಬುದಾರರು, ದಲಿತರು, ಆದಿವಾಸಿಗಳು, ಅಲ್ಪ ಸಂಖ್ಯಾತರು ಮತ್ತು ಮಹಿಳೆಯರ ಎಲ್ಲ ರೀತಿಯ ಸಾಲಗಳನ್ನು ಕೇರಳದ ಋಣ ಮುಕ್ತ ಕಾಯ್ದೆ ಮಾದರಿಯಲ್ಲಿ ಮನ್ನಾ ಮಾಡಬೇಕು.

ಈ) ಕಾರ್ಮಿಕರಿಗೆ ಲಾಕ್ ಡೌನ್ ಕಾಲಾವಧಿಯ ವೇತನ ಮತ್ತು ಉದ್ಯೋಗ ರಕ್ಷಿಸಲು ಅಗತ್ಯ ಆದೇಶ ಹೊರಡಿಸಿ ಜಾರಿಗೊಳಿಸಬೇಕು.

ಉ) ಉದ್ಯೋಗ ಖಾತ್ರಿಯನ್ನು ನಗರಗಳಿಗೆ ಹಾಗೂ 200 ದಿನಗಳಿಗೆ ವಿಸ್ಥರಿಸಬೇಕು. ಕೂಲಿಯನ್ನು ಕೃಷಿ ರಂಗದ ವೇತನದಂತೆ 424 ರೂ. ಗಳಿಗೆ ಹೆಚ್ಚಿಸಬೇಕು.

ಊ) ಕೋವಿಡ್ ಮುಂಚೂಣಿಯ ಎಲ್ಲಾ ಕಾರ್ಯಕರ್ತರಿಗೆ ವಿಮೆ ಸೌಲಭ್ಯ– ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು. ಮಸಣ ಕೆಲಸಗಾರರು, ಮುನಿಸಿಪಲ್ ಮುಂತಾದ ಶುಚಿ ಕಾರ್ಯದಲ್ಲಿ ತೊಡಗಿದವರಿಗೂ ಸೌಲಭ್ಯಗಳನ್ನು ವಿಸ್ಥರಿಸಬೇಕು.

3) ಕೇಂದ್ರ ಸರಕಾರ ಜಾರಿಗೊಳಿಸುವ ಕಾರ್ಪೊರೇಟ್ ಕಂಪನಿಗಳ ಪರವಾದ ರೈತ ಹಾಗೂ ಕಾರ್ಮಿಕರ ಮತ್ತು ಗ್ರಾಹಕರ ವಿರೋಧಿಗಳಾದ ತಿದ್ದುಪಡಿ ಕೃಷಿ ಕಾಯ್ದೆಗಳು ಹಾಗೂ ಕಾರ್ಮಿಕ ಸಂಹಿತೆಗಳು, ಅಗತ್ಯ ವಸ್ತುಗಳ ತಿದ್ದುಪಡಿ ಕಾಯ್ದೆ – 2020, ವಿದ್ಯುತ್ ತಿದ್ದುಪಡಿ ಮಸೂದೆ– 2020 ಹಾಗೂ ರಾಜ್ಯ ಸರಕಾರದ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ – 2020, ಎಪಿಎಂಸಿ ತಿದ್ದುಪಡಿ ಕಾಯ್ದೆ – 2020, ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆ – 2020 ಗಳನ್ನು ತಕ್ಷಣ ಹಿಂಪಡೆಯ ಬೇಕು. ಸಾರ್ವಜನಕ ರಂಗದ ಉದ್ದಿಮೆಗಳ ಖಾಸಗೀಕರಣವನ್ನು ತಡೆಯಬೇಕು.
4) ಕನಿಷ್ಟ ಬೆಂಬಲ ಬೆಲೆ ಖಾತರಿಯ ಕಾಯ್ದೆ ಮತ್ತು ಪ್ರಕೃತಿ ವಿಕೋಪಗಳಿಂದ ರೈತರ ಸಂರಕ್ಷಣೆಗೆ ಋಣ ಮುಕ್ತ ಕಾಯ್ದೆ ಗಳನ್ನು ಜಾರಿಗೊಳಿಸಬೇಕು.

●

# ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಮಾಜಿ ಶಾಸಕ ಸೂರಂ ರಾಮಯ್ಯನವರಿಗೆ ಶ್ರದ್ಧಾಂಜಲಿ

103 ವರ್ಷಗಳ ಸಾರ್ಥಕ ಜೀವನ ನಡೆಸಿದ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲೂಕಿನ ಶ್ರೀ ಸೂ ರಂ ರಾಮಯ್ಯನವರು ಇಂದು ಬೆಳಿಗ್ಗೆ ಬೆಂಗಳೂರಿನ ಜಯನಗರದ ಅಪೋಲೋ ಆಸ್ಪತ್ರೆಯಲ್ಲಿ 3:30 ಕ್ಕೆ ವಯೋಸಹಜ ಕಾರಣಗಳಿಂದ ನಮ್ಮೆಲ್ಲರನ್ನು ಅಗಲಿದ್ದಾರೆ.

ವಿದ್ಯಾರ್ಥಿ ದೆಸೆಯಲ್ಲೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಅವರು ಗಾಂಧೀಜಿಯವರ ವಿಚಾರಧಾರೆ ಮತ್ತು ಅವರ ಕರೆಗಳಿಗೆ ಆಕರ್ಷಿತರಾಗಿದ್ದರು. ವಿದ್ಯಾಭ್ಯಾಸ ಮಾಡುವಾಗಲೇ ಚಳುವಳಿಯಲ್ಲಿ ಭಾಗವಹಿಸಿ ಸೆರೆವಾಸವನ್ನೂ ಅನುಭವಿಸಿದ್ದರು.

ಸ್ವಾತಂತ್ರ್ಯಾನಂತರ ನಡೆದ ಎರಡನೆಯ ವಿಧಾನಸಭಾ ಚುನಾವಣೆಯಲ್ಲಿ 1969-72 ರ ಅವಧಿಗೆ ಹೊಸಕೋಟೆ- ದೇವನಹಳ್ಳಿ ಜಂಟಿ ಕ್ಷೇತ್ರದಿಂದ ಶಾಸಕರಾಗಿ ಚುನಾಯಿತರಾಗಿದ್ದರು. ಗ್ರಾಮ ಪಂಚಾಯಿತಿ ಮತ್ತು ತಾಲೂಕು ಪಂಚಾಯಿತಿ ಗಳ ಅಧ್ಯಕ್ಷರಾಗಿ, ಜಿಲ್ಲಾ ಪಂಚಾಯತ್ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು.

ಸ್ವಾತಂತ್ರ್ಯ ನಂತರದ ದಿನಗಳಲ್ಲಿ ಸಾರ್ವಜನಿಕ ಜೀವನದಲ್ಲಿ ಸಕ್ರಿಯರಾಗಿದ್ದ ಅವರು ಹೊಸಕೋಟೆ ಪ್ರದೇಶದಲ್ಲಿ ನಡೆಯುತ್ತಿದ್ದ ಪ್ರಜಾಸತ್ತಾತ್ಮಕ ಜನ



ಚಳುವಳಿಗಳಲ್ಲಿ ವಿಶೇಷವಾಗಿ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ನಡೆದ ರೈತರ ಹೋರಾಟಗಳಲ್ಲಿ, ಕಾರ್ಮಿಕರ ಹೋರಾಟಗಳಲ್ಲಿ ಹಾಗೂ ಸಿಪಿಐ(ಎಂ) ಪಕ್ಷದ ಕಾರ್ಯಕ್ರಮ ಗಳಲ್ಲಿ ಭಾಗವಹಿಸುತ್ತಿದ್ದರು.

ನೂತನ ವಿದ್ಯುತ್ ಕಾಯ್ದೆ ಮತ್ತು ಮೀಟರೀಕರಣದ ವಿರುದ್ಧದ ಪ್ರಬಲ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಕರ್ನಾಟಕ ಪ್ರಾಂತ ರೈತ ಸಂಘದ ಬೆಂಗಳೂರು ಜಿಲ್ಲಾ ಸಮಿತಿಯ ಗೌರವಾಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಹಾಗೆಯೇ ಸಾಮಾಜಿಕ ಸಮಸ್ಯೆಗಳು, ಭ್ರಷ್ಟಾಚಾರದ ವಿರುದ್ಧವಾಗಿಯೂ ನಡೆದ ಹಲವು ಹೋರಾಟಗಳಲ್ಲಿ ಮತ್ತು ಹೋರಾಟ ರೂಪಿಸುವಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು.

ಶಿಕ್ಷಣ ಪ್ರೇಮಿಯಾಗಿದ್ದ ಅವರು ಸೂಲಿಬೆಲೆ ಒಳಗೊಂಡು ಆ ಪ್ರದೇಶದಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಜನಸಾಮಾನ್ಯರಿಗೆ ಶಿಕ್ಷಣವನ್ನು ನೀಡಿ ಸ್ವಾಭಿಮಾನ, ದೇಶಾಭಿಮಾನ ಮೂಡಿಸಲು ಶ್ರಮಿಸಿದ್ದರು. ಅದಕ್ಕಾಗಿ ವಿನಾಯಕ ವಿದ್ಯಾ ಅಭಿವೃದ್ಧಿ ಸಂಸ್ಥೆಯನ್ನು ಸ್ಥಾಪಿಸಿ ಅದರ ಸಂಸ್ಥಾಪಕ ಅಧ್ಯಕ್ಷರಾಗಿ ಶ್ರಮಿಸು ತ್ತಾ ಬಂದಿದ್ದರು.

ಸೂರಂ ರಾಮಯ್ಯನವರ ಅಗಲಿಕೆ ಯು ನಿಸ್ವಾರ್ಥತೆಯಿಂದ ತಮ್ಮನ್ನು ತೊಡಗಿಸಿಕೊಂಡ ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಜನಚಳುವಳಿಗಳ ನೆಚ್ಚಿನ ಒಡನಾಡಿ ಯನ್ನು ಕಳೆದುಕೊಂಡಂತಾಗಿದೆ.

ಸೂಲಿಬೆಲೆಯಲ್ಲಿ ಅವರ ಪಾರ್ಥಿವ ಶರೀರ ಕೋವಿಡ್ ನಿಯಮಗಳನ್ನು ಲಕ್ಷಿಸಿ ಸಾರ್ವಜನಿಕ ದರ್ಶನಕ್ಕೆ ಇಡಲಾಗಿದೆ. ನಾಳೆ 19.6.2021 ರಂದು ಬೆಳಿಗ್ಗೆ ಸೂಲಿಬೆಲೆಯಲ್ಲಿ ಅಂತ್ಯಸಂಸ್ಕಾರ ನೆರವೇರುವುದಾಗಿ ತಿಳಿದುಬಂದಿದೆ. ಅವರಿಗೆ ಐದು ಹೆಣ್ಣುಮಕ್ಕಳು ಮತ್ತು ಒಬ್ಬ ಮಗ, ಮೊಮ್ಮಕ್ಕಳು ಇದ್ದಾರೆ.

ನಾನು ಹೊಸಕೋಟೆಯಲ್ಲಿ ಇದ್ದ 1995 ನೇ ಇಸವಿಯಿಂದ 2006 ರ ವರೆಗಿನ ಅವಧಿಯಲ್ಲಿ ಡಿ.ವೈ. ಎಫ್.ಐ, ಎಸ್.ಎಫ್.ಐ. ಕರ್ನಾಟಕ ಪ್ರಾಂತ ರೈತ ಸಂಘ, ಸಿಐಟಿಯು ಮತ್ತು ಸಿಪಿಐ(ಎಂ) ಪಕ್ಷದ ಅನೇಕ ಹೋರಾಟಗಳು, ಕಾರ್ಯಕ್ರಮಗಳಲ್ಲಿ ಮತ್ತು ಅತ್ಯಂತ ಸಂದಿಗ್ಧ ಹಾಗೂ ಸಂಕೀರ್ಣವಾದ ಸವಾಲುಗಳ ಎದುರಿನಲ್ಲಿ ನಡೆದ ಹೋರಾಟಗಳಲ್ಲಿ ಭಾಗವಹಿಸಿ ಸ್ಪೂರ್ತಿ ತುಂಬಿದ್ದು ಸ್ಮರಣೀಯವಾಗಿದೆ.

ಹೊಸಕೋಟೆ ತಾಲೂಕು ನಲ್ಲಿ ಜೋಡಿ ಇನಾಮ್ತಿ ಗೆ ಪ್ರತಿರೋಧವಾಗಿ ನಡೆದ ಚಳುವಳಿಗಳನ್ನು ಒಳಗೊಂಡಂತೆ ನಿರಂತರ ಎಡ ಚಳುವಳಿಗಳು ಬೆಳೆದ ಪ್ರದೇಶವೂ ಆಗಿತ್ತು.

ಅಂದಿನ ದಿನಗಳಲ್ಲಿ ಹೊಸಕೋಟೆ ತಾಲೂಕು ರಾಜಕೀಯ ಹಿಂಸಾಚಾರ ಮತ್ತು ದಬ್ಬಾಳಿಕೆಗಳಿಗೆ ಕುಖ್ಯಾತಿ ಆಗಿದ್ದನ್ನು ಅಂತಹ ಸನ್ನಿವೇಶದಲ್ಲಿ ಜನ ಚಳುವಳಿಗಳು ಮುನ್ನಡೆಯಲು ಸೂರಂ ರಾಮಯ್ಯನವರ ಭಾಗವಹಿಸುವಿಕೆ, ನೇತೃತ್ವಗಳು ಆತ್ಮ ವಿಶ್ವಾಸ, ಸ್ಪೂರ್ತಿಯನ್ನು ತುಂಬುತ್ತಿದ್ದವು ಎನ್ನುವುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕು.

ಸೂರಂ ರಾಮಯ್ಯನವರ ಅಗಲಿಕೆ ಸ್ವಾತಂತ್ರ್ಯ ಸಂಗ್ರಾಮದ ಒಂದು ಪ್ರಮುಖ ಕೊಂಡಿಯನ್ನು, ಜನಸ್ನೇಹಿಯನ್ನು ಕಳೆದುಕೊಂಡಂತಾಗಿದೆ. ಅವರಿಗೆ ಭಾವಪೂರ್ವಕ ಶ್ರದ್ಧಾಂಜಲಿ ಗಳು, ಅಂತಿಮ ನಮನಗಳು.

*-ಎಸ್.ವೈ. ಗುರುಶಾಂತ್*

# ಮೆಣಸಿನಕಾಯಿ ಬೀಜದ ಕಾಳಸಂತೆ ಮಾರಾಟ ತಡೆಯಲು ಒತ್ತಾಯ

ಕರ್ನಾಟಕ ರಾಜ್ಯದಾದ್ಯಂತ ಒಣ ಮೆಣಸಿನ ಕಾಯಿ ಬೆಳೆಯನ್ನು ವ್ಯಾಪಕವಾಗಿ ಬೆಳೆಯಲು ರಾಜ್ಯದ ರೈತರು ಉತ್ಸುಕರಾಗಿದ್ದಾರೆ.

ಕಳೆದೆರಡು ವರ್ಷಗಳಿಂದ ಹಿಂದಿನ ದಿನ ಮಾನಗಳಿಗೆ ಹೋಲಿಸಿದರೇ ಸ್ವಲ್ಪ ಮಟ್ಟಿಗೆ ಹೆಚ್ಚಿನ ಇಳುವರಿ ಹಾಗೂ ಪರವಾಗಿಲ್ಲ ಎಂಬಂತ ದರವೂ ಸಿಗುತ್ತಲಿರುವುದರಿಂದ ಮತ್ತು ಇತರೆ ಬೆಳೆಗಳಿಗೆ ಹೋಲಿಸಿದರೇ, ಈ ಎರಡೂ ರೀತಿಯಲ್ಲೂ ಇದು ಪರವಾಗಿಲ್ಲ ಎಂಬ ಭಾವನೆಯನ್ನು ಉಂಟು ಮಾಡಿರುವುದರಿಂದ ಈ ಬಾರಿ ರಾಜ್ಯದಾದ್ಯಂತ ಬಹಳ ಮುಖ್ಯವಾಗಿ ಉತ್ತರ ಕರ್ನಾಟಕದ ತುಂಗಭದ್ರ, ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಈ ಬೆಳೆಯ ಪ್ರದೇಶವು ದ್ವಿಗುಣಗೊಳ್ಳುವಂತಾಗಿದೆ.

ಈ ರೀತಿ, ಈ ಬೆಳೆಯ ಕಡೆ ಹರಿದು ಬರುವ ರೈತರ ಪ್ರವಾಹವನ್ನು ಗಮನಿಸಿ ಮೆಣಸಿನಕಾಯಿ ಬೀಜ ಉತ್ಪಾದಕ ಕಂಪನಿಗಳು, ಕಾಳಸಂತೆಕೋರ ವ್ಯಾಪಾರಿಗಳು, ಮಾರುಕಟ್ಟೆಯಲ್ಲಿ ಬೀಜದ ಕೃತಕ ಅಭಾವ ಸೃಷ್ಟಿ ಮಾಡಿ, ಕಾಳಸಂತೆ ವ್ಯಾಪರದಲ್ಲಿ ತೊಡಗಿವೆ.

ಪರಿಣಾಮವಾಗಿ, ಬೀಜದ ಅಭಾವದಿಂದಾಗಿ ಆಕ್ರೋಶಿತರಾದ ರೈತರ ಮೇಲೆ ಲಾಠಿ ಪ್ರಹಾರ ಮಾಡುವಂತಹ ಪರಿಸ್ಥಿತಿ ಬಳ್ಳಾರಿಯಲ್ಲಿ ಕಳೆದೆರಡು ದಿನಗಳ ಹಿಂದೆ ಉಂಟಾಗಿದೆ.

ಉದಾಹರಣೆಗೆ, ಮೆಣಸಿನ ಕಾಯಿ ಬೀಜ ಮಾರಾಟ ಮಾಡುವ ಸಿಜೆಂಟಾ ಕಂಪನಿಯು ತಳಿ 5531 ಕ್ಕೆ ನಿಗದಿಸಲಾದ ಗರಿಷ್ಠ ಮಾರಾಟ ಬೆಲೆ ಕ್ವಿಂಟಾಲ್ ಒಂದಕ್ಕೆ 76,000 ರೂ. ಗಳೆಂದಿದ್ದರೂ, ಅದು ಹೊರಗಡೆ 92,000 ರೂ. ಗಳಂತೆ ಮಾರಾಟವಾಗುತ್ತದೆ.

ಅದೇ ರೀತಿ, ಅದೇ ಕಂಪನಿಯ ಮತ್ತೊಂದು ತಳಿ 2043, ಇದರ ಗರಿಷ್ಠ ಮಾರಾಟ ಬೆಲೆ 87,000 ರೂ ಗಳೆಂದಿದ್ದರೂ ಅದು ಹೊರಗಡೆ 1,51,000 ರೂಗಳಿಗೆ ಮಾರಾಟವಾಗುತ್ತದೆ.

ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲೂಕೊಂದರಲ್ಲೆ ಸುಮಾರು 71,000 ಹೆಕ್ಟಾರ್ ಅಥವಾ 1,77,000 ಎಕರೆ ಪ್ರದೇಶದಲ್ಲಿ ಈ ತಳಿಗಳಿಗೆ ಬೇಡಿಕೆ ಇದೆಯೆಂದು ತೋಟಗಾರಿಕೆ ಇಲಾಖೆ ಗುರುತಿಸಿದೆ. ವಾಸ್ತವದಲ್ಲಿ ಅದಕ್ಕೂ ಹೆಚ್ಚಿದೆ.

ಅಷ್ಟನ್ನೇ ಅಂದಾಜಿಸಿದರೂ, ತಲಾ ಎಕರೆಗೆ 100 ಗ್ರಾಂ ಬಿತ್ತನೆ ಬೀಜ ಅಗತ್ಯವೆಂದು ಪರಿಗಣಿಸಿದರೂ ಕೇವಲ ಈ ಪ್ರದೇಶಕ್ಕೆ 1770 ಕ್ವಿಂಟಾಲ್ ಬೀಜಗಳ ಅವಶ್ಯಕತೆ ಇದೆ. ಕೇವಲ ಈ ಒಂದು ತಾಲೂಕಿನಿಂದಲೇ ತಳಿ 5531 ಕ್ಕೆ ಕಾಳ ಸಂತೆಯಂತೆ 15.40 ಕೋಟಿ ವಹಿವಾಟು ನಡೆಯಲಿದೆ. ಹಾಗೆ ತಳಿ 2043 ಕ್ಕೆ ಸುಮಾರು 27 ಕೋಟಿ ವಹಿವಾಟಾಗಲಿದೆ.

ಆದರೇ, ವಾಸ್ತವಿಕವಾಗಿ ಮೆಣಸಿನ ಕಾಯಿ ಬೀಜದ ಗರಿಷ್ಠ ಮಾರಾಟ ಬೆಲೆಯೇ ಬಹಳ ದೊಡ್ಡದಿದೆ. ಬೀಜ ಉತ್ಪಾದನೆ ಮತ್ತು ಅದರ ಸಂಸ್ಕರಣೆ ಎಲ್ಲಾ ಸೇರಿದರೂ ತಲಾ ಕ್ವಿಂಟಾಲ್ ಗೆ 25,000 ರೂ.ಗಳು ದಾಟದಾಗಿದೆ. ಹೀಗೆ, ಪ್ರತಿ ಎಕರೆಗೆ ಬೇಕಾದ 100 ಗ್ರಾಂ ಬೀಜಗಳ ಬೆಲೆ 250 ರೂ.ಗಳಿಗೂ ಕಡಿಮೆ ಇರುವಾಗ, ಕಾಳಸಂತೆಯಲ್ಲಿ ಅದು ಕ್ರಮವಾಗಿ 870 ಹಾಗೂ 1571 ರೂ. ಗಳಿಗೆ ಮಾರಾಟವಾಗಲು ಬಿಟ್ಟಿರುವುದು ಅತ್ಯಂತ ಹೇಯವಾಗಿದೆ.

ಇಂತಹ ಬೀಜ ಕಂಪನಿಗಳ ಲೂಟಿಗೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಅವುಗಳ ವಹಿವಾಟನ್ನು ನಿಯಂತ್ರಣ ಮುಕ್ತಗೊಳಿಸಿರುವುದು ಮತ್ತು ಕಾಳ ಸಂತೆಗೆ ಕ್ರಮವಹಿಸಲು ಬಿಟ್ಟಿರುವುದು ಎಲ್ಲವೂ, ಬೀಜ ಕಂಪನಿಗಳು ರೈತರನ್ನು ವ್ಯಾಪಕವಾಗಿ ಕೊಳ್ಳೆ ಹೊಡೆಯಲು ನೆರವಾಗಿವೆ.

ಕರ್ನಾಟಕ ಪ್ರಾಂತ ರೈತ ಸಂಘ ಸರಕಾರಗಳ ಇಂತಹ ರೈತ ವಿರೋಧಿ ಹಾಗೂ ಲೂಟಿಕೋರ ಕಂಪನಿಗಳ ಪರವಾದ ನಡೆಗಳನ್ನು ಬಲವಾಗಿ ಖಂಡಿಸುತ್ತದೆ ಮತ್ತು ಕೃಷಿ ಲಾಗುವಾಡುಗಳಾದ ಬೀಜ, ಗೊಬ್ಬರ, ಕ್ರಿಮಿನಾಶಕ ಹಾಗೂ ಯಂತ್ರೋಪಕರಣಗಳ ಬೆಲೆಗಳು ಹಾಗೂ ವ್ಯಾಪಾರದ ಮೇಲೆ ಈ ಹಿಂದಿನಂತೆಯೇ ಸಾರ್ವಜನಿಕ ನಿಯಂತ್ರಣವನ್ನು ಮುಂದುವರೆಸಲು ಮತ್ತು ಕಾಳಸಂತೆಯ ನಿಗ್ರಹಕ್ಕೆ ಕಠಿಣ ಕ್ರಮ ಕೈಗೊಳ್ಳಲು ಬಲವಾಗಿ ಒತ್ತಾಯಿಸುತ್ತದೆ.

ತಕ್ಷಣವೇ ಬೀಜದ ಬೆಲೆಗಳನ್ನು ವೈಜ್ಞಾನಿಕವಾಗಿ ಲೆಕ್ಕಿಸಿ ನಿಗದಿಸಲು ಮತ್ತು ಅಂತಹ ಲೆಕ್ಕಿಸಿದ ವಿಧಾನವು ಸಾರ್ವಜನಿಕರ ಗಮನಕ್ಕೆ ತರುವಂತೆ ಅಗತ್ಯ ಪಾರದರ್ಶಕ ಕ್ರಮಗಳನ್ನು ವಹಿಸಬೇಕು. ಸರಕಾರವೇ ತನ್ನ ಏಜೆನ್ಸಿಗಳ ಮೂಲಕ ಕಡಿಮೆ ಬೆಲೆಗೆ ಬೀಜಗಳು ದೊರೆಯುವಂತೆ ಕ್ರಮವಹಿಸಲು ಮತ್ತು ಅದಕ್ಕಾಗಿ ಬಜೆಟ್ ನಲ್ಲಿ ಅಗತ್ಯ ಅನುದಾನ ಒದಗಿಸಲು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಬಲವಾಗಿ ಒತ್ತಾಯಿಸಿದೆ.

# ಕೋವಿಡ್ ಲಸಿಕೆ: ಡೋಸ್‌ಗಳ ನಡುವಿನ ಅಂತರಕ್ಕೆ ಭಾರತೀಯ ವಿಜ್ಞಾನಿಗಳ ಬೆಂಬಲ ಇರಲಿಲ್ಲವೆ?

ಕೊರೊನಾ ಲಸಿಕೆಯ ಡೋಸ್‌ಗಳ ನಡುವಿನ ಅಂತರ ಹೆಚ್ಚಳಕ್ಕೆ ವಿಜ್ಞಾನಿಗಳ ಒಪ್ಪಿಗೆ ಇರಲಿಲ್ಲ ಎನ್ನುವ ಮಾಹಿತಿ ಲಭ್ಯವಾಗಿದೆ. ಈ ಕುರಿತು ರಾಯ್ಟರ್ಸ್ ವರದಿ ನಿಜಾಂಶವನ್ನು ಬಹಿರಂಗಗೊಳಿಸಿದೆ.

ಲಸಿಕೆ ಡೋಸ್ ಗಳ ನಡುವಿನ ಅಂತರವನ್ನು 6-8 ವಾರಗಳಿಂದ 12-16 ವಾರಗಳಿಗೆ ಮೇ. 13 ರಂದು ಏರಿಕೆ ಮಾಡಿರುವುದನ್ನು ಆರೋಗ್ಯ ಸಚಿವಾಲಯ ಘೋಷಿಸಿತ್ತು. ಆದರೆ ಈ ನಿರ್ಧಾರವನ್ನು ವೈಜ್ಞಾನಿಕ ಗುಂಪಿನ ಸಂಪೂರ್ಣ ಒಪ್ಪಿಗೇ ಇಲ್ಲದೇ ಕೈಗೊಳ್ಳಲಾಗಿರುವುದನ್ನು ಸಲಹಾ ಸಮಿತಿಯ ಮೂವರು ಸದಸ್ಯರು ಹೇಳಿರುವುದನ್ನು ರಾಯ್ಟರ್ಸ್ ಉಲ್ಲೇಖಿಸಿದೆ.

ಸರ್ಕಾರಿ ಸ್ವಾಮ್ಯದ ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಎಪಿಡೆಮಿಯಾಲಜಿಯ ಮಾಜಿ ನಿರ್ದೇಶಕ ಎಂಡಿ ಗುಪ್ತೆ ಮಾತನಾಡಿ, "ಎನ್‌ಟಿಎಜಿಐ ಡೋಸ್‌ಗಳ ನಡುವಿನ ಅಂತರವನ್ನು ವಿಶ್ವ ಆರೋಗ್ಯ ಸಂಸ್ಥೆ ಸಲಹೆ ನೀಡಿದ್ದ 8-12ಕ್ಕೆ ನಿಗದಿಪಡಿಸಲು ಒಪ್ಪಿಗೆ ನೀಡಿತ್ತು. ಆದರೆ ಈ ಗುಂಪಿಗೆ, 12 ವಾರಗಳ ಬಳಿಕವೂ ಎರಡನೇ ಡೋಸ್ ಲಸಿಕೆ ಅಂತರದ ಪರಿಣಾಮಗಳ ಬಗ್ಗೆ ಡಾಟಾ ಇರಲಿಲ್ಲ" ಎಂದು ಹೇಳಿದ್ದಾರೆ.

"ಎಂಟು ರಿಂದ 12 ವಾರಗಳಿಗೆ ನಾವೆಲ್ಲರೂ ಒಪ್ಪಿಕೊಂಡ ವಿಷಯ, ಆದರೆ ಸರಕಾರ 12 ರಿಂದ 16 ವಾರಗಳು ಹೆಚ್ಚಿಸಿರುವುದು ಮತ್ತು ಇದರಿಂದಾಗುವ ಪರಿಣಾಮಗಳ ಬಗ್ಗೆ ನಮಗೆ ಯಾವುದೇ ಮಾಹಿತಿ ಇಲ್ಲ ಎಂದು ಎನ್‌ಟಿಎಜಿಐ ಸಹೋದ್ಯೋಗಿ ಮ್ಯಾಥ್ಯೂ ವರ್ಗೀಸ್ ಅವರು ಪ್ರತಿಪಾದಿಸಿದ್ದಾರೆ.

ಲಸಿಕೆ ಹಾಕುವ ವಿಷಯದ ಬಗ್ಗೆ ರಾಷ್ಟ್ರೀಯ ಲಸಿಕಾ ತಾಂತ್ರಿಕ ಸಲಹಾ ಗುಂಪು (ಎನ್‌ಟಿಎಜಿಐ) ಬ್ರಿಟನ್ ನ ರಿಯಲ್-ಲೈಫ್ ಎವಿಡೆನ್ಸ್ ಆಧಾರದಲ್ಲಿ ಲಸಿಕೆ ಡೋಸ್ ನಡುವಿನ ಅಂತರವನ್ನು ಹೆಚ್ಚಿಸುವುದಕ್ಕೆ ಶಿಫಾರಸ್ಸು ಮಾಡಿತ್ತು ಎಂದು ಆರೋಗ್ಯ ಸಚಿವಾಲಯ ಹೇಳಿತ್ತು. ಲಸಿಕೆ ಕೊರತೆಯನ್ನು ಪರಿಹರಿಸಲು ಅಂತರವನ್ನು ಹೆಚ್ಚಿಸಲಾಗಿಲ್ಲ ಆದರೆ ಇದು "ವೈಜ್ಞಾನಿಕ ನಿರ್ಧಾರ" ಎಂದು ಸರ್ಕಾರಿ ಆರೋಗ್ಯ ಅಧಿಕಾರಿಗಳು ಮೇ 15 ರಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಆದರೆ ಈಗ ಪ್ರಶ್ನೆ ಉದ್ಭವಿಸಿರುವುದು ಏನೆಂದರೆ ಲಸಿಕೆಯ ಅಂತರವನ್ನು ಪದೇ ಪದೇ ವಿಸ್ತರಿಸುವುದರಿಂದ ಸಾರ್ವಜನಿಕರ ಮೇಲೆ ಬೀರಬಹುದಾದ ಪರಿಣಾಮ ಏನಾಗಬಹುದು ಎಂದು ಜನರಲ್ಲಿ ಭಯ ಆವರಿಸಿದೆ. ಈ ಮೊದಲು ಲಸಿಕೆಯ ಅಂತರವನ್ನು ನಾಲ್ಕು ವಾರಗಳಿಗೆ ನಿಗದಿ ಮಾಡಲಾಗಿತ್ತು. ನಂತರದಲ್ಲಿ 6 ರಿಂದ 8 ವಾರಗಳಿಗೆ ನಂತರದಲ್ಲಿ ವಿಜ್ಞಾನಿಗಳು 8 ರಿಂದ 12 ವಾರಗಳಿಗೆ ಒಪ್ಪಿಗೆ ಸೂಚಿಸಿದ್ದರು. ಆದರೆ ಕೇಂದ್ರ ಸರಕಾರ ವಿಜ್ಞಾನಿಗಳ ಸಲಹೆಯನ್ನು ➜

# ದಮನಿತ, ಶೋಷಿತ ಸಮುದಾಯದ ಒಡಲೊಳಗಿಂದ ಚಿಮ್ಮಿದ ಕವಿ- ಡಾ ಸಿದ್ದಲಿಂಗಯ್ಯ: ಸಿಪಿಐ(ಎಂ) ಶ್ರದ್ಧಾಂಜಲಿ



ದಲಿತ ಕವಿ ಎಂದೇ ಪ್ರಖ್ಯಾತವಾಗಿರುವ ಕನ್ನಡದ ಬಂಡಾಯ ಕವಿ, ನಾಡೋಜ, ಡಾ. ಸಿದ್ದಲಿಂಗಯ್ಯ ನವರು ಕರೋನಾ ಬಾಧೆಗೆ ತುತ್ತಾಗಿ ನಿಧನರಾದ ಸುದ್ಧಿ ಆಘಾತಕಾರಿಯಾಗಿದೆ. ಬಂಡಾಯ ಕವಿಗಳ ಅಕಾಲಿಕ ನಿಧನಕ್ಕೆ ಕಂಬನಿ ಮಿಡಿದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯು ತನ್ನ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸುತ್ತದೆ.

ಕನ್ನಡ ಕಾವ್ಯದ ಸ್ವರೂಪವನ್ನೇ ಬದಲಾಯಿಸಿದ, ಒಂದು ಹೊಸ ಜನಪರ ಯುಗದ ಹರಿಕಾರರಾದ ಡಾ.ಸಿದ್ಧಲಿಂಗಯ್ಯನವರು, ದಮನಿತ, ಶೋಷಿತ ಸಮುದಾಯದ ಒಡಲ ಬೇಗುದಿಯಿಂದ ಚಿಮ್ಮಿದ ಬಂಡಾಯ ಕವಿಯಾಗಿದ್ದರು. ಮಹಾನ್ ತತ್ವಜ್ಞಾನಿ ಕಾರ್ಲ್ ಮಾರ್ಕ್ಸ್ ಮತ್ತು ಭಾರತ ರತ್ನ ಡಾ. ಬಿ.ಆರ್.ಅಂಬೇಡ್ಕರ್ ಇಬ್ಬರ ಚಿಂತನೆಗಳನ್ನೂ ಮೈಗೂಡಿಸಿಕೊಂಡು ಹೊರ ಹೊಮ್ಮಿದ ಅಸಾಮಾನ್ಯ ಪ್ರತಿಭೆಯಾಗಿದ್ದರು ಎಂದು ಸಿಪಿಐ(ಎಂ) ಸ್ಮರಿಸುತ್ತದೆ.

1954 ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಗಡಿ ತಾಲೂಕಿನ ಮಂಚನಬೆಲೆ ಎಂಬ ಗ್ರಾಮದ ಅತ್ಯಂತ ಕಡು ಬಡತನದ ದಲಿತ ಕುಟುಂಬದಲ್ಲಿ ಜನಿಸಿದ ಕವಿ ಸಿದ್ದಲಿಂಗಯ್ಯನವರು (67) ಬೆಂಗಳೂರಿನ ಶ್ರೀರಾಂಪುರದಲ್ಲಿನ ಗೋಪಾಲಸ್ವಾಮಿ ಅಯ್ಯರ್ ಹಾಸ್ಟೆಲ್ ನಲ್ಲಿದ್ದು ಶಿಕ್ಷಣವನ್ನು ಪಡೆದರು. ನಂತರ ಬಡತನದಲ್ಲಿಯೇ, ಸರಕಾರಿ ಕಲಾ ಕಾಲೇಜ್ ಮತ್ತು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಉನ್ನತ ಶಿಕ್ಷಣದ ವ್ಯಾಸಂಗ ಪೂರೈಸಿದರು. ಬಳಿಕ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಧ್ಯಾಪಕರಾಗಿ ಸೇವೆ ಸಲ್ಲಿಸಿದರು.

ಅವರ ಹೋರಾಟದ ಬದುಕು ಮತ್ತು ಪ್ರತಿಭೆಯ ಕಾರಣಗಳಿಂದಾಗಿ ಎರಡು ಬಾರಿ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು, ಸದನದೊಳಗೆ ಜನರ ನೋವು, ಸಂಕಟ, ಮೌಢ್ಯತೆ, ಅಂಧಶ್ರದ್ದೆಯಂತಹ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿಯೇ ಮಂಡಿಸಿದ್ದಾರೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿಯೂ ಕನ್ನಡಕ್ಕಾಗಿ ದುಡಿದಿದ್ದಾರೆ.

ಭಾರತ ವಿದ್ಯಾರ್ಥಿ ಫೆಡರೇಷನ್(SFI) ಹಾಗೂ ಸಮುದಾಯ ಸಾಂಸ್ಕೃತಿಕ ಚಳುವಳಿಯ ಮತ್ತು ಸಿಪಿಐ(ಎಂ) ಪಕ್ಷದ ಚಟುವಟಿಕೆಗಳ ಜೊತೆ ತೊಡಗಿಸಿಕೊಂಡು, ವಿದ್ಯಾರ್ಥಿ ದೆಸೆಯಿಂದಲೇ ಮಾರ್ಕ್ಸವಾದಕ್ಕೆ ಆಕರ್ಷಿತರಾಗಿ, ಆ ಮೂಲಕ ದಲಿತರ ಹಾಗೂ ಶೋಷಿತರ ಸಂಕಟಗಳಿಗೆ ಪರಿಹಾರಗಳನ್ನು ಕಂಡು ಕೊಂಡರು. ದಲಿತ ಚಳುವಳಿ ಹಾಗೂ ಬಂಡಾಯ ಸಾಹಿತ್ಯ ಚಳುವಳಿಯನ್ನು ರಾಜ್ಯದಾದ್ಯಂತ ವಿಸ್ಥರಿಸಲು ಶ್ರಮಿಸಿದರು.

ಸದರಿ ಅವರ ಚಿಂತನೆಗಳು ಅವರ ಸಾಹಿತ್ಯಿಕ ಕೃತಿಗಳಲ್ಲಿ ಮತ್ತು ಸಾರ್ವಜನಿಕ ಉಪನ್ಯಾಸಗಳಲ್ಲಿ ಪ್ರತಿಫಲನಗೊಂಡಿವೆ. ದಲಿತರ, ಶ್ರಮಿಕರ, ಒಟ್ಟಾರೆ ಶೋಷಿತರ ಧ್ವನಿಗಳು, ಅವರ ಹಾಡುಗಳು ಮತ್ತು ಕೃತಿಗಳಲ್ಲಿ ದಟ್ಟವಾಗಿ ಮೂಡಿಬಂದಿವೆ. ಅವರ ಹಲವು ಕ್ರಾಂತಿಗೀತೆಗಳು ಜನಚಳುವಳಿಗಳ ಧ್ವನಿಗಳಾಗಿ ಚಿರಸ್ಥಾಯಿಯಾಗಿವೆ.

ಕ್ರಾಂತಿಕಾರಿ ಹಾಡುಗಳಾಗಿ ರಾಜ್ಯದಾದ್ಯಂತ ಜನಧ್ವನಿಯಾಗಿರುವ ಅವರ ಕಾವ್ಯಗಳು, ಶೋಷಿತರ, ದಮನಿತರ, ನಿಟ್ಟುಸಿರು ಮತ್ತು ಶೋಷಣೆಗಳನ್ನು ಬಿಚ್ಚಿಡುತ್ತಲೇ, ಸಮಾನತೆ, ಸಮ ಸಮಾಜದ ನಿರ್ಮಾಣದ ತುಡಿತಗಳನ್ನು ಪ್ರಖರವಾಗಿ ಅಭಿವ್ಯಕ್ತಿಸಿಕೊಂಡು ತೀಕ್ಷ್ಣ ಮೊನಚು ಪಡೆದು, ಜನಪರ ಹೋರಾಟಗಳಿಗೆ ಸ್ಫೂರ್ತಿಯನ್ನು ತಂದು ಕೊಟ್ಟಿವೆ.

ಮಾರ್ಕ್ಸವಾದದ ತಾತ್ವಿಕತೆಯನ್ನು ಕಾವ್ಯದೊಳಗೆ ಹಾಸು ಹೊಕ್ಕಾಗಿಸಿ ಅರಳಿಸುವಲ್ಲಿ ಸಿದ್ದಲಿಂಗಯ್ಯನವರ ಅನುಭವ ಮತ್ತು ಪ್ರತಿಭೆ ಅನನ್ಯವಾದದ್ದು. ಭಾರತೀಯ ಸಮಾಜದಲ್ಲಿ ಸಮಾನತೆಯನ್ನು ತರುವಲ್ಲಿ ಜಾತಿ ಮತ್ತು ವರ್ಗ ಶೋಷಣೆಗೆ ವಿರೋಧವಾದ ಹೋರಾಟಗಳ ಮಹತ್ವವನ್ನು ಅವರು ಪ್ರತಿಪಾದಿಸಿದ್ದಾರೆ. ಹೀಗೆ ಜನ ಚಳುವಳಿಗಳಿಗೆ ತಮ್ಮ ಅಮೂಲ್ಯ ಕೊಡುಗೆ ನೀಡಿದ್ದಾರೆ ಎಂದು ಸಿಪಿಐ(ಎಂ) ಸ್ಮರಿಸಿದೆ.

ಹೊಲೆ ಮಾದಿಗರ ಹಾಡು, ಮೆರವಣಿಗೆ, ಸಾವಿರಾರು ನದಿಗಳು, ಅಲ್ಲೇ ಕುಂತವ್ರೆ, ನನ್ನ ಜನಗಳು ಮತ್ತು ಇತರ ಕಾವ್ಯಗಳು, ಕಪ್ಪು ಕಾಡಿನ ಹಾಡುಗಳು ಇತ್ಯಾದಿ ಪ್ರಮುಖ ಕಾವ್ಯ, ಗ್ರಾಮ ದೇವತೆಗಳು, ಅವತಾರ, ಊರು ಕೇರಿ ಅತ್ಮಕಥನ, ಹಲವು ನಾಟಕಗಳು, ಲೇಖನಗಳ ಸಂಗ್ರಹ ಮುಂತಾದವು ಪ್ರಮುಖ ಕೃತಿಗಳು.

ಡಾ. ಸಿದ್ದಲಿಂಗಯ್ಯ ನವರಿಗೆ ಪಂಪ ಪ್ರಶಸ್ತಿ, ನೃಪತುಂಗ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಡಾ.ಅಂಬೇಡ್ಕರ್ ಪ್ರಶಸ್ತಿ, ಮುಂತಾದವುಗಳು ಲಭಿಸಿದ್ದವು. ಶ್ರವಣ ಬೆಳಗೊಳದಲ್ಲಿ ನಡೆದ 81 ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾದ್ಯಕ್ಷರಾಗಿ ನಾಡಿನ ಗೌರವ ಪಡೆದಿದ್ದಾರೆ ಎಂದು ತಿಳಿಸಿದೆ.

ಡಾ. ಸಿದ್ದಲಿಂಗಯ್ಯನವರ ಅಗಲಿಕೆ ಕನ್ನಡ ನಾಡಿನ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಲೋಕಕ್ಕೆ ವಿಶೇಷವಾಗಿ ಜನ ಚಳುವಳಿಗಳಿಗೆ ಆಗಿರುವ ಅಪಾರ ನಷ್ಟ ಎಂದು ಸಿಪಿಐ(ಎಂ) ರಾಜ್ಯ ಸಮಿತಿಯು ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದೆ.

ಡಾ. ಸಿದ್ದಲಿಂಗಯ್ಯನವರನ್ನು ಕಳೆದುಕೊಂಡಿರುವ ಅವರ ಕುಟುಂಬಕ್ಕೆ ಮತ್ತು ಬಂಧು, ಮಿತ್ರರಿಗೆ ತೀವ್ರ ಸಂತಾಪ ಮತ್ತು ಸಾಂತ್ವನವನ್ನು ತಿಳಿಸಿದೆ.

# 'ಜೀವ ಮತ್ತು ಜೀವನ ಉಳಿಸಲು' ಆಗ್ರಹಿಸಿ ರಾಜ್ಯಾದ್ಯಂತ ಆದಿವಾಸಿಗಳ ಪ್ರತಿಭಟನೆ

ಕರ್ನಾಟಕದ ಆದಿವಾಸಿಗಳು ಕೊರೋನ ಸಾಂಕ್ರಾಮಿಕ ರೋಗದ ಸಂಕಷ್ಟಗಳ ಹಿನ್ನೆಲೆಯಲ್ಲಿ ತಮ್ಮ 'ಜೀವ ಮತ್ತು ಜೀವನ'ವನ್ನು ಉಳಿಸಲು ಆಗ್ರಹಿಸಿ ರಾಜ್ಯದಾದ್ಯಂತ ಪ್ರತಿಭಟನೆ ನಡೆಯಿತು.

ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಮಟ್ಟದಲ್ಲಿ ಪ್ರತಿಭಟನೆಗೆ ಇದೇ 2021 ಜೂನ್ 7ರಂದು ಕೋವಿಡ್ ನಿಯಮಗಳನ್ನು ಪಾಲಿಸಿ ಆದಿವಾಸಿಗಳ ಮನೆ, ಮನೆಗಳು, ಹಾಡಿ, ಅವರ ನೆಲೆಗಳಿಂದಲೂ ಸರ್ಕಾರವನ್ನು ಆಗ್ರಹಿಸಿ ಪ್ರತಿಭಟನೆ ನಡೆಸಲು ಕರೆನಿಡಲಾಗಿತ್ತು.

ಆದಿವಾಸಿಗಳು ವಾಸಿಸುವ ಪ್ರದೇಶಗಳಿಗೆ ಜೀವನಾವಶ್ಯಕ ರೇಷನ್ ಮತ್ತು ಪೌಷ್ಟಿಕ ಆಹಾರ ಒದಗಿಸಬೇಕು, ಪ್ರತಿ ಕುಟುಂಬಕ್ಕೆ ರೂ 10,000 ಪರಿಹಾರ ಧನ ನೀಡಿಕೆ, ಆಹಾರ, ಅಗತ್ಯ ಔಷಧಿ ಚಿಕಿತ್ಸೆ, ಎಲ್ಲಾ ಆದಿವಾಸಿಗಳಿಗೆ ಉಚಿತ ಲಸಿಕೆ ನೀಡಬೇಕು. ಹೀಗೆ ಅನೇಕ ಬೇಡಿಕೆಗಳನ್ನು ಒಳಗೊಂಡು ತಮ್ಮ ಹಕ್ಕೊತ್ತಾಯ ಸರಕಾರಕ್ಕೆ ಮಂಡಿಸಿದರು.

ಆದಿವಾಸಿಗಳು ಜೂನ್ 7 ರಂದು ತಮ್ಮ ಮನೆ ಮುಂದೆ ನಿಂತು ಅವರ ಸಾಂಪ್ರದಾಯಿಕ ವಾದ್ಯಗಳನ್ನು ನುಡಿಸಿ ಮತ್ತು ಖಾಲಿ ತಟ್ಟೆಗಳನ್ನು ಪ್ರದರ್ಶಿಸುವುದರ ಮೂಲಕ ಪ್ರತಿಭಟಿಸಲಾಯಿತ್ತು.

ಕೋವಿಡ್ ಮತ್ತು ಲಾಕ್ ಡೌನ್ ಸಂದರ್ಭದಲ್ಲಿ ಆದಿವಾಸಿ ಸಮುದಾಯಗಳು, ಅಲೆಮಾರಿ ಸಮುದಾಯಗಳು ಅತೀವ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಸರಕಾರವು ಜನತೆಗೆ ಪರಿಹಾರ ನೀಡಲೆಂದು ನಡೆಸಿದ ಸಭೆಗಳು, ಪರಿಹಾರ ಪ್ಯಾಕೇಜ್ ಗಳಲ್ಲಿ ಆದಿವಾಸಿಗಳನ್ನು ನಿರ್ಲಕ್ಷ್ಯ ಮಾಡಲಾಗಿದೆ. ಜಿಲ್ಲಾಧಿಕಾರಿಗಳ ಜೊತೆಗೆ ಮುಖ್ಯಮಂತ್ರಿಗಳು ನಡೆಸಿದ ಸಭೆಯಲ್ಲಿ ಆದಿವಾಸಿಗಳ ರಕ್ಷಣೆಗೆ ಸಂಬಂಧಿಸಿ ಯಾವ ಸೂಚನೆ ನೀಡಿಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ಇರುವ ಖಛಿಶಿ, , ಖಿಶಿ ಅನುದಾನ ಖರ್ಚು ಮಾಡದ ಒಟ್ಟು ಹಣ 26,005 ಕೋಟಿ ರೂಪಾಯಿ ಇದ್ದರೂ ಅದರಲ್ಲಿ ಆದಿವಾಸಿಗಳಿಗೆ ಮೀಸಲಿರಿಸಿದ ಹಣ ರೂ. 7673.46 ಕೋಟಿ ಇದ್ದರೂ ಕೋವಿಡ್ ಸಂಕಷ್ಟದ ಸಂದರ್ಭ ಆದಿವಾಸಿಗಳ ನೆರವಿಗೆ ಸರಕಾರ ಬಾರದಿರುವುದು ವಿಷಾದನೀಯ ಎಂದು ಉಡುಪಿ ಜಿಲ್ಲೆಯಲ್ಲಿ ಪ್ರತಿಭಟನೆ ಉದ್ದೇಶಿಸಿ ಶ್ರೀಧರ ನಾಡ ಮಾತನಾಡಿದರು.

ಆದಿವಾಸಿಗಳ 90 ಶೇಕಡಾ ಜನ ಅಪೌಷ್ಟಿಕತೆಯಿಂದ ಬಳಲುತ್ತಿರುವುದು ಸರಕಾರಕ್ಕೂ ಗೊತ್ತಿದೆ. ಹಾಗಾಗಿ ಇವರಿಗೆ ಪೌಷ್ಟಿಕ ಆಹಾರವನ್ನು ನೀಡುವ ಯೋಜನೆ ಇದೆ. ಅದನು ಸಹ ವರ್ಷದ ಆರು ತಿಂಗಳು ಸಿಗಬೇಕಾದ ಆಹಾರ ಕೇವಲ 4 ಬಾರಿ ಮಾತ್ರ ನೀಡಲಾಗಿದೆ. ಲಾಕ್ ಡೌನ್ ಸಂದರ್ಭದಲ್ಲಿ ಸರಕಾರ ಇವರಿಗೆ ಬದುಕಿಗೆ ಬೇಕಾದ ಅಗತ್ಯ ಆಹಾರವನ್ನು ಒದಗಿಸದೆ ಸಂಕಷ್ಟಕ್ಕೆ ತಳ್ಳಿದೆ. ಹಲವು ಜಿಲ್ಲೆಗಳಲ್ಲಿ ಟೆಂಡರನ್ನು ಕರೆದು ಇತ್ಯರ್ಥ ಮಾಡಿಲ್ಲ ಎಂದು ಬೆಳ್ತಂಗಡಿ ಆದಿವಾಸಿಗಳ ಪ್ರತಿಭಟನೆ ಉದ್ದೇಶಿಸಿ ರಾಜ್ಯ ಸಹ ಸಂಚಾಲಕರು ಆದ ಶೇಖರ್ ಮಾತನಾಡಿದರು.

ಆದಿವಾಸಿಗಳ ಸಾಂಪ್ರದಾಯಿಕ ಆಹಾರ ಪದ್ಧತಿಗಳು ಸಂಪೂರ್ಣ ನಶಿಸಿವೆ. ಕಾರಣ ಸರಕಾರದ ಅರಣ್ಯ, ಆಹಾರ ಸೇರಿದಂತೆ ಹಲವಾರು ಕಾಯ್ದೆಗಳಿಂದ ಉತ್ತಮ ಗುಣಮಟ್ಟದ ಪೌಷ್ಟಿಕ ಆಹಾರ ಪಡೆಯುವುದು ಸಾಧ್ಯವಾಗುತ್ತಿಲ್ಲ. ಹಾಗಾಗಿ ಇವರಿಗೆ ರಕ್ತ ಹಿನತೆ, ಅಪೌಷ್ಟಿಕತೆ ಇದೆ. ಬದಲಾದ ಕಾಲಘಟ್ಟದಲ್ಲಿ ಆಹಾರ ಪದ್ದತಿ ಬದಲಾಯಿಸಿಕೊಂಡು ಅರಣ್ಯದ ಪ್ರಾಣಿ ಪಕ್ಷಿಗಳ ರಕ್ಷಣೆ ಮಾಡಿಕೊಳ್ಳಬೇಕು. ಆದರೆ ಇವರಿಗೆ ಪರ್ಯಾಯ ಗುಣಮಟ್ಟದ ಆಹಾರ, ಆರೋಗ್ಯ ಒದಗಿಸುವುದು ಸರ್ಕಾರದ ಮುಖ್ಯ ಕರ್ತವ್ಯ. ಅರಣ್ಯ ಆಧಾರಿತ ಕೇವಲ ಬೆರಳೆಣಿಕೆಯಷ್ಟು ಆದಿವಾಸಿಗಳಿಗೆ ಮಾತ್ರ ಪೌಷ್ಟಿಕ ಆಹಾರವನ್ನು ನೀಡುವ ಯೋಜನೆ ತರಲಾಗಿದೆ. ಇನ್ನು ಹಲವಾರು ಸಮುದಾಯಗಳು ಆಹಾರದ ಹಕ್ಕಿನಿಂದ ವಂಚಿತರಾಗಿದ್ದಾರೆ ಎಂದು ಶಿವಮೊಗ್ಗ ಆದಿವಾಸಿ ಸಂಘಟನೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುರೇಶ್ ಕುಂಬಳೆ ನಿಟ್ಟೂರಿನಲ್ಲಿ ಆದಿವಾಸಿಗಳ ಪ್ರತಿಭಟನೆ ಉದ್ದೇಶಿಸಿ ಮಾತನಾಡಿದರು.

ಇಂದು ಆದಿವಾಸಿಗಳಲ್ಲಿ ಒಂದಾಗಿರುವ ಸೋಲಿಗ ಸಮುದಾಯ ಅವರಿಗೆ ವಂಶವಾಹಿನಿಯಾಗಿ ಬಂದಿರುವ ಸಿಕ್ಕಿಲ್ ಎನಿಮಿಯಾ ಡಿಸೀಜ್ ಈಗ ಪಣಿಯ ಯರವರು ನಂತಹ ಬೇರೆ, ಬೇರೆ ಆದಿವಾಸಿಗಳಲ್ಲೂ ಕಂಡು ಬಂದಿದೆ. ರಾಜ್ಯದ ಆದಿವಾಸಿಗಳ ವಂಶವೆ ನಶಿಸುವ ಕಾಲ ಬಹುದೂರವಿಲ್ಲ ಅನಿಸುತ್ತದೆ. ಆದ್ದರಿಂದ ಅವರ ಜೀವವನ್ನು ಉಳಿಸಬೇಕಾದರೆ ಆಹಾರದ ಭದ್ರತೆ, ಸಕಾಲಿಕ ನೀಡಿಕೆ ಅತ್ಯಂತ ಅವಶ್ಯಕವಾಗಿದೆ.

ಇಂತಹ ಸ್ಥಿತಿಯಲ್ಲಿ ಆದಿವಾಸಿಗಳು ಪ್ರತಿರೋಧಕ ಶಕ್ತಿ ಇಲ್ಲದೆ ಸುಲಭವಾಗಿ ಕೋವಿಡ್ ರೋಗಕ್ಕೆ ಬಲಿಯಾಗುತ್ತಿದ್ದಾರೆ. ಮೊದಲ ಆದ್ಯತೆಯಲ್ಲಿ ಆದಿವಾಸಿಗಳಿಗೆ ಉಚಿತ ಲಸಿಕೆ ನೀಡಿ ಅವರನ್ನು ರಕ್ಷಣೆ ಮಾಡಿಕೊಳ್ಳುವುದು ಇಂದಿನ ಅಗತ್ಯ. ಅದಕ್ಕಾಗಿ ಅನಿವಾರ್ಯ ಎನಿಸಿದರೆ ಟಿ. ಎಸ್. ಪಿ ಅನುದಾನವನ್ನು ಬಳಸಿಕೊಳ್ಳಬಹುದು.

ಬಹುತೇಕ ಜಿಲ್ಲೆಗಳಲ್ಲಿರುವ ಆದಿವಾಸಿಗಳು ಅದರಲ್ಲೂ ಪಶ್ಚಿಮ ಘಟ್ಟದ ಉದ್ದಕ್ಕೂ ಕೊವಿಡ್ ಲಸಿಕೆ, ತುರ್ತು ಆರೋಗ್ಯ ಚಿಕಿತ್ಸೆಗೆ 30 ರಿಂದ 40 ಕಿ. ಮೀ ಹೋಗಬೇಕಾದ ಪರಿಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಅವರು ವಾಸಿಸುವ 5 ಕಿ.ಮಿ ವ್ಯಾಪ್ತಿಯಲ್ಲಿ ಸುಸಜ್ಜಿತವಾದ ಕೊವಿಡ್ ಐಸೋಲೇಶನ್ ಕೇಂದ್ರ ತೆರೆಯಬೇಕು. ಇವರು ಕೊವಿಡ್ ಗೆ ತುತ್ತಾದರೂ ವಸತಿ ಸಮಸ್ಯೆಯಿಂದಾಗಿ ಮನೆಯಲ್ಲಿ ಪ್ರತೇಕವಾಗಿ ಇರಲೂ ಸಾಧ್ಯವೇ ಇಲ್ಲ. ಉಳಿದವರಿಗೂ ರೋಗ ಹಬ್ಬುತ್ತದೆ. ಸಾಂಕ್ರಾಮಿಕತೆಯ ಗಂಭೀರ ಸ್ವರೂಪದ ಪರಿಸ್ಥಿತಿ ಎದುರಿಸುವ ಮೊದಲು ಸರಕಾರ ಎಚ್ಚೆತ್ತುಕೊಂಡು ಕಾರ್ಯಪ್ರವೃತ್ತ ಆಗಬೇಕು ಎಂದು ರಾಜ್ಯ ಸಂಚಾಲಕರು ವೈ.ಕೆ ಗಣೇಶ್ ಆಗ್ರಹಿಸಿದ್ದಾರೆ.

ಕೈ ಕಸುಬು, ಕಿರು ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಿ ಮಾರಾಟ ಮಾಡುವ ಇವರಿಗೆ ಸರಿಯಾದ ಮಾರುಕಟ್ಟೆ ವ್ಯವಸ್ಥೆ ಇಲ್ಲವಾಗಿದೆ. ಮತ್ತು ಅಡಿಕೆ, ಕಾಫಿ ತೋಟಗಳಲ್ಲಿ ಕೂಲಿಯನ್ನೇ ನಂಬಿ ದಿನದ ಬದುಕು ಸಾಗಿಸುವ ಇವರಿಗೆ ಕೆಲಸವಿಲ್ಲದೇ ಇಂದು ಊಟಕ್ಕೆ ಪರದಾಡುವ ಸ್ಥಿತಿ ಎದುರಾಗಿದೆ. ಯುವಜನರನ್ನು ಒಳಗೊಂಡು ಗ್ರಾಮೀಣ ನಿರುದ್ಯೋಗ ವಿಪರೀತವಾಗಿ ಹೆಚ್ಚಿದೆ.

➘ ನಿರ್ಲಕ್ಷಿಸಿ 12 ರಿಂದ 16 ವಾರಕ್ಕೆ ವಿಸ್ತರಿಸಿದೆ.

ಲಸಿಕೆ ಅಂತರ ಹೆಚ್ಚಳದಿಂದ ಅಪಾಯ ಜಾಸ್ತಿ : ಕೊರೊನಾ ಲಸಿಕೆಯ ಎರಡು ಡೋಸ್‌ಗಳ ನಡುವಿನ ಅಂತರ ಹೆಚ್ಚಿಸಿದಷ್ಟು, ಕೊರೊನಾ ರೂಪಾಂತರ ಸೋಂಕಿಗೆ ಗುರಿಯಾಗುವ ಸಾಧ್ಯತೆ ಅಧಿಕವಾಗಿದೆ ಎಂದು ಅಮೆರಿಕ ಅಧ್ಯಕ್ಷರ ವೈದ್ಯಕೀಯ ಸಲಹೆಗಾರ ಡಾ. ಆಂಥೊನಿ ಫೌಸಿ ಆತಂಕಕಾರಿ ವಿಚಾರವನ್ನು ಹೊರಹಾಕಿದ್ದಾರೆ.

ಲಸಿಕೆಡೋಸ್‌ಗಳಅಂತರವನ್ನುಹೆಚ್ಚುಗೊಳಿಸಿದರೆ ಸೋಂಕಿಗೆ ತುತ್ತಾಗುವ ಸಾಧ್ಯತೆಯೂ ಹೆಚ್ಚಿರುತ್ತದೆ. ಬ್ರಿಟನ್‌ನಲ್ಲಿ ಈ ಅಂತರ ವಿಸ್ತರಣೆ ಮಾಡಿದ ಕಾರಣಕ್ಕೆ ಸೋಂಕಿಗೆ ತುತ್ತಾಗಿರುವ ಪ್ರಕರಣಗಳು ಕಂಡುಬಂದಿವೆ" ಎಂದು ಹೇಳಿದ್ದಾರೆ. ಒಖಓಂ ಲಸಿಕೆಗಳ ಡೋಸ್‌ಗಳ ನಡುವೆ ಮೂರು ವಾರಗಳ ಅಂತರವಿರಬೇಕು. ಫೈಜರ್ ಅಥವಾ ಮಾಡೆರ್ನಾ ಲಸಿಕೆಗಳಿಗೆ ನಾಲ್ಕು ವಾರಗಳ ಅಂತರವಿರುವುದು ಸೂಕ್ತ ಎಂದು ತಿಳಿಸಿದ್ದಾರೆ.

ಕಳೆದ ತಿಂಗಳಷ್ಟೆ ಕೊರೊನಾ ಲಸಿಕೆ ಕುರಿತು ಭಾರತ ಸರ್ಕಾರ ಪರಿಷ್ಕೃತ ಮಾರ್ಗಸೂಚಿ ಹೊರಡಿಸಿದ್ದು, ಲಸಿಕೆ ಡೋಸ್‌ಗಳ ನಡುವಿನ ಅಂತರ ಹೆಚ್ಚಿಸಿತ್ತು. ಕೋವಿಶೀಲ್ಡ್ ಲಸಿಕೆಯ ಎರಡು ಡೋಸ್‌ಗಳ ನಡುವಿನ ಅಂತರವನ್ನು 12–16 ವಾರಗಳಿಗೆ ಏರಿಕೆ ಮಾಡಿತ್ತು. ಮೂರು ತಿಂಗಳಿನಲ್ಲಿ ಎರಡನೇ ಬಾರಿ ಲಸಿಕೆ ಡೋಸ್‌ಗಳ ಅಂತರ ಹೆಚ್ಚಿಸಿತ್ತು. ಸದ್ಯಕ್ಕೆ ಕೊರೊನಾ ಸೋಂಕಿನಿಂದ ದೂರವುಳಿಯಲು ಜನರಿಗೆ ಅತಿ ವೇಗವಾಗಿ ಲಸಿಕೆ ನೀಡಬೇಕಾಗಿದೆ. ಡೆಲ್ಟಾದಂಥ ಅಪಾಯಕಾರಿ ರೂಪಾಂತರದಿಂದ ತಪ್ಪಿಸಿಕೊಳ್ಳಲು ಇದು ಅತ್ಯವಶ್ಯಕವಾಗಿದೆ ಎಂದು ಫೌಸಿ ಹೇಳಿದ್ದಾರೆ.

ವಿಳಂಬದಿಂದ ತೊಂದರೆ ಇಲ್ಲ: ಇಂಗ್ಲೆಂಡ್‌ನಲ್ಲಿ ಇತ್ತೀಚೆಗೆ ನಡೆಸಿದ ಸಮೀಕ್ಷೆಯ ವರದಿಗಳ ಆಧಾರದಲ್ಲಿ ಲಸಿಕೆಯ ಎರಡು ಡೋಸ್‌ಗಳ ನಡುವಿನ ಅಂತರವನ್ನು ಕಡಿಮೆಗೊಳಿಸಬೇಕು ಎಂಬ ಒತ್ತಾಯಗಳು ಕೇಳಿಬಂದಿವೆ. ಆದರೆ ಈ ವರದಿಯಿಂದ ಆತಂಕಗೊಳ್ಳುವ ಅವಶ್ಯಕತೆ ಇಲ್ಲ. ಈ ನಿರ್ಧಾರಗಳನ್ನು ತಜ್ಞರ ಕೂಲಂಕಷ ಪರೀಕ್ಷೆಗಳ ನಂತರವೇ ತೆಗೆದುಕೊಳ್ಳಲಾಗಿದೆ ಎಂದು ನೀತಿ ಆಯೋಗದ ಸದಸ್ಯ ಡಾ ವಿಕೆ ಪೌಲ್ ತಿಳಿಸಿದ್ದಾರೆ.

ಭಾರತದಲ್ಲಿ ಕೋವಿಶೀಲ್ಡ್‌ನ ಎರಡು ಲಸಿಕೆಗಳ ನಡುವಿನ ಅಂತರವನ್ನು 12 ರಿಂದ 16 ವಾರಗಳಿಗೆ ವಿಸ್ತರಿಸಲಾಯಿತು. ಕೋವಿಶೀಲ್ಡ್ ಲಸಿಕೆಯ ಮೊದಲ ಡೋಸ್ ನೀಡುವ ರಕ್ಷಣೆ ದೀರ್ಘಕಾಲ ಇರುತ್ತದೆ ಎಂಬ ಅಂತಾರಾಷ್ಟ್ರೀಯ ಅಧ್ಯಯನಗಳ ಆಧಾರದ ಮೇಲೆ ಈ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ. ಆದ್ದರಿಂದ, ಎರಡನೇ ಡೋಸ್ ವಿಳಂಬಗೊಳಿಸಬಹುದು ಎಂದು ಡಾ. ಪೌಲ್ ಹೇಳಿದ್ದಾರೆ.

ಅತಿಥಿ ಅಂಕಣ



ನಾ ದಿವಾಕರ

**ವ್ಯಕ್ತಿಗತ ನೆಲೆಯ ವೈಚಾರಿಕತೆಯನ್ನೂ ಸಾಮುದಾಯಿಕ ನೆಲೆಯಲ್ಲಿ ಕಳೆದುಕೊಳ್ಳುವಂತಹ ವಿಕೃತ ಪರಿಸ್ಥಿತಿಯನ್ನು ಇತ್ತೀಚೆಗೆ ಪೋಷಿಸಲಾಗುತ್ತಿದೆ. ಇದು ಸೌಹಾರ್ದಯುತ ಸಮಾಜಕ್ಕೆ ಅಪಾಯಕಾರಿಯಾಗುತ್ತದೆ. ಮೇಲ್ನೋಟಕ್ಕೆ ಒಪ್ಪಿಕೊಂಡರೂ ಅಪ್ಪಿಕೊಳ್ಳುವ ಮನಸ್ಥಿತಿ ಇಲ್ಲದಿದ್ದರೆ ವೈಚಾರಿಕತೆಯೂ ಸೊರಗಿಹೋಗುತ್ತದೆ. ಆಧುನಿಕ ಜೀವನಶೈಲಿಯಲ್ಲಿ ಈ ದ್ವಂದ್ವವನ್ನು ಸ್ಪಷ್ಟವಾಗಿ ಗುರುತಿಸಬಹುದು. ಇದರಿಂದ ಮುಕ್ತರಾಗುವ ನಿಟ್ಟಿನಲ್ಲಿ ಯೋಚಿಸುವ ತೆರೆದ ಮನಸುಗಳು ಹೇರಳವಾಗಿವೆ ಆದರೆ ಪ್ರಬಲವಾಗಿಲ್ಲ. ಜಾತಿ ದೌರ್ಜನ್ಯಗಳ ಬಗ್ಗೆ ಕಾಣುವ ಸಾರ್ವಜನಿಕ ಮೌನವೇ ಇದಕ್ಕೆ ಸಾಕ್ಷಿ. ... ಎಫ್ ಐ ಆರ್ ದಾಖಲಿಸುವುದೇ ಆದರೆ ಈ ಮನೋಭಾವದ ವಿರುದ್ಧ ದಾಖಲಿಸಬೇಕಿದೆ. ಈ ಮನಸ್ಥಿತಿಯನ್ನು ರಾಜದ್ರೋಹದ ಕಾಯ್ದೆಯಡಿ ಬಂಧಿಸಬೇಕಿದೆ. ಈ ಧೋರಣೆಯ ಗಡೀಪಾರು ಮಾಡಬೇಕಿದೆ.**

# ಜಾತಿ ಶ್ರೇಷ್ಠತೆಯ ವ್ಯಸನದಿಂದ ಮುಕ್ತರಾಗಬೇಕಿದೆ

ಚಿತ್ರನಟ ಚೇತನ್ ಅವರ ಬ್ರಾಹ್ಮಣ್ಯ ಕುರಿತ ಉಲ್ಲೇಖಿತ ಹೇಳಿಕೆಗಳು ಸಾಕಷ್ಟು ವಿವಾದ ಸೃಷ್ಟಿಸಿದೆ. ತಾವು ಬ್ರಾಹ್ಮಣರ ಬಗ್ಗೆ ಮಾತನಾಡಿಲ್ಲ ಎನ್ನುವ ಸಮಜಾಯಿಷಿಯೂ ವಿವಾದವನ್ನು ತಣ್ಣಗಾಗಿಸಿಲ್ಲ. ಅಂಬೇಡ್ಕರ್ ಮತ್ತು ಪೆರಿಯಾರ್ ಅವರನ್ನು ಉಲ್ಲೇಖಿಸಿ, ಚೇತನ್ ಬ್ರಾಹ್ಮಣ್ಯದ ಅಪಾಯಗಳನ್ನು ಕುರಿತು ಮಾತನಾಡಿದ್ದಾರೆ. ಬ್ರಾಹ್ಮಣ್ಯದ ಅಪಾಯಗಳು ಎಂದರೆ ಮೂಲತಃ ಅಸ್ಪೃಶ್ಯತೆಯನ್ನು ಜೀವಂತವಾಗಿರಿಸುವುದು ಮತ್ತು ಜಾತಿ ಆಧಾರಿತ ತಾರತಮ್ಯಗಳನ್ನು ಯಥಾಸ್ಥಿತಿಯಲ್ಲಿರಿಸುವುದೇ ಆಗಿದೆ. ಇದು ಭಾರತದ ನಾಗರಿಕ ಸಮಾಜದಲ್ಲಿ ಬೇರೂರಿರುವ ಒಂದು ಮನಸ್ಥಿತಿಯೂ ಹೌದು, ಬಹುತೇಕ ಮೇಲ್ಜಾತಿಗಳಲ್ಲಿ ಇಂದಿಗೂ ಜೀವಂತವಾಗಿರುವ ಮನೋಭಾವವೂ ಹೌದು. ಯಾವ ಒಂದು ಮನಸ್ಥಿತಿಯನ್ನು ಭಾರತದ ಸಮಾಜ ಸುಧಾರಕರು ಶತಮಾನಗಳಿಂದ ವಿರೋಧಿಸುತ್ತಾ ಬಂದಿದ್ದಾರೋ, ಅದೇ ಬ್ರಾಹ್ಮಣ್ಯದ ಲಕ್ಷಣಗಳು ಇಂದಿಗೂ ಒಂದು ಸಮುದಾಯದ ಅಂತಃಸತ್ವ ಎನ್ನುವುದಾದರೆ, ಚೇತನ್ ಹೇಳಿರುವುದರಲ್ಲಿ ತಪ್ಪೇನೂ ಕಾಣುವುದಿಲ್ಲ. ಡಾ ಬಿ ಆರ್ ಅಂಬೇಡ್ಕರ್ ಮತ್ತು ಪೆರಿಯಾರ್ ಸಹ ಇದನ್ನೇ ಹೇಳಿದ್ದಾರಲ್ಲವೇ? ತನ್ನ ತಾತ್ವಿಕ ಸಂಕೋಲೆಗಳನ್ನು ಕಳಚಿಕೊಂಡು ಸಹ ಮಾನವರೊಡನೆ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಕೂಡಿ ಬಾಳುವ ನಿಟ್ಟಿನಲ್ಲಿ ಯೋಚಿಸುವುದು ಇಂದಿನ ತುರ್ತು.

ಜಾತಿ ಆಧಾರಿತ ತಾರತಮ್ಯ, ಪಕ್ಷಪಾತ, ಮತಭೇದ, ಸಾಂಸ್ಕೃತಿಕ ಕ್ರೌರ್ಯ, ಆಚರಣಾತ್ಮಕ ದೌರ್ಜನ್ಯ ಇವೆಲ್ಲವನ್ನೂ ಬ್ರಾಹ್ಮಣ್ಯ ಪ್ರತಿನಿಧಿಸುತ್ತದೆ ಎಂದಾದರೆ ಈ ಬ್ರಾಹ್ಮಣ್ಯ ಇಲ್ಲದೆಯೂ ಬ್ರಾಹ್ಮಣಿಕೆಯನ್ನು ಕಾಪಾಡಿಕೊಳ್ಳಲು ಸಾಧ್ಯವಿಲ್ಲವೇ? ಆಚರಣೆಯ ನೆಲೆಯಲ್ಲಿ ಇದು ಇಂದಿಗೂ ವಾಸ್ತವವೇ ಅಲ್ಲವೇ? ಬ್ರಾಹ್ಮಣ್ಯ ಎನ್ನುವುದು ನಿರ್ದಿಷ್ಟ ಜಾತಿ ಸೂಚಕ ಪದ ಎನ್ನುವುದಕ್ಕಿಂತಲೂ ಹೆಚ್ಚಾಗಿ ಅದು ಒಂದು ಮನಸ್ಥಿತಿಯ ಸಂಕೇತ. ಒಂದು ಸಾಮುದಾಯಿಕ ಅಸ್ಮಿತೆಯನ್ನು ಪ್ರತಿನಿಧಿಸುವ ಸಂಕೇತ. ಜಾತಿ ಶ್ರೇಷ್ಠತೆಯನ್ನು ಸಂರಕ್ಷಿಸಿಕೊಳ್ಳುವ ಅನಿವಾರ್ಯ ಸಾಧನ. ತಾನು ಜನ್ಮತಃ ಶ್ರೇಷ್ಠ ಎಂದು ಭಾವಿಸುವ ಮತ್ತು ಅನ್ಯರನ್ನು ಸಾಮಾಜಿಕವಾಗಿ ಸಾಂಸ್ಕೃತಿಕವಾಗಿ ನಿಕೃಷ್ಟವಾಗಿ ಕಾಣುವ ಒಂದು ಮನಸ್ಥಿತಿಯನ್ನೇ ಬ್ರಾಹ್ಮಣ್ಯ ಎಂದು ವ್ಯಾಖ್ಯಾನಿಸಲಾಗಿದೆ. ಈ ಪದಬಳಕೆ ಚಾರಿತ್ರಿಕವಾಗಿ ಬೆಳೆದುಬಂದಿರುವಂತಹುದು. ಹಲವಾರು ದಾರ್ಶನಿಕರು ಈ ಮನಸ್ಥಿತಿಯನ್ನು ಧಿಕ್ಕರಿಸಿಯೇ ತಮ್ಮ ಬ್ರಾಹ್ಮಣಿಕೆಯನ್ನೂ ತ್ಯಜಿಸಿದ್ದಿದೆ, ಅಲ್ಲವೇ? ಡಾ ಅಂಬೇಡ್ಕರ್ ಇದನ್ನು ಬ್ರಾಹ್ಮಣಶಾಹಿ ಅಥವಾ ಬ್ರಾಹ್ಮಣವಾದ ಎಂದು ಗುರುತಿಸುತ್ತಾರೆ. ಭಾರತದ ಧರ್ಮಶಾಸ್ತ್ರಗಳು ಮತ್ತು ತತ್ವಶಾಸ್ತ್ರಗಳ ಹಿನ್ನೆಲೆಯಲ್ಲಿ ನೋಡಿದಾಗ ವೈದಿಕ ಪರಂಪರೆಯನ್ನು ಹೀಗೆ ಗುರುತಿಸಿರುವುದನ್ನೂ ಕಾಣಬಹುದು.

ಏಕೆ ಹೀಗೆ ಎಂಬ ಪ್ರಶ್ನೆಗೆ ಇತಿಹಾಸದ ಪುಟಗಳಲ್ಲೇ ಉತ್ತರ ದೊರೆಯುತ್ತದೆ. ಮನುಸ್ಮೃತಿಯನ್ನು ಆಧರಿಸಿದ ಮತಧರ್ಮದಲ್ಲಿ ಜಾತಿ ತಾರತಮ್ಯಗಳನ್ನು ಮತ್ತು ಜಾತಿ ಆಧಾರಿತ ದೌರ್ಜನ್ಯಗಳನ್ನು ಸಮರ್ಥಿಸಲು ಬಳಸುವ ಆಯುಧಗಳಲ್ಲಿ ಬ್ರಾಹ್ಮಣ್ಯವೂ ಒಂದು. ಜನ್ಮತಃ ಶ್ರೇಷ್ಠತೆಯನ್ನು ಗಳಿಸುವ ಒಂದು ವಿಕೃತ ಪರಿಕಲ್ಪನೆಗೆ ಧರ್ಮಶಾಸ್ತ್ರಗಳೂ ಸಾಕಷ್ಟು ಮೇವು ಒದಗಿಸಿವೆ ಅಲ್ಲವೇ? ಈ ಧರ್ಮಶಾಸ್ತ್ರಗಳನ್ನೇ ಡಾ. ಅಂಬೇಡ್ಕರ್, ಭಾರತೀಯ ಸಮಾಜದ ಬಹುಸಂಖ್ಯಾತ ಜನಸಮುದಾಯಗಳ ನೆಲೆಯಲ್ಲಿ ನಿಂತು ವಿಮರ್ಶಿಸಿದ್ದಾರೆ. ಬುದ್ಧನ ಕಾಲದಿಂದ ಬಸವಣ್ಣನವರೆಗೂ ಭಾರತದ ಸಮಾಜ ಸುಧಾರಕರು, ದಾರ್ಶನಿಕರು ಈ ವೈದಿಕ ಪರಂಪರೆಯ ವಿರುದ್ಧ ದನಿ ಎತ್ತುತ್ತಲೇ ಶೋಷಿತ ಸಮುದಾಯಗಳಿಗೆ ಒಂದು ಗೌರವಯುತ ಸ್ಥಾನ ನೀಡಲು ಪ್ರಯತ್ನಿಸಿದ್ದಾರೆ. ಇದೇ ಪ್ರಯತ್ನವನ್ನು ಡಾ ಅಂಬೇಡ್ಕರ್ ಸಹ ಮಾಡಿದ್ದಾರೆ, ಪೆರಿಯಾರ್ ಕೊಂಚ ಭಿನ್ನ ಮಾರ್ಗ ಅನುಸರಿಸಿದರೂ ಮೂಲತಃ ಈ ಪರಿವರ್ತನೆಯ ಹಾದಿಯಲ್ಲೇ ಸಾಗಿದ್ದಾರೆ. ಈ ಜಾತಿ ಶ್ರೇಷ್ಠತೆಯ ಪರಿಕಲ್ಪನೆಯೇ ಭಾರತದ ಜಾತಿ ವ್ಯವಸ್ಥೆಯ ಅಂತಃಸತ್ವವೂ ಹೌದಲ್ಲವೇ? ವ್ಯಕ್ತಿಗತ ನೆಲೆಯಲ್ಲಿನ ಬ್ರಾಹ್ಮಣಿಕೆಗೂ ಸಾಮುದಾಯಿಕ ನೆಲೆಯ ಬ್ರಾಹ್ಮಣ್ಯಕ್ಕೂ ಇರುವ ಸೂಕ್ಷ್ಮಗಳನ್ನೂ ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ಸಾಮುದಾಯಿಕ ಅಸ್ಮಿತೆಗಾಗಿ ಬ್ರಾಹ್ಮಣಿಕೆಯನ್ನು ಉಳಿಸಿಕೊಂಡಿರುವ ಅನೇಕ ಮಹನೀಯರು ಬ್ರಾಹ್ಮಣ್ಯ ಎನ್ನಲಾಗುವ ಪರಿಕಲ್ಪನೆಯಿಂದ ವಿಮುಖರಾಗಿರುವುದನ್ನೂ ನಾವು ಗಮನಿಸಬಹುದು. ಬ್ರಾಹ್ಮಣ್ಯವನ್ನು ಧಿಕ್ಕರಿಸಿ ಹೊರಬಂದ ಬ್ರಾಹ್ಮಣರೂ ಸಾಕಷ್ಟು ಸಂಖ್ಯೆಯಲ್ಲಿ ಇರುವುದರಿಂದ ಇಲ್ಲಿ ಬ್ರಾಹ್ಮಣ ಮತ್ತು ಬ್ರಾಹ್ಮಣ್ಯದ ಪೂರ್ಣ ಸಮೀಕರಣ ಉಚಿತ ಎನಿಸುವುದಿಲ್ಲ. ಹಾಗಾಗಿ "ಬ್ರಾಹ್ಮಣ= (ಬ್ರಾಹ್ಮಣ್ಯ)2" ಎನ್ನುವ ಗಣಿತ ಶಾಸ್ತ್ರದ ಪ್ರಮೇಯವನ್ನು ಬಳಸುವುದೂ ಪ್ರಮಾದವಾಗುತ್ತದೆ. ಜನ್ಮತಃ ಬಂದ ತನ್ನ ಅಸ್ಮಿತೆಯನ್ನು ಕಳಚಿಕೊಂಡು ಸಹಮಾನವರೊಡನೆ ಬದುಕುವ ಪ್ರವೃತ್ತಿ ಬೆಳೆಸಿಕೊಂಡರೆ ಸಹಜವಾಗಿಯೇ ಬ್ರಾಹ್ಮಣ್ಯದ ಒಳಸುಳಿಗಳು ಅರ್ಥವಾಗಿ ಬಿಡುತ್ತವೆ. ಆದರೆ ಭಾರತದ ಜಾತಿ ವ್ಯವಸ್ಥೆಯಲ್ಲಿ ಬೇರುಬಿಟ್ಟಿರುವ ಸಾಮುದಾಯಿಕ ಅಸ್ಮಿತೆಗಳು ಮತ್ತು ಮತಧಾರ್ಮಿಕ ನಿಷ್ಠೆ ಈ ವಿಮೋಚನೆಗೆ ಅವಕಾಶ ನೀಡುವುದಿಲ್ಲ. ಇದು ಬ್ರಾಹ್ಮಣಶಾಹಿಯ ಶಕ್ತಿ ಮತ್ತು ಅಂತಃಸತ್ವವೂ ಆಗಿದೆ. ಬ್ರಾಹ್ಮಣಶಾಹಿ ಎನ್ನುವುದು ಇವೆಲ್ಲವನ್ನೂ ಒಳಗೊಂಡ ಒಂದು ಸಾಮಾಜಿಕ–ಸಾಂಸ್ಕೃತಿಕ ವಿದ್ಯಮಾನ. ಇದು ಎಲ್ಲ ಜಾತಿಗಳಲ್ಲೂ ಕಂಡುಬರುವ ವಿದ್ಯಮಾನವೂ ಹೌದು. ಇದನ್ನೇ ಅಂಬೇಡ್ಕರರೂ ಬ್ರಾಹ್ಮಣಶಾಹಿಯ ವ್ಯಾಖ್ಯಾನದ ಮೂಲಕ ಸ್ಪಷ್ಟವಾಗಿ ಹೇಳಿದ್ದಾರೆ. ಇದು ಸಹಜವಾಗಿಯೇ ಎಲ್ಲ ಜಾತಿಗಳಲ್ಲೂ ವ್ಯಾಪಕವಾಗುತ್ತಿದ್ದು ಜಾತಿ ವ್ಯವಸ್ಥೆಯನ್ನು ಚಾಲ್ತಿಯಲ್ಲಿಡುವ ವಾಹಕಗಳೂ ಆಗುತ್ತವೆ.

ಈ ಹೊತ್ತಿನ ಆಧುನಿಕತೆಯ ಸೋಗಿನಲ್ಲೂ ಸಹ, ಸಾಮುದಾಯಿಕ ನೆಲೆಯಲ್ಲಿ ಈ ತಾರತಮ್ಯಗಳು, ಭೇದಭಾವಗಳು ಇರುವುದನ್ನು ನಿರಾಕರಿಸಲಾಗುವುದಿಲ್ಲ. ದೇವಸ್ಥಾನಗಳಲ್ಲಿನ ಪಂಕ್ತಿಭೇದ, ಮನೆಗಳಲ್ಲಿ, ದೇವಾಲಯಗಳಲ್ಲಿ ನಡೆಸುವ ಹೋಮಗಳು, ಪೂಜಾ ವಿಧಿವಿಧಾನಗಳಲ್ಲಿ ಈ ಸೂಕ್ಷ್ಮಗಳು ಅಡಗಿವೆ ಅಲ್ಲವೇ? ಈ ಬ್ರಾಹ್ಮಣೀಕರಣದ ಪ್ರಭಾವಕ್ಕೊಳಗಾದ ಅಸಂಖ್ಯಾತ ದಲಿತರೂ ಸಹ ಮತಧರ್ಮ, ಸಂಸ್ಕೃತಿ, ಆಚರಣೆಗಳ ಹೆಸರಿನಲ್ಲಿ ಈ ನಿಯಮಗಳನ್ನು ಆಚರಣೆಯ ನೆಲೆಯಲ್ಲಿ ಒಪ್ಪಿಕೊಳ್ಳುತ್ತಲೇ ಬಂದಿದ್ದಾರೆ. ಆಚರಿಸುತ್ತಲೂ ಬಂದಿದ್ದಾರೆ. ಇಂದು ನಾವು ವಿರೋಧಿಸಬೇಕಿರುವುದು ತಾರತಮ್ಯ ಸೃಷ್ಟಿಸುವ ಮತ್ತು ಪೋಷಿಸುವ ದುಷ್ಟ ಗುಣಗಳನ್ನು. ಅಸ್ಪೃಶ್ಯತೆ ಮತ್ತು ಜಾತಿ ಭೇದ ಇದರ ಒಂದು ಲಕ್ಷಣ. ಇಡೀ ಬ್ರಾಹ್ಮಣ ಸಮುದಾಯವನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವುದಕ್ಕಿಂತಲೂ, ಈ ಜಾತಿ ತಾರತಮ್ಯ, ಶ್ರೇಷ್ಠತೆಯ ಅಹಮಿಕೆ, ಮೇಲುಕೀಳು ಎಂಬ ಭಾವನೆ ಇವುಗಳನ್ನು ಪೋಷಿಸುವ ಅಥವಾ ಸಮರ್ಥಿಸುವವರನ್ನು ಖಂಡಿಸುವುದು ಸಮರ್ಥನೀಯ. ಡಾ ಅಂಬೇಡ್ಕರ್ ಸಹ ಈ ಬ್ರಾಹ್ಮಣವಾದವನ್ನೇ ಖಂಡಿಸಿದ್ದಾರೆ. ಬ್ರಾಹ್ಮಣವಾದ, ಬ್ರಾಹ್ಮಣೀಕರಣ, ಬ್ರಾಹ್ಮಣ್ಯ ಮುಂತಾದ ಪದಗಳು ನಿರ್ದಿಷ್ಟ ಜಾತಿ ಸೂಚಕವೇ ಆಗಬೇಕೆಂದಿಲ್ಲ. ಈ ಮನೋವೃತ್ತಿ ಅನ್ಯ ಜಾತಿಗಳಲ್ಲೂ ಪ್ರಬಲವಾಗಿವೆ. ಕರ್ಮಠರಲ್ಲಿ ಹೆಚ್ಚಾಗಿರುತ್ತದೆ. ವೈಚಾರಿಕ ನೆಲೆಯಲ್ಲಿ ಇದರ ವಿರುದ್ಧ ಹೋರಾಡಿದವರಲ್ಲಿ ಪೆರಿಯಾರ್ ಸಹ ಒಬ್ಬರು. ಈ ವ್ಯಾಖ್ಯಾನಗಳಲ್ಲಿ ಬ್ರಾಹ್ಮಣ ಎಂಬ ಪದ ಬಳಕೆಯನ್ನು ಜಾತಿ ಸೂಚಕ ಎಂದು ಪರಿಭಾವಿಸುವುದೇ ನಮ್ಮ ಸಮಾಜದಲ್ಲಿ ಅಂತರ್ಗತವಾಗಿರುವ ಮೌಢ್ಯದ ಸಂಕೇತ ಎನ್ನಬಹುದು. ಈ ಬೌದ್ಧಿಕ ಮೌಢ್ಯವನ್ನು ಹೋಗಲಾಡಿಸುವುದು ನಮ್ಮ ಆದ್ಯತೆಯಾಗಬೇಕು.



ಯಾವುದೇ ಕಾರಣಕ್ಕಾದರೂ ಸಹ ಮಾನವರನ್ನು ಸ್ಪರ್ಶಿಸಲು ನಿರಾಕರಿಸುವುದು ಜಾತಿ ತಾರತಮ್ಯ ಮತ್ತು ಮೇಲು ಕೀಳುಗಳ ಮನೋಭಾವಕ್ಕೆ ಪುಷ್ಟಿ ನೀಡುತ್ತದೆ. ಅಸ್ಪೃಶ್ಯತೆಯ ಮೂಲವೂ ಈ ಧೋರಣೆಯಿಂದಲೇ ಉಗಮಿಸಿರುವುದಲ್ಲವೇ? ಮನುಷ್ಯರನ್ನು ಮನುಷ್ಯರಂತೆ ಕಾಣದ ಒಂದು ವಿಕೃತ ವ್ಯವಸ್ಥೆಯನ್ನು ವೈಚಾರಿಕ ನೆಲೆಯಲ್ಲಿ, ಮಾನವೀಯ ನೆಲೆಯಲ್ಲಿ ಹೇಗೆ ಸ್ವೀಕರಿಸಲು ಸಾಧ್ಯ? ಅಂಬೇಡ್ಕರ್ ಮತ್ತು ಪೆರಿಯಾರ್ ಅವರ ಉಲ್ಲೇಖಿತ ಹೇಳಿಕೆಗಳೂ ಇದನ್ನೇ ಸೂಚಿಸುತ್ತವೆ. ಇದು ಒಂದು ನಿರ್ದಿಷ್ಟ ಸಮುದಾಯದ ಪ್ರಶ್ನೆ ಅಲ್ಲ. ಆದರೂ ಸಾಮುದಾಯಿಕವಾಗಿ ಸಮಾಜದ ಎಲ್ಲ ಸ್ತರಗಳಲ್ಲಿ ಬೇರೂರಿರುವ ಆಚರಣೆಗಳ, ಪದ್ಧತಿಗಳ ಪ್ರಶ್ನೆ. 'ಅನ್ಯ'ರನ್ನು ಸೃಷ್ಟಿಸುವ ಯಾವುದೇ ಸಾಂಸ್ಕೃತಿಕ–ಸಾಮುದಾಯಿಕ ಪ್ರಜ್ಞೆ ವೈಚಾರಿಕ ನೆಲೆಯಲ್ಲಿ ಖಂಡನಾರ್ಹವೇ ಆಗುತ್ತದೆ. ಚೇತನ್ ಇದನ್ನೇ ಹೇಳಿದ್ದಾರೆ. ಅವರ ವಿರುದ್ಧ ಎಫ್ ಐ ಆರ್ ದಾಖಲಿಸುವ ಬದಲು, ಮಾನವೀಯ ನೆಲೆಯಲ್ಲಿ ನಿಂತು ಆತ್ಮಾವಲೋಕನ ಮಾಡಿಕೊಳ್ಳುವುದು ಒಳಿತಲ್ಲವೇ? ವ್ಯಕ್ತಿಗತ ನೆಲೆಯ ವೈಚಾರಿಕತೆಯನ್ನೂ ಸಾಮುದಾಯಿಕ ನೆಲೆಯಲ್ಲಿ ಕಳೆದುಕೊಳ್ಳುವಂತಹ ವಿಕೃತ ಪರಿಸ್ಥಿತಿಯನ್ನು ಇತ್ತೀಚೆಗೆ ಪೋಷಿಸಲಾಗುತ್ತಿದೆ. ಇದು ಸೌಹಾರ್ದಯುತ ಸಮಾಜಕ್ಕೆ ಅಪಾಯಕಾರಿಯಾಗುತ್ತದೆ. ಮೇಲ್ನೋಟಕ್ಕೆ ಒಪ್ಪಿಕೊಂಡರೂ ಅಪ್ಪಿಕೊಳ್ಳುವ ಮನಸ್ಥಿತಿ ಇಲ್ಲದಿದ್ದರೆ ವೈಚಾರಿಕತೆಯೂ ಸೊರಗಿಹೋಗುತ್ತದೆ. ಆಧುನಿಕ ಜೀವನಶೈಲಿಯಲ್ಲಿ ಈ ದ್ವಂದ್ವವನ್ನು ಸ್ಪಷ್ಟವಾಗಿ ಗುರುತಿಸಬಹುದು. ಇದರಿಂದ ಮುಕ್ತರಾಗುವ ನಿಟ್ಟಿನಲ್ಲಿ ಯೋಚಿಸುವ ತೆರೆದ ಮನಸುಗಳು ಹೇರಳವಾಗಿವೆ ಆದರೆ ಪ್ರಬಲವಾಗಿಲ್ಲ. ಜಾತಿ ದೌರ್ಜನ್ಯಗಳ ಬಗ್ಗೆ ಕಾಣುವ ಸಾರ್ವಜನಿಕ ಮೌನವೇ ಇದಕ್ಕೆ ಸಾಕ್ಷಿ.

ಚೇತನ್ ಅವರ ಮಾತುಗಳಲ್ಲಿ ಸೌಹಾರ್ದತೆಯ ಸೂಕ್ಷ್ಮ ಸಂವೇದನೆಯೂ ಇರುವುದನ್ನು ಗಮನಿಸಿದ್ದರೆ ಬಹುಶಃ ಇದು ವಿವಾದ ಸೃಷ್ಟಿಸುತ್ತಿರಲಿಲ್ಲ. ಒಂದು ಸೌಹಾರ್ದಯುತ ಸಮ–ಸಮಾಜದ ನಿರ್ಮಾಣದ ದೃಷ್ಟಿಯಿಂದ ಅಸ್ಪೃಶ್ಯತೆ ಮತ್ತು ಜಾತಿ ತಾರತಮ್ಯಗಳನ್ನು ತೊಡೆದುಹಾಕುವ ಅನಿವಾರ್ಯತೆ ನಮ್ಮೆದುರಿದೆ. ಚಾಲ್ತಿಯಲ್ಲಿರುವ ಸಾಂಸ್ಕೃತಿಕ ಧೋರಣೆ ಮತ್ತು ಸಾಂಪ್ರದಾಯಿಕ ಆಚರಣೆಗಳು ಈ ನಿಟ್ಟಿನಲ್ಲಿ ಅಡ್ಡಿಯಾಗುತ್ತಿದ್ದರೆ ಅದನ್ನು ತೊಡೆದುಹಾಕುವ ಜವಾಬ್ದಾರಿಯೂ ನಮ್ಮ ಮೇಲಿದೆ. ಸಂಪ್ರದಾಯ, ಪರಂಪರೆ, ಕಲ್ಪಿತ ಶ್ರೇಷ್ಠತೆ ಮತ್ತು ಮತಧಾರ್ಮಿಕ ಅಸ್ಮಿತೆಗಳ ಸಂಕೋಲೆಗಳನ್ನು ಕಳಚಿಕೊಳ್ಳದೆ ಹೋದರೆ ಇದು ಸಾಧ್ಯವಾಗುವುದೂ ಇಲ್ಲ. ಈ ಸಂಕೋಲೆಗಳನ್ನು ಯಥಾಸ್ಥಿತಿಯಲ್ಲಿರಿಸುವ ಒಂದು ಅಮೂರ್ತ ಶಕ್ತಿಯನ್ನೇ ಡಾ ಅಂಬೇಡ್ಕರ್ ಬ್ರಾಹ್ಮಣ್ಯ ಅಥವಾ ಬ್ರಾಹ್ಮಣಶಾಹಿ ಎಂದು ಗುರುತಿಸುತ್ತಾರೆ. ಈ ಶಕ್ತಿಯ ವಿರುದ್ಧ, ತುಳಿತಕ್ಕೊಳಗಾಗುವ, ಶೋಷಿತ ಜನಸಮುದಾಯಗಳು ದನಿ ಎತ್ತುತ್ತಲೇ ಇವೆ, ಹೋರಾಡುತ್ತಲೇ ಇವೆ. ಇಂದಿಗೂ ತನ್ನ ಹುಟ್ಟಿನ ಅಸ್ಮಿತೆಯಿಂದಲೇ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಮತ್ತು ಆರ್ಥಿಕ ದೌರ್ಜನ್ಯಕ್ಕೊಳಗಾಗುವ ಜನಸಮುದಾಯಗಳು ನಮ್ಮ ನಡುವೆ ಇದೆ ಎನ್ನುವುದೇ ನಮ್ಮ ಆಲೋಚನೆಯ ದಿಕ್ಕನ್ನು ಬದಲಿಸಬೇಕಿದೆ. ಅಲ್ಲವೇ?

ಈ ಜಾತಿ ತಾರತಮ್ಯಗಳನ್ನು, ದೌರ್ಜನ್ಯಗಳನ್ನು ಮತಭೇದವನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಪ್ರಜ್ಞಾವಂತ ಸಮಾಜ ಯೋಚಿಸಬೇಕಲ್ಲವೇ? ದಲಿತರ ಮೇಲೆ ದೌರ್ಜನ್ಯ ಎಸಗುತ್ತಿರುವ ಯಾವುದೇ ಸಮುದಾಯ ಜಾತಿ ಶ್ರೇಷ್ಠತೆಯ ಅಹಮಿಕೆಯಿಂದಲೇ ತನ್ನ ಅಸ್ತಿತ್ವವನ್ನು ಕಂಡುಕೊಳ್ಳಲ ಯತ್ನಿಸುತ್ತದೆ. ಶೋಷಿತರನ್ನು, ದುರ್ಬಲರನ್ನು, ಅಸಹಾಯಕರನ್ನು ನಿಯಂತ್ರಣದಲ್ಲಿರಿಸಲು ಈ ಸಮುದಾಯಗಳಿಗೆ ಸಾಮಾಜಿಕ ಸ್ಥಾನಮಾನಗಳು ಭೌತಿಕವಾಗಿ ನೆರವಾದರೆ, ಬ್ರಾಹ್ಮಣ್ಯ ಎನ್ನಲಾಗುವ ಸಾಂಪ್ರದಾಯಿಕ ಮನಸ್ಥಿತಿ ಒಂದು ಬೌದ್ಧಿಕ ಅಸ್ತ್ರವಾಗುತ್ತದೆ. ಹಾಗಾಗಿಯೇ ಇಂದು ದಲಿತರ ಮೇಲಿನ ದೌರ್ಜನ್ಯಗಳು ಎಲ್ಲ ಸ್ತರಗಳಲ್ಲೂ ನಡೆಯುತ್ತಿದೆ. ಇದು ಭಾರತವನ್ನು ಕಾಡುತ್ತಿರುವ ಒಂದು ಸಾಮಾಜಿಕ

ಪುಟ 10 ಕ್ಕೆ

## ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಸರಕಾರಿ ಮುದ್ರೆ ದುರುಪಯೋಗದ ಅಪರಾಧ

ನಟ ಚೇತನ್ ಅವರ ವಿರುದ್ಧ ಬ್ರಾಹ್ಮಣರನ್ನು ಎತ್ತಿಕಟ್ಟಿ ಅಶಾಂತಿ ಸೃಷ್ಟಿಸಲು ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಹೆಚ್ ಎಸ್ ಸಚ್ಚಿದಾನಂದ ಮೂರ್ತಿ ಎಂಬವರು ಯತ್ನ ನಡೆಸುತ್ತಿದ್ದಾರೆ. ಇದಕ್ಕಾಗಿ ಸರ್ಕಾರಿ ಸಂಸ್ಥೆಯ ಹೆಸರು ಮತ್ತು ಸರ್ಕಾರಿ ಮುದ್ರೆ/ಲಾಂಛನವನ್ನು ದುರುಪಯೋಗಪಡಿಸಿಕೊಂಡು ಕ್ರಿಮಿನಲ್ ಅಪರಾಧ ಮಾಡಿದ್ದಾರೆ.

ಬ್ರಾಹ್ಮಣ ಅಭಿವೃದ್ಧಿ ಮಂಡಳಿಯು ಬ್ರಾಹ್ಮಣರ ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಮೀಸಲಾಗಿರುವ ಸರ್ಕಾರಿ ಸಂಸ್ಥೆಯಾಗಿದೆ. ಬಡ, ಹಿಂದುಳಿದ ಬ್ರಾಹ್ಮಣರ ಏಳಿಗೆಗಾಗಿ ಯೋಜನೆಗಳನ್ನು ರೂಪಿಸುವುದು ಮತ್ತು ಜಾರಿ ಮಾಡುವುದಷ್ಟೇ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಕೆಲಸವಾಗಿರುತ್ತದೆ. ಬಡ, ಹಿಂದುಳಿದ ಬ್ರಾಹ್ಮಣರ ಅಭಿವೃದ್ಧಿಯ ನಿಟ್ಟಿನಲ್ಲಿ ಕೆಲಸ ಮಾಡದ ಮಂಡಳಿ ಅಧ್ಯಕ್ಷರು, ಸರ್ಕಾರಿ ದಾಖಲೆ/ಮುದ್ರೆ/ ಲಾಂಛನ ಮತ್ತು ಕರ್ನಾಟಕ ಸರ್ಕಾರ ಎಂಬ ಹೆಸರನ್ನು ದುರುಪಯೋಗಪಡಿಸಿಕೊಂಡು ನಟ ಚೇತನ್ ವಿರುದ್ಧ ದೂರು ನೀಡುವ ಮೂಲಕ ಕ್ರಿಮಿನಲ್ ಅಪರಾಧ ಮಾಡಿದ್ದಾರೆ.

ಆದ್ದರಿಂದ ಬಸವ ಅನುಯಾಯಿ ಆಗಿರುವ ಶರಣ ಚೇತನ್ ಅಹಿಂಸಾ ವಿರುದ್ಧ ಸರ್ಕಾರಿ ದಾಖಲೆಯನ್ನು ದುರುಪಯೋಗಪಡಿಸಿಕೊಂಡು ಬ್ರಾಹ್ಮಣರನ್ನು ಎತ್ತಿಕಟ್ಟುವ, ಸಮುದಾಯಗಳ ಮಧ್ಯೆ ಅಶಾಂತಿ ಸೃಷ್ಟಿಸುವ ಮತ್ತು ಸರ್ಕಾರಿ ಲಾಂಛನ ದುರುಪಯೋಗ ಪಡಿಸಿಕೊಂಡಿರುವ ಹೆಚ್ ಎಸ್ ಸಚ್ಚಿದಾನಂದ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಕ್ರಮ ಕೈಗೊಳ್ಳಬೇಕು ಎಂದು ನಾನು ಪೊಲೀಸ್ ಕಮಿಷನರ್ ಗೆ ದೂರು ನೀಡಿದ್ದೇನೆ.

*–ಕಾವ್ಯ ಅಚ್ಯುತ್*



# ಕುಬೇರರ ಕೂಟದ ಸಭೆಯಲ್ಲಿ ಭಾರತದ ಪ್ರಧಾನಿಯ ಅದ್ಭುತ ನಟನೆ

**ಕಪಟ ನಾಟಕ ಸೂತ್ರಧಾರಿಯ ಪಾತ್ರ ನಿರ್ವಹಣೆಗೆ ಪ್ರಖ್ಯಾತರಾಗಿರುವ ನಮ್ಮ ಪ್ರಧಾನಿಗಳು ಜಿ–7 ಶೃಂಗಸಭೆಯಲ್ಲಿ ಕೆಳಗಿನ ಹಂತದಲ್ಲಾದರೂ ಪಾಲ್ಗೊಳ್ಳಲು ಆಹಾನಿಸಿದ್ದಕ್ಕೆ ಹೆಮ್ಮೆಯಿಂದ 'ಮುಕ್ತ ಸಮಾಜಗಳು ಹೇಳಿಕೆ'ಗೆ ಸಹಿ ಮಾಡಿದ್ದಾರೆ– ಜಗತ್ತಿನ ಅತ್ಯಂತ ಸರ್ವಾಧಿಕಾರಶಾಹೀ ಆಡಳಿತಗಾರರಲ್ಲಿ ಒಬ್ಬನೆಂಬ ತಮ್ಮ ಕುರಿತ ವಿಡಂಬನೆಯ ಬಗ್ಗೆ ಒಂದಿಷ್ಟು ಅಳುಕೂ ಇಲದೆ! ಅತ್ತ ಈ ಜಿ–7 ಸಭೆ ಈ ಕುಬೇರರಿಗೆ ಸಾಮ್ರಾಜ್ಯಶಾಹಿ ಅಧಿಪತ್ಯವನ್ನು ಹೇಗೆ ಉಳಿಸಿಕೊಳ್ಳುವುದು ಎನ್ನುವುದಕ್ಕೆ ಆದ್ಯತೆಯೇ ಹೊರತು ಕೋವಿಡ್ ಸಾಂಕ್ರಾಮಿಕದ ವಿರುದ್ಧ ಹೋರಾಟ ನಡೆಸುವುದಕ್ಕೆ ಅಲ್ಲ ಎನ್ನುವುದನ್ನು ತೋರಿಸಿಕೊಟ್ಟಿದೆ.**



* ಪ್ರಕಾಶ್ ಕಾರಟ್

ಇಬ್ಬಗೆ ಮಾತು ಮತ್ತು ಬೂಟಾಟಿಕೆಗೆ ಭಾರತದ ಪ್ರಧಾನಿ ನರೇಂದ್ರ ಮೋದಿ ತುಂಬಾ ಪ್ರಖ್ಯಾತರು. ಆದಾಗ್ಯೂ, ಕಾರ್ನ್‌ವಾಲ್‌ನಲ್ಲಿ ನಡೆದ ಜಿ–7 ಶೃಂಗಸಭೆಯ ಮಾಹಿತಿ ನೀಡುವ ಸಭೆಯಲ್ಲಿ ಅವರ ಪ್ರದರ್ಶನ ಹೊಸ ಎತ್ತರವನ್ನು ತಲುಪಿದೆ.

"ಮುಕ್ತ ಸಮಾಜಗಳು' ಎಂಬ ಅಧಿವೇಶನಕ್ಕೆ ದಕ್ಷಿಣ ಆಫ್ರಿಕಾ, ದಕ್ಷಿಣ ಕೊರಿಯಾ, ಆಸ್ಟ್ರೇಲಿಯಾ ಮತ್ತು ಭಾರತವನ್ನು ಆಹ್ವಾನಿಸಲಾಗಿತ್ತು. ಅದನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ಮೋದಿಯವರು "ಪ್ರಜಾಪ್ರಭುತ್ವ, ಚಿಂತನಾ ಸ್ವಾತಂತ್ರ್ಯ ಮತ್ತು ಅನಿರ್ಬಂಧತೆಗೆ ಭಾರತದ ನಾಗರಿಕತೆ ಬದ್ಧವಾಗಿದೆ" ಎಂದು ಸಾರಿದರು. "ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ' ಎಂಬ ಕ್ಲೀಷೆಯನ್ನು ಪುನರುಚ್ಚರಿಸಿದ ಮೋದಿ, "ಭಾರತವು ಜಿ–7 ಕೂಟ ಮತ್ತದರ ಅತಿಥಿ ಮಿತ್ರರ ಸಹಜ ಮಿತ್ರನಾಗಿದೆ' ಎಂದು ಘೋಷಿಸಿದರು. ತಮ್ಮೆಲ್ಲರ ಸಮಾನ ಮೌಲ್ಯಗಳನ್ನು "ಸರ್ವಾಧಿಕಾರಶಾಹಿ" ಯಂತಹ ಅನಿಷ್ಟಗಳಿಂದ ಉಂಟಾಗುವ ಹಲವು ಅಪಾಯಗಳಿಂದ ರಕ್ಷಿಸಲು ಭಾರತ ನೆರವಾಗುತ್ತದೆ ಎಂದು ಅವರು ಹೇಳಿದರು. ಜಗತ್ತಿನ ಅತ್ಯಂತ ಸರ್ವಾಧಿಕಾರಶಾಹೀ ಆಡಳಿತಗಾರರಲ್ಲಿ ಒಬ್ಬನೆಂಬ ವಿಡಂಬನೆಯ ಬಗ್ಗೆ ಒಂದಿಷ್ಟು ಅಳುಕೂ ಇಲ್ಲದೆ ಅವರು ಈ ಮಾತುಗಳನ್ನು ಹೇಳಿದರು.

'ಮುಕ್ತ ಸಮಾಜಗಳು ಹೇಳಿಕೆ'(ಓಪನ್ ಸೊಸೈಟೀಸ್ ಸ್ಟೇಟ್‌ಮೆಂಟ್)ಗೆ ಮೋದಿಯವರೂ ಸಹಿ ಮಾಡಿದ್ದಾರೆ. ಈ ಹೇಳಿಕೆಯು ಎಲ್ಲರಿಗೂ "ಅಂತರ್ಜಾಲದಲ್ಲಿ ಮತ್ತು ಅದರ ಹೊರಗೆ (ಆನ್‌ಲೈನ್ ಮತ್ತು ಆಫ್‌ಲೈನ್) ಮಾನವ ಹಕ್ಕುಗಳ" ಬಗ್ಗೆ ಮಾತನಾಡಿದೆ, "ಸಭೆ ಸೇರುವ ಹಕ್ಕು, ಸಂಘಟನೆ ಮತ್ತು ಶಾಂತಿಯುತವಾಗಿ ಒಂದುಗೂಡುವ ಹಕ್ಕು" ಇತ್ಯಾದಿಗಳ ಬಗ್ಗೆಯೂ ಮಾತಾಡಿದೆ.

ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವಕ್ಕೆ ವಿವಿಧ ವಿಭಾಗಗಳಿಂದ ಅಪಾಯ ಎದುರಾಗುತ್ತಿರುವ "ಸಂಕೀರ್ಣ ಕಾಲಘಟ್ಟದಲ್ಲಿ ನಾವಿದ್ದೇವೆ", ವಿವಿಧ ದಿಕ್ಕುಗಳಿಂದ "ಹೆಚ್ಚುತ್ತಿರುವ ಸರ್ವಾಧಿಕಾರಶಾಹಿ", "ಮಾನವ ಹಕ್ಕುಗಳ ಉಲ್ಲಂಘನೆ ಮತ್ತು ದುರುಪಯೋಗಗಳು" ಹಾಗೂ "ರಾಜಕೀಯ ಪ್ರೇರಿತ ಅಂತರ್ಜಾಲ ಮುಚ್ಚಿಕೆಗಳು"(ಇಂಟರ್‌ನೆಟ್ ಶಟ್‌ಡೌನ್) ಇವೇ ಮೊದಲಾದ ಅಪಾಯಗಳು ಬರುತ್ತಿವೆ ಎಂದು ಅದು ಹೇಳುತ್ತದೆ.

ಪ್ರಜಾಪ್ರಭುತ್ವದ ಮೌಲ್ಯಗಳು ಮತ್ತು ಹೇಳಿಕೆಯಲ್ಲಿ ಉಲ್ಲೇಖಿಸಲಾಗಿರುವ ಈ ಎಲ್ಲ ವಿಷಯಗಳ ಸಂಬಂಧದಲ್ಲಿ ಮೋದಿ ಸರ್ಕಾರದ ದಾಖಲೆ ತೀರಾ ಕಳಪೆಯಾಗಿದೆ. ಪ್ರತಿಬಂಧಕ ಬಂಧನಗಳಲ್ಲಿ ಹೊಸ ದಾಖಲೆಯನ್ನೇ ಬರೆದಿರುವ ಆಡಳಿತದ ನೇತೃತ್ವ ವಹಿಸಿರುವ ಮೋದಿಯವರು "ಚಿಂತನಾ ಸ್ವಾತಂತ್ರ್ಯ ಹಾಗೂ ನಿರ್ಬಂಧತೆ"ಯನ್ನು ಶ್ಲಾಘಿಸುತ್ತಾರೆ! ಅಧಿಕೃತ ಅಂಕಿಸಂಖ್ಯೆಗಳೇ ಹೇಳುವಂತೆ ಮೋದಿ ಆಡಳಿತದ 2015ರಿಂದ 2019ರ ಅವಧಿಯ ಐದು ವರ್ಷಗಳಲ್ಲಿ 'ಕಾನೂನುಬಾಹಿರ ಚಟುವಟಿಕೆ ತಡೆ ಕಾನೂನು' (ಯುಎಪಿಎ) ಅನ್ವಯ 5,128 ಮೊಕದ್ದಮೆಗಳು ದಾಖಲಾಗಿವೆ. 2015ಕ್ಕೆ ಹೋಲಿಸಿದರೆ, 2019ರಲ್ಲಿ ಯುಎಪಿಎ ಅಡಿ ಆದ ಬಂಧನಗಳ ಪ್ರಮಾಣದಲ್ಲಿ ಶೇಕಡ 72 ಏರಿಕೆಯಾಗಿದೆ. ಈ ಅವಧಿಯಲ್ಲಿ ರಾಜದ್ರೋಹದ ಪ್ರಕರಣಗಳು 229ಕ್ಕೆ ಏರಿವೆ. 2020ರಲ್ಲೂ, 2021ರ ಮೊದಲ ಐದು ತಿಂಗಳಲ್ಲೂ ಅವು ಏರುತ್ತಲೇ ಇವೆ.

ಮೂವರು ವಿದ್ಯಾರ್ಥಿ ಕಾರ್ಯಕರ್ತರಿಗೆ ಜಾಮೀನು ಮಂಜೂರು ಮಾಡುವ ಸಂದರ್ಭದಲ್ಲಿ ದೆಹಲಿ ಹೈಕೋರ್ಟ್, ಯುಎಪಿಎ ದುರುಪಯೋಗದ ಬಗ್ಗೆ ತೀಕ್ಷ್ಣ ಟೀಕೆ ಮಾಡಿದ್ದರೂ ಸರ್ಕಾರ ಈ ವಿಚಾರದಲ್ಲಿ ಸರಿದಾರಿಗೆ ಬರುವಂತೆ ಕಾಣುತ್ತಿಲ್ಲ. ಕೇಂದ್ರ ಗೃಹ ಸಚಿವಾಲಯದಡಿ ಬರುವ ದೆಹಲಿ ಪೊಲೀಸ್ ಇಲಾಖೆ, ಜಾಮೀನು ತೀರ್ಪಿನ ವಿರುದ್ಧ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿರುವುದರಿಂದ ಇದು ಗೊತ್ತಾಗುತ್ತದೆ.

'ಅಂತರ್ಜಾಲದ'ಲ್ಲಿ ಸ್ವಾತಂತ್ರ್ಯ' ಮತ್ತು 'ಅಂತರ್ಜಾಲ ಮುಚ್ಚಿಕೆ'ಗಳಿಗೆ ಸಂಬಂಧಿಸಿ ಹೇಳುವುದಾದರೆ, ಜಗತ್ತಿನಾದ್ಯಂತ ಸಂಭವಿಸಿದ 155 ಮುಚ್ಚಿಕೆಗಳಲ್ಲಿ ಭಾರತದ ಪಾಲೇ 109 ಆಗಿದೆ. ಅಂದರೆ ಶೇಕಡ 70ರಷ್ಟಿದೆ. ಕಟು ವಾಸ್ತವ ಹೀಗಿದ್ದರೂ ಮಾನ್ಯ ಮೋದಿಯವರು 'ರಾಜಕೀಯ ಪ್ರೇರಿತ ಅಂತರ್ಜಾಲ ಮುಚ್ಚಿಕೆಗಳು', ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವಕ್ಕೆ ಅಪಾಯಕಾರಿಯಾದುದು ಎಂದು ಬಹಳ ರಸವತ್ತಾಗಿ ಹೇಳುತ್ತಾರೆ.

ಪ್ರತಿಕಾ ಸ್ವಾತಂತ್ರ್ಯದ ವಿಚಾರಕ್ಕೆ ಬಂದರೆ, ಜಾಗತಿಕ ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕದಲ್ಲಿ 180 ದೇಶಗಳ ಪೈಕಿ ಭಾರತ 142ನೇ ರ್‍ಯಾಂಕ್ ಪಡೆದಿದೆ. 'ರಿಪೋರ್ಟರ್ಸ್ ವಿದೌಟ್ ಬಾರ್ಡರ್ಸ್' ಸಂಸ್ಥೆ ಈ ರ್‍ಯಾಂಕಿಂಗ್ ಸಿದ್ಧಪಡಿಸುತ್ತದೆ. ಅದಾಗಲೇ ಜಾರಿಗೆ ಬಂದಿರುವ ಹೊಸ ಮಾಹಿತಿ ತಂತ್ರಜ್ಞಾನ (ಐಟಿ) ನಿಯಮಗಳು ಭಿನ್ನಮತವನ್ನು ಕ್ರಿಮಿನಲ್ ಚಟುವಟಿಕೆ ಎಂದು ಪರಿಗಣಿಸುತವೆ, ನಾಗರಿಕರ ಖಾಸಗಿತನದ ಹಕ್ಕುಗಳನ್ನು ಉಲ್ಲಂಘಿಸುತ್ತದೆ ಮತ್ತು ಸ್ವಯಂ–ಸೆನ್ಸಾರ್‌ಶಿಪ್ ಅನ್ನು ಪ್ರೋತ್ಸಾಹಿಸುತ್ತದೆ. ಅಂತರ್ಜಾಲ ಸುದ್ದಿ ತಾಣಗಳು ಮತ್ತು ವೆಬ್‌ಸೈಟ್‌ಗಳನ್ನು ಸರಕಾರದ ನಿಯಂತ್ರಣ ಮತ್ತು ಸೆನ್ಸಾರ್‌ಶಿಪ್ ಅಡಿ ತರಲಾಗಿದೆ. ಗುಂಪು ಹತ್ಯೆಗಳು ಮತ್ತು ದ್ವೇಷಾಪರಾಧಗಳನ್ನು ಎಗ್ಗಿಲ್ಲದಂತೆ ನಡೆಸಲಾಗುತ್ತಿದೆ. ಅವುಗಳಲ್ಲಿ ಪಾಲ್ಗೊಂಡ ಅಪರಾಧಿಗಳಿಗೆ ಶಿಕ್ಷೆಯೇ ಆಗುವುದಿಲ್ಲ.

'ಮುಕ್ತ ಸಮಾಜಗಳು ಹೇಳಿಕೆ'ಯಲ್ಲಿ ಉಲ್ಲೇಖಿಸಿರುವ ಮಾನದಂಡಗಳನ್ನು ಪರಿಗಣಿಸುವುದಾದಲ್ಲಿ, ಮೋದಿ ಸರ್ಕಾರವನ್ನು ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವಕ್ಕೆ ಅಪಾಯಕಾರಿಯಾದ ಆಡಳಿತ ಎಂದು ಗುರುತಿಸಬೇಕಾಗುತ್ತದೆ.

ಕುಬೇರರ ಕೂಟವಾದ ಜಿ–7 ನಾಯಕರು ಭಾರತದ ಪ್ರಧಾನಿಯ ಈ ಅದ್ಭುತ ನಟನೆಯನ್ನು ಮೆಚ್ಚಿಕೊಂಡಿರಬಹುದು. ಯಾಕೆಂದರೆ ಜಿ–7 ಶೃಂಗದ ಪ್ರಧಾನ ಗುರಿ ಚೀನಾ. ಜಿ–7 ದೇಶಗಳ ನಾಯಕರು ಸಹಿ ಮಾಡಿರುವ ಶೃಂಗ ಸಭೆ ಹೇಳಿಕೆಯಲ್ಲಿ ಚೀನಾಕ್ಕೆ ಸಂಬಂಧಿಸಿ ಅನೇಕ ಟೀಕೆಗಳಿವೆ. ಕೋವಿಡ್ ವೈರಸ್ ಹುಟ್ಟು, ನ್ಯಾಯಸಮ್ಮತವಲ್ಲದ ಮಾರುಕಟ್ಟೆಯೇತರ ನೀತಿಗಳು, ಮಾನವ ಹಕ್ಕುಗಳಿಗೆ ಅಗೌರವ, ಬೆಳೆಯುತ್ತಿರುವ ಆರ್ಥಿಕ ಮತ್ತು ಮಿಲಿಟರಿ ಶಕ್ತಿಯ ಅವಶ್ಯಕತೆಗಳಿಗೆ ಸಂಬಂಧಿಸಿದ ಸವಾಲುಗಳು –ಇವೇ ಮೊದಲಾದ ವಿಚಾರಗಳಲ್ಲಿ ಚೀನಾವನ್ನು ತರಾಟೆಗೆ ತೆಗೆದು ಕೊಳ್ಳಲಾಗಿದೆ.

ಈ ಎಲ್ಲ ಹಿನ್ನೆಲೆಯಲ್ಲಿ, ಅಮೆರಿಕ ನೇತೃತ್ವದ ಈ ಪಾಶ್ಚಿಮಾತ್ಯ ಮಿತ್ರಕೂಟಕ್ಕೆ ಮೋದಿ ನೇತೃತ್ವದಲ್ಲಿ ಭಾರತ ಒಂದು ಸ್ವಾಗತಾರ್ಹ ಆದರೆ ಅಧೀನ ಗೆಳೆಯನಾಗಿದೆ. ಹೀಗಾಗಿಯೇ, ಪಾಶ್ಚಿಮಾತ್ಯರ ಕಣ್ಣಿನಲ್ಲಿ ರಾಜಕೀಯ ಕೈದಿಗಳನ್ನು ಲಾಕ್‌ಅಪ್‌ನಲ್ಲಿ ಹಾಕುವುದು, ಮಾಧ್ಯಮ ದನಿಯನ್ನು ದಮನಿಸುವುದು ಮತ್ತು ಇಂಟರ್‌ನೆಟ್ ಶಟ್‌ಡೌನ್ ಇವೇ ಮುಂತಾದ ಮೋದಿ ಸರಕಾರದ ಐಬುಗಳು 'ಸಮಾನ ಮೌಲ್ಯಗಳ' ರಕ್ಷಣೆಯ ಹೋರಾಟದಲ್ಲಿ ತೆರುವ ಸಣ್ಣ ಬೆಲೆಯಾಗಿ ಕಾಣಿಸುತ್ತದೆ. ಕೆಳಗಿನ ಹಂತದಲ್ಲಾದರೂ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಆಹಾನಿಸಿದ್ದಕ್ಕೆ ಮೋದಿ ಹೆಮ್ಮೆ ಪಡಬಹುದು. ಆದರೆ, ಜಿ–7 ಎನ್ನುವುದು ಸಾಮ್ರಾಜ್ಯಶಾಹಿ ಸಿರಿವಂತ ರಾಷ್ಟ್ರಗಳ ಕೂಟ ಎಂಬ ವಾಸ್ತವತೆ ಬದಲಾಗದು. ಅಭಿವೃದ್ಧಿಶೀಲ ದೇಶಗಳಿಗೆ ನೂರು ಕೋಟಿ ಡೋಸ್ ಕೋವಿಡ್–ನಿರೋಧಕ ಲಸಿಕೆ ಒದಗಿಸುವ 'ಮಹಾ' ನಿರ್ಧಾರವನ್ನು ಶೃಂಗ ಸಭೆ ಪ್ರಕಟಿಸಿದ್ದರಲ್ಲೇ ಅದು ಸ್ಪಷ್ಟವಾಗಿ ಗೋಚರವಾಗುತ್ತದೆ. ಇದು ಅಭಿವೃದ್ಧಿಶೀಲ ದೇಶಗಳಿಗೆ ಅಗತ್ಯವಾದ ಲಸಿಕೆಯಲ್ಲಿ ಒಂದು ಸಣ್ಣ ಭಾಗವಷ್ಟೇ ಆಗಿದೆ ಎಂದು ಅನೇಕ ಅಂತಾರಾಷ್ಟ್ರೀಯ ಆರೋಗ್ಯ ಮತ್ತು ನಾಗರಿಕ ಸಂಘಟನೆಗಳು ಅಭಿಪ್ರಾಯ ಪಟ್ಟಿವೆ. ನಿಜ ಹೇಳಬೇಕೆಂದರೆ ಜಿ–7 ದೇಶಗಳು 1000 ಕೋಟಿ (10 ಬಿಲಿಯ) ಡೋಸ್ ಲಸಿಕೆಯನ್ನು ಸುಲಭವಾಗಿ ಕೊಡಬಹುದಾಗಿದೆ ಎಂಬುದು ಅವುಗಳ ಅಭಿಮತ. ಆದರೆ ಶ್ರೀಮಂತ ಬಂಡವಾಳಶಾಹಿ ದೇಶಗಳ ನೇತಾರರರಿಗೆ ಜನರ ಆರೋಗ್ಯಕ್ಕಿಂತ ಲಾಭವೇ ಮುಖ್ಯವಾಗಿದೆ.

ಇವರಿಗೆ ಸಾಮ್ರಾಜ್ಯಶಾಹಿ ಅಧಿಪತ್ಯವನ್ನು ಹೇಗೆ ಉಳಿಸಿಕೊಳ್ಳುವುದು ಎನ್ನುವುದಕ್ಕೆ ಆದ್ಯತೆಯೇ ಹೊರತು ಕೋವಿಡ್ ಸಾಂಕ್ರಾಮಿಕದ ವಿರುದ್ಧ ಹೋರಾಟ ನಡೆಸುವುದಕ್ಕೆ ಅಲ್ಲ ಎನ್ನುವುದನ್ನು ಜಿ–7 ಶೃಂಗ ಸಭೆ ಹಾಗೂ ನಂತರದ ನ್ಯಾಟೋ ಕೂಟದ ಬ್ರಸೆಲ್ಸ್ ಸಭೆಯ ನಡವಳಿಕೆಗಳು ತೋರಿಸಿಕೊಟ್ಟಿವೆ.

**ಅನು: ವಿಶ್ವ**



ಅಭಿವ್ಯಕ್ತಿ ಸ್ವಾತಂತ್ರ್ಯ ಕುರಿತ ಜಿ-7 ಹೇಳಿಕೆಗೆ ಭಾರತ ಸಹಿ ಹಾಕಿದೆ

ವ್ಯಂಗ್ಯಚಿತ್ರ:
ಸತೀಶ ಆಚಾರ್ಯ

ವ್ಯಂಗ್ಯಚಿತ್ರ:
ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್



**ನಾವು ಉತ್ತರ ಕಂಡುಕೊಳ್ಳಲೇಬೇಕಾದ ಪ್ರಶ್ನೆ ಏನೆಂದರೆ, ಎಲ್ಲರಿಗೂ ಯಾವಾಗ ಲಸಿಕೆ ನೀಡಲಾಗುತ್ತದೆ ಎಂಬುದು. ಎಲ್ಲರಿಗೂ ಲಸಿಕೆ ನೀಡಬೇಕಾದ ಅಗತ್ಯ ಏಕೆಂದರೆ, ಲಸಿಕೆ ಪಡೆಯದ ಒಂದು ಸಣ್ಣ ಜನ ವಿಭಾಗ ಉಳಿದರೂ ಲಸಿಕೆ ಪಡೆದವರೂ ಸುರಕ್ಷಿತವಲ್ಲ. ಜಗತ್ತಿನ ಯಾವುದೇ ಭಾಗದಲ್ಲಿ, ಎಷ್ಟೇ ಶ್ರೀಮಂತ ದೇಶದಲ್ಲಿದ್ದರೂ ಲಸಿಕೆಯಿಂದ ವಂಚಿತರಾದ ಯಾವುದೇ ವಿಭಾಗ ಲಸಿಕೆ ಪಡೆದವರಿಗೂ ಸೋಂಕು ಹರಡಿಸುತ್ತಾರೆ. ಏಕೆಂದರೆ ಒಮ್ಮೆ ಲಸಿಕೆ ಪಡೆದವರ ದೇಹದಲ್ಲಿ ಉಂಟಾದ ಪ್ರತಿಕಾಯಗಳು ಹೆಚ್ಚೆಂದರೆ ಆರೇಳು ತಿಂಗಳು ಉಳಿಯಬಹುದು. ಆದ್ದರಿಂದ ಲಸಿಕೆ ಪಡೆದವರಲ್ಲಿ ಉಂಟಾದ ಪ್ರತಿಕಾಯಗಳು ನಿಷ್ಕ್ರಿಯಗೊಳ್ಳುವ ಮೊದಲೇ ಉಳಿದ ಎಲ್ಲ ಜನರಿಗೂ ಲಸಿಕೆ ನೀಡಿ ಪ್ರತಿಕಾಯಗಳನ್ನು ಸೃಷ್ಟಿ ಮಾಡಿದರೆ ಮಾತ್ರ ಲಸಿಕೆ ಪಡೆದವರೆಲ್ಲರೂ ಸುರಕ್ಷಿತ. ಇಲ್ಲದಿದ್ದರೆ ಕೊನೆಯೇ ಇಲ್ಲದ ವಿಷ ವರ್ತುಲವೊಂದು ಸೃಷ್ಟಿಯಾಗುತ್ತದೆ.**


# ವ್ಯಾಕ್ಸಿನ್ ಎಂಬ ಉಸಿರು ನಿರಾಕರಿಸುತ್ತಿರುವ ಸರ್ಕಾರ!!

ಟಿ.ಎಲ್. ಕೃಷ್ಣೇಗೌಡ

****************************

ಕರೋನಾ ವೈರಾಣುವಿನಿಂದ ಉಂಟಾದ ಕೋವಿಡ್–19 ಸಾಂಕ್ರಾಮಿಕ ರೋಗಕ್ಕೆ ಇಡೀ ಜಗತ್ತು ತಲ್ಲಣಗೊಂಡಿದೆ. ಸಮಾಜವಾದಿ ದೇಶಗಳನ್ನು ಹೊರತುಪಡಿಸಿ, ಅಭಿವೃದ್ಧಿಶೀಲ ಮತ್ತು ಅಭಿವೃದ್ಧಿಗೊಂಡ ಬಂಡವಾಳಶಾಹಿ ದೇಶಗಳೆಲ್ಲ ಕೋವಿಡ್–19ರ ಎದುರು ಸೋತು ನಿಂತಿವೆ. ಜನಗಳ ತಲೆಗಳು ತರಗೆಲೆಯಂತೆ ಉದುರಿ ಉರಿದು ಹೋಗಿವೆ. ಭಾರತದಲ್ಲಿ ಅಧಿಕೃತವಾಗಿ ನಾಲ್ಕು ಲಕ್ಷ ಜನರ ಉಸಿರು ನಿಂತಿದ್ದರೆ, ಅಂತರರಾಷ್ಟ್ರೀಯ ಮಾಧ್ಯಮಗಳು ಮತ್ತು ಸಂಸ್ಥೆಗಳ ಲೆಕ್ಕಾಚಾರದಂತೆ ನಲವತ್ತು ಲಕ್ಷ ಜನರು ಪ್ರಾಣ ಕಳೆದುಕೊಂಡಿದ್ದಾರೆ, ನದಿ–ಗಟಾರಗಳಲ್ಲಿ ಹೆಣಗಳ ಪ್ರವಾಹವೇ ಹರಿದು ಹೋಗಿದೆ. ರೋಗದಿಂದ ಲಕ್ಷಾಂತರ ಜನರು ಸತ್ತು ಹೋದರೆ ಸರ್ಕಾರದ ಅವೈಜ್ಞಾನಿಕ ಲಾಕ್‌ಡೌನ್ ಮತ್ತು ತನಗೆ ಮತ ನೀಡಿದ ಜನತೆಯ ಬಗ್ಗೆ ಸರ್ಕಾರ ತೋರಿದ ದಿವ್ಯ ಉದಾಸೀನದಿಂದ ಕೋಟ್ಯಂತರ ಜನರು ಬಳಲಿ ಹೋಗಿದ್ದಾರೆ. ಸಮೀಕ್ಷೆಯೊಂದರ ಪ್ರಕಾರ ಭಾರತದಲ್ಲಿ ಶೇ.17ರಷ್ಟು ಜನರು ತಮ್ಮ ಪ್ರೀತಿ ಪಾತ್ರರನ್ನು ಕಳೆದುಕೊಂಡಿದ್ದರೆ, ಅಮೆರಿಕದಲ್ಲಿ ಶೇ.19ರಷ್ಟು ಜನರು ತಮ್ಮ ಪ್ರೀತಿ ಪಾತ್ರರನ್ನು ಕಳೆದುಕೊಂಡಿದ್ದಾರೆ. ಕೋವಿಡ್ ಮತ್ತು ಸರ್ಕಾರದ ಸುಲಿಗೆಕೋರತನದಿಂದಾಗಿ ಭಾರತದಲ್ಲಿ ಹೊಸದಾಗಿ 23 ಕೋಟಿ ಜನರು ಬಡವರ ಪಡೆಗೆ ಸೇರ್ಪಡೆಯಾಗಿದ್ದಾರೆ. ಬಡವರು ಸರಿಯಾಗಿ ಇಣುಕಿ ನೋಡಿದರೆ ಸುರಂಗದ ಕೊನೆಯಲ್ಲಿ "ಪೆರು" ಎಂಬ ಉರಿಯುವ ನಕ್ಷತ್ರದ ಬೆಳಕು ಗೋಚರಿಸುತ್ತದೆ.

ಯಾವುದೇ ಲಾಕ್‌ಡೌನ್, ವೈಯಕ್ತಿಕ ಅಂತರವೂ ಮುಂತಾದ ಪ್ರಸಾರ ತಡೆ ಕ್ರಮಗಳು ಮಾತ್ರ ಕೋವಿಡ್ ಸೋಂಕಿನಿಂದ ಜನತೆಯನ್ನು ಪಾರುಮಾಡಲಾರವು ಎಂಬುದು ಸಾಬೀತಾಗಿರುವ ಸತ್ಯ. ಕರೋನಾ ವೈರಾಣುವಿನಿಂದ ರಕ್ಷಣೆ ಸಿಗಬೇಕಾದರೆ ಒಂದೋ ಸಮುದಾಯ ಪ್ರತಿರೋಧ ಶಕ್ತಿ (Herd Immunity)ಬೆಳೆಯಬೇಕು, ಇಲ್ಲವೇ ಇಡೀ ಜನತೆಗೆ ಕೋವಿಡ್ ಲಸಿಕೆ ನೀಡಬೇಕು. ಸಮುದಾಯದಲ್ಲಿ ಪ್ರತಿರೋಧ ಶಕ್ತಿ ಬೆಳೆಯುವಂತೆ ಮಾಡುವ ಯಾವ ತಂತ್ರಜ್ಞಾನವೂ ಇಲ್ಲ. ಪ್ರತಿರೋಧ ಬೆಳೆಯಲಿ ಎಂದು ಸಮುದಾಯಕ್ಕೆಲ್ಲ ವೈರಸ್ ಹರಡಿಸಲೂ ಸಾಧ್ಯವಿಲ್ಲ. ಒಂದು ವೇಳೆ ಆಕಸ್ಮಿಕವಾಗಿ ಸಮುದಾಯದಲ್ಲಿ ಪ್ರತಿರೋಧ ಶಕ್ತಿ ಬೆಳೆದು ಬಿಟ್ಟರೆ ಖುಷಿ ಪಡಬಹುದೇ ಹೊರತು ಬೆಳೆಯುತ್ತದೆ ಎಂದು ನಿರೀಕ್ಷೆ ಮಾಡಲಾಗದು. ಸಮುದಾಯ ಪ್ರತಿರೋಧ ಶಕ್ತಿಯು ಯಾವುದೋ ಒಂದು ದೇಶದಲ್ಲಿ ಅಥವಾ ದೇಶದ ಒಂದು ಪ್ರದೇಶದಲ್ಲಿ ಉಂಟಾಗುವ ಸಾಧ್ಯತೆಯೂ ಇಲ್ಲ.





ಚಿತ್ರ–2 ಕರ್ನಾಟಕದಲ್ಲಿ ಮೇ 31, 2021 ವರೆಗಿನ ಒಂದಾದರೂ ಲಸಿಕೆ ಪಡೆದ 18ಕ್ಕಿಂತ ಹೆಚ್ಚಿನ ವಯಸ್ಸಿನ ಜನರ ಶೇಕಡಾ ಪ್ರಮಾಣ ಪ್ರತಿ ಜಿಲ್ಲೆಯ ಮ್ಯಾಪ್ ನೊಳಗೆ ಇದೆ.

**ಎಲ್ಲರಿಗೂ ಲಸಿಕೆ ಅತ್ಯಗತ್ಯ**

ಹಾಗಾಗಿ ಕರೋನಾ ವೈರಾಣುವನ್ನು ನಿಗ್ರಹಿಸಿ, ಕೋವಿಡ್ ಸೋಂಕು ಹರಡುವುದನ್ನು ತಡೆಯಬೇಕಾದರೆ ಸಮುದಾಯಕ್ಕೆ ಇಡಿಯಾಗಿ ಲಸಿಕೆ ನೀಡಬೇಕು. ನಮ್ಮ ವಿಜ್ಞಾನಿಗಳು ಮತ್ತು ಜಾಗತಿಕ ವೈಜ್ಞಾನಿಕ ಸಮುದಾಯವು ಮಿಂಚಿನ ವೇಗದಲ್ಲಿ ಲಸಿಕೆಯನ್ನು ಅಭಿವೃದ್ಧಿಪಡಿಸಿ ಕೊಟ್ಟಿದ್ದಾರೆ ನಿಜ. ಆದರೆ ನಾವು ಉತ್ತರ ಕಂಡುಕೊಳ್ಳಲೇಬೇಕಾದ ಪ್ರಶ್ನೆ ಏನೆಂದರೆ, ಎಲ್ಲರಿಗೂ ಯಾವಾಗ ಲಸಿಕೆ ನೀಡಲಾಗುತ್ತದೆ ಎಂಬುದು. ಎಲ್ಲರಿಗೂ ಲಸಿಕೆ ನೀಡಬೇಕಾದ ಅಗತ್ಯ ಏಕೆಂದರೆ, ಲಸಿಕೆ ಪಡೆಯದ ಒಂದು ಸಣ್ಣ ಜನ ವಿಭಾಗ ಉಳಿದರೂ ಲಸಿಕೆ ಪಡೆದವರೂ ಸುರಕ್ಷಿತವಲ್ಲ. ಜಗತ್ತಿನ ಯಾವುದೇ ಭಾಗದಲ್ಲಿ, ಎಷ್ಟೇ ಶ್ರೀಮಂತ ದೇಶದಲ್ಲಿದ್ದರೂ ಲಸಿಕೆಯಿಂದ ವಂಚಿತರಾದ ಯಾವುದೇ ವಿಭಾಗ ಲಸಿಕೆ ಪಡೆದವರಿಗೂ ಸೋಂಕು ಹರಡಿಸುತ್ತಾರೆ. ಏಕೆಂದರೆ ಒಮ್ಮೆ ಲಸಿಕೆ ಪಡೆದವರ ದೇಹದಲ್ಲಿ ಉಂಟಾದ ಪ್ರತಿಕಾಯಗಳು ಹೆಚ್ಚೆಂದರೆ ಆರೇಳು ತಿಂಗಳು ಉಳಿಯಬಹುದು. ಆದ್ದರಿಂದ ಲಸಿಕೆ ಪಡೆದವರಲ್ಲಿ ಉಂಟಾದ ಪ್ರತಿಕಾಯಗಳು ನಿಷ್ಕ್ರಿಯಗೊಳ್ಳುವ ಮೊದಲೇ ಉಳಿದ ಎಲ್ಲ ಜನರಿಗೂ ಲಸಿಕೆ ನೀಡಿ ಪ್ರತಿಕಾಯಗಳನ್ನು ಸೃಷ್ಟಿ ಮಾಡಿದರೆ ಮಾತ್ರ ಲಸಿಕೆ ಪಡೆದವರೆಲ್ಲರೂ ಸುರಕ್ಷಿತ. ಇಲ್ಲದಿದ್ದರೆ ಕೊನೆಯೇ ಇಲ್ಲದ ವಿಷ ವರ್ತುಲವೊಂದು ಸೃಷ್ಟಿಯಾಗುತ್ತದೆ. ಲಸಿಕೆ ನೀಡಿಕೆ ವಿಳಂಬವಾದಷ್ಟೂ ವೈರಾಣುಗಳು ಲಸಿಕೆ ಪ್ರತಿರೋಧ ಬೆಳೆಸಿಕೊಂಡು ಹೊಸ ಹೊಸ ರೂಪ ತಳೆಯುತ್ತವೆ. ಅಂತಹ ಸಂದರ್ಭದಲ್ಲಿ ಈಗ ಮಾರುಕಟ್ಟೆಯಲ್ಲಿ ಇರುವ ಲಸಿಕೆಗಳು ನಿಷ್ಪ್ರಯೋಜಕ ಆಗಬಹುದು. ಎಲ್ಲರಿಗೂ ಲಸಿಕೆ ನೀಡುವ ವರೆಗೂ ಯಾರೂ ಸುರಕ್ಷಿತ ಅಲ್ಲ ಎಂಬುದನ್ನು ಲಸಿಕೆಯನ್ನು ವ್ಯಾಪಾರಕ್ಕಿಟ್ಟು ಲಾಭ ದೋಚಲು ನಿಂತಿರುವ ಶ್ರೀಮಂತ ದೇಶಗಳು ಮತ್ತು ಅವರ ಬಲಾಢ್ಯ ಲಸಿಕಾ ಕಂಪನಿಗಳೂ ಅರ್ಥ ಮಾಡಿಕೊಳ್ಳಬೇಕು.

ಒಮ್ಮೆ ಸೋಂಕು ತಗುಲಿದವರಿಗೆ ಮತ್ತೊಮ್ಮೆ ಸೋಂಕು ತಗುಲುವುದಿಲ್ಲ ಎಂಬುದು ಕೂಡಾ ಮಿಥ್ಯೆ. ನಿಗದಿತ ಕಾಲಾವಧಿಯಲ್ಲಿ ತಗುಲದಿರಬಹುದು, ಆದರೆ ವ್ಯಕ್ತಿಯೊಬ್ಬ ಪುನಃ ಸೋಂಕಿಗೆ ಒಳಗಾಗದಂತೆ ತಡೆಯುವುದು ಸಾಧ್ಯವೇ ಇಲ್ಲ. ಹೇಗೆಂದರೆ ನಮಗೆ ಬರುವ ಸಾಮಾನ್ಯ ನೆಗಡಿಯೂ ಕೂಡ ಕರೋನಾ ವೈರಸ್ ಕುಟುಂಬದ ಮತ್ತೊಬ್ಬ ಸದಸ್ಯನಿಂದಲೇ ಹರಡುವುದು. ಒಮ್ಮೆ ನೆಗಡಿಯಾದವರಿಗೆ ಮತ್ತೊಮ್ಮೆ ನೆಗಡಿಯಾಗದಿರಲು ಸಾಧ್ಯವೆ? ಹಾಗೆಯೇ ಒಮ್ಮೆ ಕೋವಿಡ್ ಸೋಂಕಿಗೆ ಒಳಗಾದವರು ಇನ್ನೊಮ್ಮೆ, ಮತ್ತೊಮ್ಮೆ ಸೋಂಕಿಗೆ




ಚಿತ್ರ–1

ಚಿತ್ರ–1 ದೇಶದ ಮ್ಯಾಪ್ ನಲ್ಲಿ ಈಗಿನ ಲಸಿಕೆ ಉತ್ಪಾದನೆ–ವಿತರಣೆ ದರ ಇಮ್ಮಡಿಗೊಳಿಸಿದಾಗ, ಪ್ರತಿ ರಾಜ್ಯಕ್ಕೆ 18 ವರ್ಷಕ್ಕಿಂತ ಮೇಲ್ಪಟ್ಟವರಲ್ಲಿ ಶೇ. 70 ಜನರಿಗೆ ಜೂನ್ 2021ರಿಂದ ಲಸಿಕೆ ಕೊಡಲು ಬೇಕಾಗುವ ತಿಂಗಳುಗಳ ಸಂಖ್ಯೆ, ರಾಜ್ಯದ ಮ್ಯಾಪ್ ಒಳಗೆ ಕೊಡಲಾಗಿದೆ.

ಒಳಗಾಗುತ್ತಲೇ ಇರುತ್ತಾರೆ. ಸೋಂಕಿಗೆ ಒಳಗಾದ ವ್ಯಕ್ತಿ ಮತ್ತೊಮ್ಮೆ ಸೋಂಕಿಗೆ ಒಳಗಾದರೆ ಸೋಂಕಿನ ತೀವ್ರತೆ ಗಂಭೀರವಾಗಿರುತ್ತದೆ ಮತ್ತು ಮೃಗೀಯವಾಗಿರುತ್ತದೆ. ಹಾಗಾಗಿ ಎಷ್ಟು ಕಡಿಮೆ ಅವಧಿಯಲ್ಲಿ ಇಡೀ ಜನತೆಗೆ ಲಸಿಕೆ ನೀಡುತ್ತೇವೆ ಎಂಬುದರ ಆಧಾರದ ಮೇಲೆ ಜನರ ಮತ್ತು ದೇಶದ ಭವಿಷ್ಯ ತೀರ್ಮಾನವಾಗುತ್ತದೆ.

ಪ್ರಧಾನ ಮಂತ್ರಿಗಳು ದೇಶವನ್ನುದ್ದೇಶಿಸಿ ಮಾತನಾಡುತ್ತಾ ಜೂನ್ 07,2021 ರಂದು ಹೊಸ ಲಸಿಕೆ ನೀತಿಯೊಂದನ್ನು ಘೋಷಿಸಿದರು. ತಮ್ಮ ಹಿಂದಿನ ಕುಖ್ಯಾತ ಲಸಿಕೆ ನೀತಿಗೆ ಕೆಲವು ಮಾರ್ಪಾಡುಗಳನ್ನು ಮಾಡಿ, ಅಂದರೆ 50% ಕೇಂದ್ರ ಸರ್ಕಾರ, 25% ರಾಜ್ಯ ಸರ್ಕಾರ, 25% ಖಾಸಗಿಯವರ ಪಾಲು ಎಂಬ ನೀತಿಯನ್ನು ಮಾರ್ಪಡಿಸಿ, ಇನ್ನು ಮುಂದೆ 75% ಕೇಂದ್ರ ಸರ್ಕಾರದ ಮತ್ತು 25% ಖಾಸಗೀ ಆಸ್ಪತ್ರೆಗಳ ಪಾಲು ಎಂದು ಘೋಷಿಸಿದರು. ಈ ಪರಿಷ್ಕೃತ ನೀತಿಯಂತೆ ಜೂನ್ 21, 2021ರಿಂದ 18 ವರ್ಷಕ್ಕೆ ಮೇಲ್ಪಟ್ಟ ಎಲ್ಲರಿಗೂ ಲಸಿಕೆ ಕೊಡುತ್ತೇವೆ ಎಂದು ಹೇಳಿದ್ದಾರೆ. 18 ವರ್ಷ ಮೀರಿದ ಎಲ್ಲರಿಗೂ ಸರ್ಕಾರವೇ ಲಸಿಕೆ ನೀಡುವುದಾದರೆ 25% ಲಸಿಕೆಯನ್ನು ಖಾಸಗೀ ಕಾರ್ಪೊರೇಟ್ ಆಸ್ಪತ್ರೆಗಳಿಗೆ ಏಕೆ ಕೊಡಬೇಕು ಎಂಬುದಕ್ಕೆ, ಕಾರ್ಪೊರೇಟ್ ಆಸ್ಪತ್ರೆಗಳು ಲಾಭ ದೋಚಲು ಹಾದಿ ಮಾಡಿಕೊಡುವ ದುರಾಲೋಚನೆಯೊಂದನ್ನು ಬಿಟ್ಟು, ಬೇರೆ ಯಾವ ಸಮರ್ಥನೆಗಳೂ ಇಲ್ಲ. ಭಾರತದ (ಬಹುಶಃ ಜಗತ್ತಿನ ಯಾವುದೇ ದೇಶದ) ಚರಿತ್ರೆಯಲ್ಲಿ ಲಸಿಕೆಯೊಂದನ್ನು ಲಾಭವನ್ನೇ ಉಸಿರಾಡುವ ಖಾಸಗಿ ಕಾರ್ಪೊರೇಟ್ ಆಸ್ಪತ್ರೆಗಳಿಗೆ ಒಪ್ಪಿಸಿರಲಿಲ್ಲ.

**ಲಸಿಕೆ ಬೇಡಿಕೆ–ಪೂರೈಕೆಗಳ ನಡುವಿನ ಅಂತರ ಅಗಾಧ**

18 ವರ್ಷ ಮೀರಿದ ಎಲ್ಲರಿಗೂ ಲಸಿಕೆ ನೀಡಲು ಸುಮಾರು 200 ಕೋಟಿ ಡೋಸ್ ಲಸಿಕೆಯ ಅಗತ್ಯವಿದೆ. ಆದರೆ ಇದುವರೆಗೆ (ಅಂದರೆ ಜೂನ್ 9 ಕ್ಕೆ) ದೇಶದ ಶೇ. 3.5 ಜನರಿಗೆ ಅಂದರೆ ಅಂದಾಜು 3.5 ಕೋಟಿ ಜನರಿಗೆ ಎರಡೂ ಡೋಸ್ ಲಸಿಕೆ ನೀಡಲಾಗಿದ್ದರೆ, 14% ಜನರಿಗೆ ಒಂದೇ ಒಂದು ಡೋಸ್ ಲಸಿಕೆ ನೀಡಲಾಗಿದೆ. ಅಂದರೆ ನಾವಿನ್ನೂ 96.5% ಜನರಿಗೆ ಲಸಿಕೆ ನೀಡಬೇಕಾಗಿದೆ. ಅಂದರೆ ಡಿಸೆಂಬರ್ ತಿಂಗಳೊಳಗೆ 18 ವರ್ಷ ಮೀರಿದ ಎಲ್ಲರಿಗೂ ಲಸಿಕೆ ನೀಡಲು 190 ಕೋಟಿ ಡೋಸ್ ಲಸಿಕೆಯ ಅಗತ್ಯವಿದೆ. ಈಗಾಗಲೇ ನೀಡಲಾಗಿರುವ ಲಸಿಕೆಯನ್ನೂ ಕೂಡ ದೇಶದ ಎಲ್ಲಾ ಭಾಗಗಳಲ್ಲಿ ಒಂದೇ ರೀತಿಯಲ್ಲಿ ನೀಡಲಾಗಿಲ್ಲ. ರಾಜ್ಯ–ರಾಜ್ಯಗಳ, ಜಿಲ್ಲೆ–ಜಿಲ್ಲೆಗಳ, ನಗರ–ಗ್ರಾಮೀಣ ಪ್ರದೇಶಗಳ ನಡುವೆ ವಿಪರೀತ ಅಸಮಾನತೆಯಿದೆ. (ಚಿತ್ರ–2 ನೋಡಿ – (ಬೆಂಗಳೂರು ಮೈಸೂರು ಬಿಟ್ಟು ಇತರ ಜಿಲ್ಲೆಗಳ ನಡುವೆ ಉತ್ತರ ಮತ್ತು ದಕ್ಷಿಣ ಕರ್ನಾಟಕದ ಜಿಲ್ಲೆಗಳ ನಡುವಿನ ಅಂತರವನ್ನು ಗಮನಿಸಬಹುದು) ಉತ್ತರಪ್ರದೇಶ ಮತ್ತು ಬಿಹಾರದಲ್ಲಿ 2% ಜನರಿಗೆ ಮಾತ್ರ ಎರಡು ಡೋಸುಗಳ ಲಸಿಕೆ ನೀಡಲಾಗಿದ್ದರೆ, ಕರ್ನಾಟಕ ಹಾಗೂ ಕೇರಳ ರಾಜ್ಯಗಳಲ್ಲಿ ದೇಶದ ಸರಾಸರಿಗಿಂತ ಹೆಚ್ಚು ಅಂದರೆ 5% ಜನರಿಗೆ ಲಸಿಕೆ ನೀಡಲಾಗಿದೆ.

ನಮಗೆ ಅಗತ್ಯವಿರುವ 190 ಕೋಟಿ ಡೋಸ್ ಡೋಸ್ ಲಸಿಕೆಯನ್ನು ಪೂರೈಸಲು ಯಾವ ಸಿದ್ಧತೆಗಳನ್ನು ನಡೆಸಲಾಗಿದ? ಹಾಲಿ ನಮ್ಮ ಉತ್ಪಾದನಾ ಸಾಮರ್ಥ್ಯ ಎಷ್ಟು? ಇರುವ ಸಾಮರ್ಥ್ಯವನ್ನು ಬಳಸಿಕೊಳ್ಳಲು ಮತ್ತು ಅಗತ್ಯಕ್ಕೆ ಬೇಕಾದಷ್ಟು ಹೆಚ್ಚಿಸಿಕೊಳ್ಳಲು ಯಾವ ಸಿದ್ಧತೆಗಳು ನಡೆದಿವೆ ಎಂದು ಪರಿಶೀಲಿಸೋಣ.

ಏಪ್ರಿಲ್ ತಿಂಗಳಲ್ಲಿ ಸೀರಮ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾದ ಲಸಿಕೆ ಕೋವಿಶೀಲ್ಡ್ ತಿಂಗಳಿಗೆ 6.5 ಕೋಟಿ ಡೋಸ್ ಮತ್ತು ಭಾರತ್ ಬಯೋಟೆಕ್‌ನ ಲಸಿಕೆ ಕೊವ್ಯಾಕ್ಸಿನ್ ತಿಂಗಳಿಗೆ 2 ಕೋಟಿ ಡೋಸ್ ಉತ್ಪಾದನೆ ಆಗುತ್ತಿದ್ದವು. ಎರಡೂ ಸಂಸ್ಥೆಗಳು ಸೇರಿ ಮೇ ತಿಂಗಳಲ್ಲಿ 9.5 ಕೋಟಿ ಡೋಸ್ ಲಸಿಕೆಯನ್ನು ಉತ್ಪಾದನೆ ಮಾಡಿವೆ. ಆಗಸ್ಟ್–ಡಿಸೆಂಬರ್ ತಿಂಗಳ ಹೊತ್ತಿಗೆ ತಮ್ಮ ಸಾಮರ್ಥ್ಯ ಹೆಚ್ಚಿಸಿಕೊಂಡು ಕೋವಿಶೀಲ್ಡ್ ತಿಂಗಳಿಗೆ 15 ಕೋಟಿ ಡೋಸ್ ಲಸಿಕೆಯನ್ನು, ಕೊವ್ಯಾಕ್ಸಿನ್ 11 ಕೋಟಿ ಡೋಸ್ ಲಸಿಕೆಯನ್ನು ಮತ್ತು ರಷ್ಯಾದ ಸ್ಪೂಟ್ನಿಕ್ ಗಿ 3 ಕೋಟಿ ಡೋಸ್ ಲಸಿಕೆಯನ್ನು ಮತ್ತು ಇತರೆ ಮೂಲಗಳಿಂದ 7 ಕೋಟಿ ಡೋಸ್ ಲಸಿಕೆಯನ್ನು ಉತ್ಪಾದಿಸಿ ನೀಡುತ್ತೇವೆ ಎಂಬ ಆಶ್ವಾಸನೆ ನೀಡಲಾಗಿದೆ. ಆದರೆ ಇಲ್ಲಿಯವರೆಗೆ ತಮ್ಮ ಸಾಮರ್ಥ್ಯದಲ್ಲಿ ಯಾವುದೇ ಹೆಚ್ಚಳ ಮಾಡಿಕೊಳ್ಳದ ಮತ್ತು ಇರುವ ಸಾಮರ್ಥ್ಯವನ್ನು ಪೂರ್ಣವಾಗಿ ಬಳಸಿ ಕೊಳ್ಳದ ಈ ಮೇಲಿನ ಕಂಪನಿಗಳು ದಿಢೀರ್ ಎಂದು ಹತ್ತಾರು ಪಟ್ಟು ವೃದ್ಧಿಸಿ ಕೊಳ್ಳುವುದು ಹೇಗೆ ಎಂಬುದು ಯಕ್ಷ ಪ್ರಶ್ನೆಯಾಗಿದೆ. ಅದರಲ್ಲೂ ದಿನಾಂಕ 10.06.2021 ರಂದು ಅಮೆರಿಕದ ಎಫ್.ಡಿ.ಎ. (FDA) ಕೊವ್ಯಾಕ್ಸಿನ್ ಲಸಿಕೆಯ ತುರ್ತು ಬಳಕೆಗೆ ಅನುಮತಿ ಕೊಡಲು ನಿರಾಕರಿಸಿರುವ, ಡಬ್ಲ್ಯೂ.ಎಚ್.ಒ ವಿಶ್ವ ಆರೋಗ್ಯ ಸಂಸ್ಥೆ (WHO) ಮಂಜೂರಾತಿ ಇನ್ನೂ ಸಿಗದಿರುವ, ಹಾಗೂ ವೈರಾಣುಗಳ ರೂಪಾಂತರವನ್ನು ವೇಗವಾಗಿ ಎದುರಿಸಲು ಬೇಕಾದ ಹಲವು ತಂತ್ರಜ್ಞಾನಗಳ ಅಭಿವೃದ್ಧಿಯು ಅಗತ್ಯವಾಗಿರುವ ಹಿನ್ನೆಲೆಯಲ್ಲಿ, ಕೊವ್ಯಾಕ್ಸಿನ್ ಲಸಿಕೆಯನ್ನು ಮಾತ್ರ ಅವಲಂಬಿಸುವುದು ಯಾವುದೇ ಕಾರಣಕ್ಕೂ ಜಾಣ ನಡೆಯಾಗುವುದಿಲ್ಲ. ಹೀಗಿರುವಾಗ ನಮ್ಮ ಅಗತ್ಯಕ್ಕೆ ಅನುಗುಣವಾಗಿ ಬೇಕಾದಷ್ಟು ಲಸಿಕೆಯನ್ನು ಹೇಗೆ ಉತ್ಪಾದಿಸಿ ಸರಬರಾಜು ಮಾಡುತ್ತಾರೆ ಎಂಬ ಪ್ರಶ್ನೆಗೆ ಉತ್ತರ ಇಲ್ಲವಾಗಿದೆ. 18 ವಯಸ್ಸಿಗೆ ಮೇಲ್ಪಟ್ಟ

ಪುಟ 12 ಕ್ಕೆ

# ಡಾ. ಸಿದ್ಧಲಿಂಗಯ್ಯ



## ಶ್ರಮಜೀವಿಗಳ ಹೋರಾಟಗಳಿಗೆ ಈಗಲೂ ದನಿಯಾಗಿರುವ ಕವಿ

'ಗರೀಬಿ ಹಟಾವ್ರೋ' ಘೋಷಣೆ, ಬ್ಯಾಂಕುಗಳ ಮತ್ತು ಉದ್ದಿಮೆಗಳ ರಾಷ್ಟ್ರೀಕರಣ, ಮಾಜಿ ರಾಜರುಗಳ ರಾಜಧನ ರದ್ಧತಿ, ಬಾಂಗ್ಲಾದೇಶದ ವಿಮೋಚನೆಯಂತಹ ತೀವ್ರಗಾಮೀ ಕ್ರಮಗಳ ಮೂಲಕ ಇಂದಿರಾಗಾಂಧಿಯ ಎಡಪಂಥೀಯ ಸೋಗು, ಅದೇ ವೇಳೆಗೆ ಕೇರಳ ಮತ್ತು ಪಶ್ಚಿಮ ಬಂಗಾಲದಲ್ಲಿ ಎಡಪಂಥೀಯರಿಂದ ಸಂಯುಕ್ತ ರಂಗ ಸರಕಾರಗಳ ರಚನೆ, ನೈಜ ಎಡಪಂಥೀಯ ಶಕ್ತಿಗಳು ಮತ್ತು ಇಂದಿರಾಗಾಂಧಿ ನೇತೃತ್ವದ ಕಾಂಗ್ರೆಸ್ ಬಣದ ಸೋಗಿನ ಎಡಪಂಥೀಯತೆಯ ನಡುವೆ ಹೋರಾಟ ಎಪ್ಪತ್ತರ ದಶಕದ ಈ ವಿಶಿಷ್ಟ ಬೆಳವಣಿಗೆಗಳು ಸಿದ್ಧಲಿಂಗಯ್ಯನವರ ಮೇಲೆ ಪ್ರಭಾವ ಬೀರಿದವು, ಅವರ ಕೃತಿಗಳಲ್ಲಿ ಮತ್ತು ಚಟುವಟಿಕೆಗಳಲ್ಲಿ ತಮ್ಮ ಛಾಪನ್ನು ಮೂಡಿಸಿದವು, ಅವರನ್ನು ದಮನಿತ ಜನಗಳ ಪರವಾಗಿ ಮಾತಾಡುವ ಒಬ್ಬ ಕವಿಯಾಗಿ ರೂಪಿಸಿದವು, ವರ್ಗಪ್ರಜ್ಞೆಯನ್ನು ಪಡೆಯುವಂತೆ ಮಾಡಿದವು.

**ವಿ ಜೆ ಕೆ ನಾಯರ್**


ಡಾ. ಸಿದ್ಧಲಿಂಗಯ್ಯ, ದಲಿತ ಕವಿ ಮತ್ತು ಕ್ರಾಂತಿಕಾರಿ ಬರಹಗಾರರೆಂದು ಹೆಸರುವಾಸಿಯಾಗಿದ್ದವರು, ಜೂನ್ 11ರಂದು ಒಂದು ತಿಂಗಳಿಗೂ ಹೆಚ್ಚು ಸಮಯ ಕೊವಿಡ್-19ರೊಂದಿಗೆ ಸೆಣಸಾಡಿ ನಿಧನರಾಗಿದ್ದಾರೆ. 1970-80ರ ದಶಕದಲ್ಲಿ ಮೂಡಿಬಂದ "ದಲಿತ-ಬಂಡಾಯ" ಸಾಹಿತ್ಯಿಕ ಆಂದೋಲನದ ಹರಿಕಾರರಲ್ಲಿ ಒಬ್ಬರಾಗಿದ್ದ ಇವರು ಕರ್ನಾಟಕದ ಎಡ-ಪ್ರಗತಿಶೀಲ ಸಾಹಿತ್ಯಿಕ-ಸಾಂಸ್ಕೃತಿಕ ಆಂದೋಲನದಲ್ಲಿ ಒಂದು ನೇತೃತ್ವದ ಪಾತ್ರ ವಹಿಸಿದ್ದವರು, ಮತ್ತು ಒಬ್ಬ ಮಹತ್ವದ ಸಾಂಸ್ಕೃತಿಕ ನೇತಾರರು. ವೃತ್ತಿಯಿಂದ ಕನ್ನಡ ಅಧ್ಯಾಪಕರಾಗಿದ್ದ ಇವರು ಬೆಂಗಳೂರು ವಿಶ್ವ ವಿದ್ಯಾಲಯದಲ್ಲಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಲ್ಲದೆ, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮುಂತಾದ ಕರ್ನಾಟಕ ಸರಕಾರದ ಸಾಸ್ಕೃತಿಕ ಸಂಸ್ಥೆಗಳ ಮುಖ್ಯಸ್ಥರಾಗಿಯೂ ಕೆಲಸ ಮಾಡಿದವರು, ವಿವಿಧ ಉನ್ನತ ಸಾಹಿತ್ಯಿಕ ಪ್ರಶಸ್ತಿಗಳನ್ನು ಪಡೆದಿದ್ದರು ಮತ್ತು ಜನತಾ ಪಕ್ಷದ ಆಳ್ವಿಕೆಯ ಸಮಯದಲ್ಲಿ ಎರಡು ಅವಧಿಗಳಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು.


ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಗಡಿ ತಾಲೂಕಿನ ಒಂದು ಹಳ್ಳಿಯ ಬಡ ದಲಿತ ಕುಟುಂಬವೊಂದರಲ್ಲಿ ಜನಿಸಿದ ಸಿದ್ಧಲಿಂಗಯ್ಯ, ನಂತರ ಬೆಂಗಳೂರು ನಗರಕ್ಕೆ ವಲಸೆ ಬಂದರು. ಒಬ್ಬ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ ಇವರು ಹೈಸ್ಕೂಲು ವಿದ್ಯಾರ್ಥಿಯಾಗಿದ್ದಾಗಲೇ ಕವನಗಳನ್ನು ಬರೆಯಲು ಆರಂಭಿಸಿದ್ದರು, ಒಬ್ಬ ಉತ್ತಮ ವಾಗ್ಮಿ ಎನಿಸಿಕೊಂಡಿದ್ದ ವಿದ್ಯಾರ್ಥಿ ಕೂಡ.

ಆರಂಭದಲ್ಲಿ ಇವರ ಮೇಲೆ ಪ್ರಭಾವ ಬೀರಿದ್ದು ಅಂಬೇಡ್ಕರ್, ಪೆರಿಯಾರ್ ಮತ್ತು ವಿಚಾರವಾದಿ ಮುಖಂಡರ ಬದುಕು-ಬರಹಗಳು. ಎಪ್ಪತ್ತರ ದಶಕದಲ್ಲಿ ಬೆಂಗಳೂರಿನ ಶ್ರೀರಾಂಪುರದಲ್ಲಿ ಹುಟ್ಟಿಕೊಂಡ ದಲಿತ ವಿದ್ಯಾರ್ಥಿ-ಯುವಜನ ಗುಂಪಿನ ಮುಖಂಡರಾಗಿ ತಮ್ಮ ಚಟುವಟಿಕೆಗಳನ್ನು ಆರಂಭಿಸಿದ ಸಿದ್ಧಲಿಂಗಯ್ಯ ಬಡ ದಲಿತ ವಿದ್ಯಾರ್ಥಿಗಳಿಗೆ ನೆರವಾಗಲು ರಾತ್ರಿ ಶಾಲೆಗಳನ್ನು ನಡೆಸಿದರು. ಈ ಗುಂಪಿನ ಮುತುವರ್ಜಿಯಿಂದ ನಡೆದ ಮೊದಲ ಸಾರ್ವಜನಿಕ ಚಟುವಟಿಕೆ ಎಂದರೆ, ಆಗ ದೇವರಾಜ ಅರಸು ರವರ ಸಂಪುಟದಲ್ಲಿ ಮಂತ್ರಿಯಾಗಿದ್ದು ಮೇಲ್ಜಾತಿಗಳವರ ಕೆಂಗಣ್ಣಿಗೆ ತುತ್ತಾಗಿದ್ದ ಬಸವಲಿಂಗಪ್ಪನವರ ಬೆಂಬಲಕ್ಕೆ ನಿಂತ ಹೋರಾಟ. ಬಹುಪಾಲು ಬ್ರಾಹ್ಮಣ ಪ್ರಾಬಲ್ಯದ ಕನ್ನಡ ಸಾಹಿತ್ಯ ಬೂಸಾ ಸಾಹಿತ್ಯ ಎಂಬ 1978ರ ತಮ್ಮ ಸಾರ್ವಜನಿಕ ಹೇಳಿಕೆಯಿಂದಾಗಿ ಅವರು ಬಹಳಷ್ಟು ದಾಳಿಗಳಿಗೆ ಒಳಗಾಗಿದ್ದರು. ರಾಜ್ಯದಲ್ಲಿ ಮಲಹೊರುವ ಪದ್ಧತಿಯನ್ನು ನಿಷೇಧಿಸುವ ತೀವ್ರ ಕ್ರಮಗಳನ್ನು ಕೈಗೊಳ್ಳುವ ಮೂಲಕವೂ ಹಲವರ ವಿರೋಧವನ್ನು ಇವರು ಕಟ್ಟಿಕೊಂಡಿದ್ದರು.

1977-78ರ ಅವಧಿಯಲ್ಲಿ ಸಿದ್ಧಲಿಂಗಯ್ಯ ನೇತೃತ್ವದಲ್ಲಿ ದಲಿತ ವಿದ್ಯಾರ್ಥಿಗಳು ಬೆಂಗಳೂರಿನ ಸರ್ಕಾರೀ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ಬಸವಲಿಂಗಪ್ಪನವರ ಪರವಾಗಿ ಹೋರಾಟವನ್ನು ಆರಂಭಿಸಿದರು. ಇದನ್ನು ಅನುಸರಿಸಿ ಮೈಸೂರು, ತುಮಕೂರು ಮತ್ತು ಇತರ ಭಾಗಗಳಲ್ಲಿ ದಲಿತ ವಿದ್ಯಾರ್ಥಿಗಳು ಮತ್ತು ಪ್ರಗತಿಶೀಲರು ಈ ಪ್ರಶ್ನೆಯನ್ನು ಎತ್ತಿಕೊಂಡರು. ಮೇಲ್ಜಾತಿ ವಿದ್ಯಾರ್ಥಿಗಳು ಮತ್ತು ಅಧ್ಯಾಪಕ ವೃಂದದವರು ಕೂಡ ಈ ವಿದ್ಯಾರ್ಥಿಗಳ ಮೇಲೆ ದೈಹಿಕ ಹಲ್ಲೆಗಳನ್ನು ನಡೆಸಿದರು. ಅದೇ ಸಮಯದಲ್ಲಿ ಶ್ರೀರಾಂಪುರದಲ್ಲಿದ್ದ ಗೋಪಾಲಸ್ವಾಮಿ ಹಾಸ್ಟೇಲಿನಿಂದ (ಸಿದ್ಧಲಿಂಗಯ್ಯನವರ ತಾಯಿ ಅಲ್ಲಿ ಸಫಾಯಿ ಕರ್ಮಚಾರಿ ಆಗಿದ್ದರು) ದಲಿತ ವಿದ್ಯಾರ್ಥಿಗಳನ್ನು ಹೊರಗೆಸೆಯುವ ಒಂದು ಪ್ರಯತ್ನ ನಡೆಯಿತು. ಆಗ ಶ್ರೀರಾಂಪುರದ ಕಾರ್ಮಿಕ ಆಂದೋಲನ ಅಲ್ಲಿನ ಸಿಪಿಐ(ಎಂ) ಘಟಕದ ನೇತೃತ್ವದಲ್ಲಿ ಹಾಸ್ಟೆಲ್ ನಿವಾಸಿಗಳಿಗೆ ಸಕ್ರಿಯ ಬೆಂಬಲ ನೀಡಿತು. ಸಿದ್ಧಲಿಂಗಯ್ಯನವರ ಸಕ್ರಿಯತೆ ಮತ್ತು ಆ ಅವಧಿಯ ಬೆಳವಣಿಗೆಗಳು ಅವರನ್ನು ದಮನಿತ

ಪುಟ 10 ನೋಡಿ







## 'ಸಮುದಾಯ', ರಂಗಭೂಮಿಗಳೊಂದಿಗೆ ನಂಟು

**ಗುಂಡಣ್ಣ ಚಿಕ್ಕಮಗಳೂರು**

'ಸಮುದಾಯ'ದ ಸಾಂಸ್ಕೃತಿಕ ಶಿಬಿರಗಳು, ಎಲ್ಲಾ ಜಾಥಾಗಳು, ರಾಜ್ಯದಲ್ಲಿ ನಡೆದ ಕಾರ್ಮಿಕರ ಹೋರಾಟಗಳು, ರೈತರ ವಿಧಾನಸೌಧ ಚಲೋ ರಾಜ್ಯ ಮಟ್ಟದ ಜಾಥಾಗಳು, ಸಿದ್ಧಲಿಂಗಯ್ಯನವರು ಬರೆದ ಅನೇಕ ಪ್ರತಿಭಟನಾ ಹಾಡುಗಳನ್ನು ಬಿತ್ತರಿಸುವ ವೇದಿಕೆಗಳಾಗಿವೆ. ಈ ಹಾಡುಗಳು ಕೇವಲ ಮನರಂಜನೆಯ ಹಾಡುಗಳಲ್ಲ. ಹಾಡುವ ರಾಗಗಳ ವೈವಿಧ್ಯತೆಯಲ್ಲಿ ಮನರಂಜನೆ ಇದ್ದರೂ ಸಹ, ಸಾಂಸ್ಕೃತಿಕ ಚಟುವಟಿಕೆಗಳ ಮುಖಾಂತರ ಜನರನ್ನು ಹೋರಾಟಕ್ಕೆ ಅಣಿನೆರೆಸುವ ಸಮುದಾಯದ ಆಶಯಗಳಿಗೆ ಚಿಂತನೆಗಳಿಗೆ ರೂಪ ಕೊಟ್ಟ, ನಮ್ಮ ನಡುವೆಯೇ ಬದುಕಿದ್ದೂ ಸತ್ತಂತಾಗಿದ್ದ ಕಾರ್ಮಿಕ-ರೈತರ ಶೋಷಣೆಯ ವಿವಿಧ ಮುಖಗಳನ್ನು ಅನಾವರಣಗೊಳಿಸುವ, ಅವರ ದಾರುಣ ಬದುಕಿನ ಕಥೆಯನ್ನು ಉಳ್ಳವರ ಹಾಗೂ ಮಧ್ಯಮ ವರ್ಗಗಳಿಗೆ ಪರಿಚಯಿಸುವ ಹಾಡುಗಳಾಗಿದ್ದವು.






ನಾಡಿನ ಅಪ್ರತಿಮ ಕವಿ, ದಲಿತ ಅಸ್ಮಿತೆಯ ಕವಿ ಡಾ. ಸಿದ್ಧಲಿಂಗಯ್ಯ ಅವರು 11.06.2021 ರಂದು ಸಾವಿರಾರು ಅಭಿಮಾನಿಗಳನ್ನು ನೂರಾರು ಸಂಘಟನೆಗಳನ್ನು ಸಹೃದಯಿಗಳನ್ನು ಅಗಲಿದ್ದಾರೆ. 38 ದಿನಗಳ ಕಾಲ, ಕೋವಿಡ್ ಕಾರಣದಿಂದ ಆಸ್ಪತ್ರೆ ಸೇರಿದ ಸಿದ್ಧಲಿಂಗಯ್ಯ ಕೊನೆಗೆ ಕೋವಿಡ್‌ನಿಂದ ಗುಣಮುಖರಾದರೂ ಸಹ, ಎರಡನೇ ಬಾರಿಗೆ ಆದ ಹೃದಯಾಘಾತದಿಂದ ನಿಧನ ಹೊಂದಿದರು.

ದಲಿತರ ಸ್ಥಿತಿಗತಿಗಳ ಕುರಿತು, ಅವರ ತಳಮಟ್ಟದ ಶೋಷಣೆಯ ಕುರಿತು, ಅಪಮಾನ, ಅನುಮಾನಗಳ ನಡುವೆಯೇ ಬಾಳುವೆ ನಡೆಸಿದ ಲಕ್ಷಾಂತರ ದಲಿತರ ಅಸ್ಮಿತೆಯೇ ಆಗಿ, ಅವರ ಬದುಕುಗಳ ಕುರಿತು ಬರೆದ ಸಿದ್ಧಲಿಂಗಯ್ಯ ಅವರ ಕವನಗಳು, ನವ್ಯೋತ್ತರ ಕನ್ನಡ ಕಾವ್ಯ ರಂಗವನ್ನು, ಮುಂದೆ ಬಂಡಾಯ ಸಾಹಿತ್ಯ ಸಂಘಟನೆಯನ್ನು ಹಾಗೂ ಯುವ ಪ್ರತಿಭಾವಂತ ಕವಿಗಳನ್ನು ಹೊಸ ದಿಕ್ಕಿನೆಡೆಗೆ ಕರೆದುಕೊಂಡು ಹೋಯಿತು. ಅದೇ ಸಮಯದಲ್ಲಿ, ಅಂದಿನ ನವ್ಯ ಮತ್ತು ನವ್ಯೋತ್ತರ ಕವಿಗಳ ಪ್ರತಿಷ್ಠಿತ ಚಿಂತನೆಗಳಿಗೆ ಪರ್ಯಾಯ ಚಿಂತನೆಗಳನ್ನು ನೀಡಿದರು. ಈ ಕುದಿಯುತ್ತಿದ್ದ ಅಸಮಾನತೆಯ ಪಾಕಗಳಿಗೆ, ಕೇವಲ ಧ್ವನಿ ಮಾತ್ರ ಧಿಕ್ಕಾರವಾಗದೆ, ಅಕ್ಷರ ರೂಪಗಳಲ್ಲೂ ಗಟ್ಟಿಯಾಗಿ ಪ್ರತಿಭಟನೆಯ ಮಜಲನ್ನು ಹುಟ್ಟು ಹಾಕಿದ ಕವಿ ಸಿದ್ಧಲಿಂಗಯ್ಯವರು.

ಸಿದ್ಧಲಿಂಗಯ್ಯ ಒಬ್ಬ ದಲಿತ ಜಾತಿಯಲ್ಲಿ ಹುಟ್ಟಿದವರು ಎನ್ನುವ ಕಾರಣಕ್ಕೆ ಅವರು ದಲಿತ ಕವಿ ಎಂದು ಕರೆಸಿಕೊಳ್ಳಲಿಲ್ಲ. ಅದುವರೆವಿಗೂ ಯಾವ ಶ್ರೇಷ್ಠ ಕವಿಯೂ ಬರೆಯದ ಲಕ್ಷಾಂತರ ದಲಿತರ ಬದುಕನ್ನು, ನೈಜತೆಯನ್ನು ಅಕ್ಷರ ರೂಪಕ್ಕಿಳಿಸಿ ಪ್ರತಿಭಟನೆಯ ದಾರಿ ತೋರಿದ ಕವಿಯಾದ್ದರಿಂದ ದಲಿತ ಕವಿ ಎನ್ನಿಸಿಕೊಂಡರು. ಅದು ಸಿದ್ಧಲಿಂಗಯ್ಯನವರಿಗೂ ಪ್ರೀತಿಯ ಮತ್ತು ಹೆಮ್ಮೆಯ ಸಂಕೇತವಾಯಿತು.

### ಸಮುದಾಯದೊಂದಿಗೆ ದೀರ್ಘ ನಂಟು

ಸಮುದಾಯ ಸಂಘಟನೆ, ಒಂದು ರಂಗತಂಡದ ರೂಪದಲ್ಲಿ ಬೆಂಗಳೂರಿನಲ್ಲಿ ಪ್ರಾರಂಭವಾಗಿದ್ದು 1975 ರಲ್ಲಿ. ಬೆಂಗಳೂರು ವಿಶ್ವ ವಿದ್ಯಾಲಯದ ಅನೇಕ ಮೇಷ್ಟ್ರುಗಳು, ವಿದ್ಯಾರ್ಥಿಗಳು ಸೇರಿ, ಸಾಮುದಾಯಿಕವಾಗಿ ಕಟ್ಟಿದ ಒಂದು ಪ್ರಗತಿಪರ ಚಿಂತನೆಗಳ ರಂಗತಂಡ 'ಸಮುದಾಯ'. ಈ ಪ್ರತಿಷ್ಠಿತರ ಪಟ್ಟಿಯಲ್ಲಿ ಸಿದ್ಧಲಿಂಗಯ್ಯನವರದ್ದು ಕೂಡಾ ಒಂದು ಹೆಸರು. ಸಮುದಾಯದ ಮೊದಲ ನಾಟಕ 'ಹುತ್ತವ್ ಬಡಿದರೆ'. ಈ ನಾಟಕಕ್ಕೆ ರಂಗರೂಪವನ್ನು ಕೊಟ್ಟವರು ಕೆ.ವಿ.ನಾರಾಯಣ್. ನಂತರದಲ್ಲಿ ಬಂದ ನಾಟಕ 'ತಾಯಿ'. ಇದರ ಅನುವಾದ ಸಿ. ವೀರಣ್ಣ ಅವರದು. ಇದೇ ರೀತಿಯಲ್ಲಿ ಸಿದ್ಧಲಿಂಗಯ್ಯನವರೂ ಕೂಡಾ ಅನೇಕ ನಾಟಕಗಳು ಹಾಗೂ ದಲಿತ-ಬಂಡಾಯ ಸಾಹಿತ್ಯದ ಕವನಗಳ ಮುಖಾಂತರ ಸಮುದಾಯದೊಟ್ಟಿಗೆ ನಿರಂತರವಾಗಿ ಗುರುತಿಸಿಕೊಂಡವರು. ಸಮುದಾಯ ಬೆಂಗಳೂರು, 'ಹುತ್ತವ ಬಡಿದರೆ' ನಾಟಕದ ನಂತರ, ಒಂದು ಪ್ರಯೋಗವನ್ನು ಮಾಡಿತು. ಅದು ಹುಗಿನೋ ಅಯನೆಸ್ಕೊ ಅವರ 'ದಿ ಲೆಸನ್' (The lesson). ಅದು ಬಹಳ ಚಿಕ್ಕದಾದ ನಾಟಕವಾದ್ದರಿಂದ ಸಿದ್ಧಲಿಂಗಯ್ಯನವರ ಖಂಡಕಾವ್ಯ 'ಅಲ್ಲೇ ಕುಂತವರೇ' ಕಾವ್ಯವನ್ನು ವಾಚನ ಮತ್ತು ನಾಟಕಾಭಿನಯ ಮಾಡಿ, 'ಲೆಸನ್ 2' ಎಂದು ಕರೆಯಲಾಯಿತು. ಬಹುಶಃ ಇದು ಸಿದ್ಧಲಿಂಗಯ್ಯನವರ ಕಾವ್ಯ ನಾಟಕ ರೂಪ ಪಡೆದುಕೊಂಡ ಮೊಟ್ಟ ಮೊದಲ ಪ್ರಯೋಗ. ಅದರಲ್ಲಿ ಕಾವ್ಯವನ್ನು ವಾಚಿಸಿದವರೂ ಕೂಡ ಸಿದ್ಧಲಿಂಗಯ್ಯನವರೇ.

ಈ ಪ್ರಯೋಗದೊಂದಿಗೆ ಪ್ರಾರಂಭವಾದ ಸಿದ್ಧಲಿಂಗಯ್ಯನವರ ನಂಟು, ನಂತರದಲ್ಲಿ ಅಗಾಧವಾಗಿ ಮತ್ತು ಬಲಿಷ್ಠವಾಗಿ ಬೆಳೆಯಿತು. ಅವರು ಬರೆದ ಕವನಗಳು, ಕ್ರಾಂತಿ ಗೀತೆಗಳು ಗೆಳೆಯ ಜನಾರ್ಧನ್ (ಜನ್ನಿ) ಮುಖಾಂತರ ಹಾಡಿನ ರೂಪ ಪಡೆದು, ಜನಮಾನಸದ ಗೀತೆಗಳಾಗಿ ಪ್ರತಿಧ್ವನಿಸಿತು. ಸಮುದಾಯದ ಮುಂದಿನ ನಾಟಕ "ತಾಯಿ" ಗೆ ಅವರು ಬರೆದ ಒಂದು ರಂಗ ಗೀತೆ 'ಓ ಗೆಳತಿ ವ್ಲಾಸೋವ...', ತಾಯಿ ವ್ಲಾಸೋವ ಗೆ ಅವಳ ಮಗ ಪಾವೆಲ್‌ನ ನಿಧನದ ಸುದ್ದಿಯನ್ನು ಬಿತ್ತರಿಸುವ ಒಂದು ಶೋಕಗೀತೆ. ನಂತರದ ದಿನಗಳಲ್ಲಿ ಇದು ರಂಗಗೀತೆಯ ಚೌಕಟ್ಟನ್ನು ಮೀರಿ, ಎಲ್ಲಾ ಸಂದರ್ಭಗಳಲ್ಲೂ ಹಾಡುವ ಒಂದು ಕ್ರಾಂತಿ ಗೀತೆಯಾಗಿ ಮಾರ್ಪಾಡಾಯಿತು.

### ನಾಟಕಗಳು ಬೀದಿಗೆ ಇಳಿದದ್ದು

ಅವರು ಬರೆದ ಬೀದಿ ನಾಟಕ 'ಬೆಲ್ಚಿ'ಯನ್ನು ಬೆಂಗಳೂರು ಸಮುದಾಯಕ್ಕೆ ನಿರ್ದೇಶನ ಮಾಡಿ ಸಿಜಿಕೆ. ಅದು ಎಷ್ಟು ಸಾವಿರ ಪ್ರದರ್ಶನ ಕಂಡಿದೆ ಎನ್ನುವುದನ್ನು ನಖರವಾಗಿ ಇಂದಿಗೂ ಹೇಳಲು ಸಾಧ್ಯವೇ ಇಲ್ಲ. ಕೇವಲ ಬೆಂಗಳೂರಿಗೆ ಮತ್ತು ಕರ್ನಾಟಕ ರಾಜ್ಯಕ್ಕೆ ಸೀಮಿತಗೊಳ್ಳದ ಈ ಬೀದಿ ನಾಟಕ ರಾಷ್ಟ್ರದ ಎಲ್ಲಾ ಪ್ರಮುಖ ನಗರಗಳಲ್ಲೂ ಪ್ರಮುಖ ಸಾಂಸ್ಕೃತಿಕ ಚಟುವಟಿಕೆಗಳ ಸಮಯದಲ್ಲೂ ಪ್ರದರ್ಶನಗೊಂಡಿದೆ. ನಂತರದ ದಿನಗಳಲ್ಲಿ ಪ್ರಾರಂಭವಾದ ಹಲವಾರು ಸಮುದಾಯ ಘಟಕಗಳೂ ಸಹ ಈ ಪ್ರಸಿದ್ಧ ನಾಟಕವನ್ನು ಅನೇಕ ಯುವ,

ಪುಟ 10 ನೋಡಿ

# ಡಾ. ಸಿದ್ಧಲಿಂಗಯ್ಯ-ಶ್ರಮಜೀವಿಗಳ ಹೋರಾಟಗಳಿಗೆ ಈಗಲೂ ದನಿಯಾಗಿರುವ ಕವಿ

ಪುಟ 9 ರಿಂದ



ಜನಗಳ ಪರವಾಗಿ ಮಾತಾಡುವ ಒಬ್ಬ ಕವಿಯಾಗಿ ರೂಪಿಸಿದವು, ವರ್ಗಪ್ರಜ್ಞೆಯನ್ನು ಪಡೆಯುವಂತೆ ಮಾಡಿದವು.

ಎಪ್ಪತ್ತರ ದಶಕದ ಕರ್ನಾಟಕದಲ್ಲಿನ ಮತ್ತು ಭಾರತದಲ್ಲಿನ ರಾಜಕೀಯ ಸನ್ನಿವೇಶ ಸಿದ್ದಲಿಂಗಯ್ಯನವರ ಮೇಲೆ ಪ್ರಭಾವ ಬೀರಿದವು, ಅವರ ಕೃತಿಗಳಲ್ಲಿ ಮತ್ತು ಚಟುವಟಿಕೆಗಳಲ್ಲಿ ತಮ್ಮ ಛಾಪನ್ನು ಮೂಡಿಸಿದವು. ಬ್ಯಾಂಕುಗಳ ಮತ್ತು ಉದ್ದಿಮೆಗಳ ರಾಷ್ಟ್ರೀಕರಣ, ಮಾಜಿ ರಾಜರುಗಳ ರಾಜಧನ ರದ್ದತಿ, 'ಗರೀಬಿ ಹಟಾವೋ' ಘೋಷಣೆ, ಬಾಂಗ್ಲಾದೇಶದ ವಿಮೋಚನೆಯಂತಹ ತೀವ್ರಗಾಮೀ ಕ್ರಮಗಳ ಮೂಲಕ ಇಂದಿರಾಗಾಂಧಿಯ ಎಡಪಂಥೀಯ ಸೋಗು, ಅದೇ ವೇಳೆಗೆ ಕೇರಳ ಮತ್ತು ಪಶ್ಚಿಮ ಬಂಗಾಲದಲ್ಲಿ ಎಡಪಂಥೀಯರಿಂದ ಸಂಯುಕ್ತ ರಂಗ ಸರಕಾರಗಳ ರಚನೆ, ನೈಜ ಎಡಪಂಥೀಯ ಶಕ್ತಿಗಳು ಮತ್ತು ಇಂದಿರಾಗಾಂಧಿ ನೇತೃತ್ವದ ಕಾಂಗ್ರೆಸ್ ಬಣದ ಸೋಗಿನ ಎಡಪಂಥೀಯತೆಯ ನಡುವೆ ಹೋರಾಟ ಎಪ್ಪತ್ತರ ದಶಕದ ವಿಶಿಷ್ಟ ಬೆಳವಣಿಗೆಗಳು.

ಕರ್ನಾಟಕದಲ್ಲಿ ದೇವರಾಜ ಅರಸು ಇಂದಿರಾ ಬಣವನ್ನು ಪ್ರತಿನಿಧಿಸುತ್ತಿದ್ದವರು. ಅರಸು, ಆರಂಭದಲ್ಲಿ ಒಕ್ಕಲಿಗ(ಹನುಮಂತಯ್ಯ ಮತ್ತು ಇತರರು) ಹಾಗೂ ಲಿಂಗಾಯತ(ನಿಜಲಿಂಗಪ್ಪ ಮತ್ತು ಇತರರು) ಮೇಲ್ಜಾತಿ ಲಾಬ್ಬಿಗಳ ರಾಜಕೀಯ ಪ್ರಾಬಲ್ಯವನ್ನು ವಿರೋಧಿಸುತ್ತಿದ್ದ ಶಕ್ತಿಗಳನ್ನು ಒಟ್ಟುಗೂಡಿಸಿದರು, ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿಗಳು/ಬುಡಕಟ್ಟುಗಳು, ಮುಸ್ಲಿಮರು ಮುಂತಾದವರ ಒಂದು ಮೈತ್ರಿಕೂಟವನ್ನು ಬೆಸೆದು ಜಾತಿಹೋರಾಟದ ಲೋಹಿಯಾವಾದಿ ಪರಿಕಲ್ಪನೆಯನ್ನು ಜಾರಿಗೊಳಿಸಲು ಪ್ರಯತ್ನಿಸಿದರು. ಈ ಹಿನ್ನೆಲೆಯಲ್ಲಿ ಬಸವಲಿಂಗಪ್ಪ ಒಬ್ಬ ದಲಿತ ಮುಖಂಡರಾಗಿ ಮೂಡಿ ಬಂದರು. ಒಬ್ಬ ದಲಿತರು ಸಂಪುಟ ಮಂತ್ರಿಯಾಗಿ ಪ್ರತಿಷ್ಠೆ ಪಡೆಯುವುದು ಮೇಲ್ಜಾತಿಯವರಿಗೆ ಇಷ್ಟವಾಗಲಿಲ್ಲ. ಅಂಬೇಡ್ಕರ್‌ವಾದಿಗಳೊಂದಿಗೆ ಕೈಜೋಡಿಸಿ ನವಬೌದ್ಧ ಸಂಸ್ಥೆಗಳನ್ನು ಬೆಳೆಸುವ ಕಣ್ಣೋಟವನ್ನು ಬಸವಲಿಂಗಪ್ಪ ಹೊಂದಿದ್ದರು. ಕಾಂಗ್ರೆಸಿನ ಇನ್ನೊಬ್ಬ ದಲಿತ ಮುಖಂಡರಾದ ಕೆ.ಹೆಚ್. ರಂಗನಾಥ್ ಕೂಡ ಅಂಬೇಡ್ಕರ್‌ವಾದಿ ನವಬೌದ್ಧ ಗುರಿಗಳ ಈಡೇರಿಕೆಗೆ ಕೆಲಸ ಮಾಡುತ್ತಿದ್ದರು. ಸರ್ವಾಧಿಕಾರಶಾಹೀ-ವಿರೋಧಿ ಚಳುವಳಿ ಅದಾಗಲೇ ಕಾಂಗ್ರೆಸಿನಲ್ಲಿ ವಿಭಜನೆ ತಂದು ಒಂದು ರಾಜಕೀಯ ಮರುಹೊಂದಾಣಿಕೆಯನ್ನು ತಂದಿತು. ಕರ್ನಾಟಕದಲ್ಲಿ ಕಾಂಗ್ರೆಸ್-ಒ ಮತ್ತು ಜನಸಂಘದ ಮೇಲ್ಜಾತಿ ಗುಂಪುಗಳು, ಮತ್ತು ಅವರೊಂದಿಗೆ ಸೇರಿಕೊಂಡ ಸೋಶಲಿಸ್ಟರು ಜನತಾಪಕ್ಷದಲ್ಲಿ ಒಂದುಗೂಡಿದರು. ಇನ್ನೊಂದೆಡೆಯಲ್ಲಿ ದೇವರಾಜ ಅರಸುಗೆ ಹಿಂದುಳಿದ ಜಾತಿಗಳನ್ನು ಒಟ್ಟುಗೂಡಿಸುವುದು ಸಾಧ್ಯವಾಯಿತು. ಬೂಸಾ ಚಳುವಳಿಯನ್ನು ಈ ಹಿನ್ನೆಲೆಯಲ್ಲಿ ನೋಡಬೇಕು.

ಭಾರತ ಸ್ವತಂತ್ರವಾದ ಆರಂಭದಿಂದಲೇ ಶ್ರೀರಾಂಪುರ ಜವಳಿ ಕಾರ್ಮಿಕರ ಒಂದು ಕೇಂದ್ರವಾಗಿತ್ತು, ಕಮುನಿಸ್ಟ್ ಪಕ್ಷ ಬಲವಾಗಿದ್ದ ಸ್ಥಳವಾಗಿತ್ತು. ಜವಳಿ ಕಾರ್ಮಿಕರನ್ನು ಸಂಘಟಿಸಿದ್ದು, ಅಲ್ಲಿನ ಭೂಮಿಯನ್ನು ಆಕ್ರಮಿಸಿಕೊಂಡು ಮೈಸೂರು ಮಿಲ್ಸ್‌ನ ಹಿಂದಿರುವ 'ಸ್ವತಂತ್ರಪಾಳ್ಯ'ವನ್ನು ರೂಪಿಸಿದ್ದು ಕಮ್ಯುನಿಸ್ಟರೇ. ತುರ್ತು ಪರಿಸ್ಥಿತಿಯ ನಂತರದ ಅವಧಿಯಲ್ಲಿ ಮೈಸೂರು ಮಿಲ್ಸ್ ಮತ್ತು ಮಿನರ್ವ ಮಿಲ್ಸ್‌ನ ಸಿಐಟಿಯು ನೇತೃತ್ವದ ಸಂಘಗಳ ಮೂಲಕ ಕಾರ್ಮಿಕ ಆಂದೋಲನ ಇಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಈ ಮಿಲ್ಲುಗಳ ಕಾರ್ಮಿಕರು ಹೆಚ್ಚಾಗಿ ವಾಸವಿದ್ದದ್ದು ಶ್ರೀರಾಂಪುರದಲ್ಲಿ. ಆದ್ದರಿಂದ ಬೂಸಾ ಚಳುವಳಿಯೊಂದಿಗೆ ಮೊದಲಿಗೆ ಬಹಿರಂಗವಾಗಿ ಬಂದ ದಲಿತ ಗುಂಪುಗಳಿಗೆ ಶ್ರೀರಾಂಪುರದ ಸಿಪಿಐ(ಎಂ) ಸ್ಥಳೀಯ ಸಮಿತಿ ಸಕ್ರಿಯವಾಗಿ ನೆರವಾಗುವುದು ಸಾಧ್ಯವಾಗಿತ್ತು. ಸಿದ್ದಲಿಂಗಯ್ಯ ಮತ್ತು ಅವರ ಸಹಯೋಗಿಗಳು, ಗೋಪಾಲಕೃಷ್ಣ ಈಗ ಸಿಪಿಐ(ಎಂ) ಮತ್ತು ದಲಿತ ಮುಖಂಡರಾಗಿ ಮುಂದುವರೆಯುತ್ತಿದ್ದಾರೆ, ಬಸವಲಿಂಗಯ್ಯ ಮತ್ತು ಜನಾರ್ಧನ ನಾಟಕರಂಗ, ಸಂಗೀತ ಕ್ಷೇತ್ರದಲ್ಲಿ ಹೆಸರುಗಳಿಸಿದ್ದಾರೆ. ದೇವಿಕಾರಾಣಿ ಮತ್ತು ರೋರಿಕ್ ಒಡೆತನದ ತಾತಗುಣಿ ಎಸ್ಟೇಟಿನ ದಲಿತ ಕಾರ್ಮಿಕರ ಹೋರಾಟವೂ ಈ ಅವಧಿಯಲ್ಲೇ ನಡೆಯಿತು.

ತುರ್ತು ಪರಿಸ್ಥಿತಿಯ ನಂತರದ ಅವಧಿಯಲ್ಲಿ ಸಾರ್ವಜನಿಕ ವಲಯದ ಕಾರ್ಮಿಕರ ಆಂದೋಲನ ಬೆಳೆಯಿತು. ಪ್ರಗತಿಶೀಲ ಲೇಖಕರು ಮತ್ತು ಸಾಹಿತ್ಯಿಕ ವಿಮರ್ಶಕರೊಂದಿಗೆ ಸಂಪರ್ಕ ಬೆಳೆಸುವ ಬಿ.ಇ.ಎಲ್..ಸಂಗಾತಿಗಳ ಪ್ರಯತ್ನಗಳ ಫಲವಾಗಿ ಡಾ.ಜಿ.ರಾಮಕೃಷ್ಣ, ಕೆ.ವಿ.ನಾರಾಯಣ, ಕಿ.ರಂ.ನಾಗರಾಜ ಮುಂತಾದವರು ಮತ್ತು ನಂತರ ಬೆಂಗಳೂರು ವಿಶ್ವವಿದ್ಯಾಲಯದ ಸಾಹಿತ್ಯಿಕ ಕಾರ್ಯಕರ್ತರಾದ ಸಿ.ವೀರಣ್ಣ, ಡಿ.ಆರ್.ನಾಗರಾಜ್ ಮುಂತಾದವರು ಒಂದುಗೂಡುವಂತಾಯಿತು. ಆಗ, 1978-83ರ ಅವಧಿಯಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿಯಾಗಿದ್ದ ಕಾಂ.ಎಂ.ಕೆ.ಭಟ್ ಇವರೊಂದಿಗೆ ಮುಂದೆ ನಿಂತು ಸಂಪರ್ಕ ಬೆಳೆಸಿದರು. 1975ರ ತುರ್ತುಪರಿಸ್ಥಿತಿಯ ಆರಂಭದ ದಿನಗಳಲ್ಲಿ ಪ್ರಸನ್ನ ಬೆಂಗಳೂರಿಗೆ ಬಂದು ಸಮುದಾಯ ಸ್ಥಾಪಿಸಿದರು, ಗಾರ್ಕಿಯವರ "ತಾಯಿ" ನಾಟಕ ಆಡಿಸಿದರು. ಪಿ.ಗೋವಿಂದ ಪಿಳ್ಳೆ ಮತ್ತು ಎಂ.ಎನ್.ಕುರುಪ್ ಮಾರ್ಗದರ್ಶನದಲ್ಲಿ ವಿಜೆಕೆ ನಾಯರ್ ಸಂಘಟಿಸಿದ್ದ ಲೇಖಕರು ಮತ್ತು ಓದುಗರ ವೇದಿಕೆ ಹಲವು ಕನ್ನಡದ ಯುವ ಲೇಖಕರು ಮತ್ತು ಕಾರ್ಯಕರ್ತರನ್ನು ಒಟ್ಟಿಗೆ ತಂದಿತು.

1976ರ ಅಂತ್ಯದ ವೇಳೆಗೆ ವಿಜೆಕೆ ನಾಯರ್ ತುರ್ತುಪರಿಸ್ಥಿತಿ ಕಾಲದ ಜೈಲುವಾಸದಿಂದ ಬಿಡುಗಡೆಯಾಗಿ ಹೊರಬಂದ ನಂತರ ಸಿದ್ದಲಿಂಗಯ್ಯ, ಡಿ.ಆರ್.ನಾಗರಾಜ್ ಮತ್ತು ಶೂದ್ರ ಶ್ರೀನಿವಾಸ ರವರನ್ನು ದೇಶಾಭಿಮಾನಿ ಸ್ಟಡಿ ಸರ್ಕಲ್‌ನ ರಾಜ್ಯ ಸಮ್ಮೇಳನಕ್ಕೆ ಕರೆದುಕೊಂಡು ಹೋದರು. ಈ ಸಮ್ಮೇಳನವನ್ನು ಡಾ.ಶಿವರಾಮ ಕಾರಂತರು ಉದ್ಘಾಟಿಸಿದ್ದರು. ಅಲ್ಲಿ ಸಿದ್ದಲಿಂಗಯ್ಯ ತಮ್ಮ ಕವಿತೆಗಳನ್ನು ಓದಿದರು. ಅವರ ಒಂದು ಕವನ "ಇಕ್ರಲ್ಲ, ಒದೀರಲ್ಲ, ಈ ನನ್ ಮಕ್ಳ ಚರ್ಮ ಎಬ್ಬಿಸಲ್ಲ" ಕವನವನ್ನು ವಿಜೆಕೆ ನಾಯರ್ ಮಲೆಯಾಳಂಗೆ ಅನುವಾದಿಸಿದರು, ಅದನ್ನು ಹಾಡಿದಾಗ ಸಮ್ಮೇಳನದಲ್ಲಿ ಬಹಳಷ್ಟು ಪ್ರಶಂಸೆ ಗಳಿಸಿತು. ಅಲ್ಲಿಂದ ಅಲೆಪ್ಪಿಗೆ ಭೇಟಿ ನೀಡಿದ ಈ ಮೂವರು ಹುತಾತ್ಮರ ಸ್ತಂಭಕ್ಕೆ ಭೇಟಿ ನೀಡಿ ಕುಟ್ಟನಾಡಿನಲ್ಲಿ ಸಂಚರಿಸಿ ಅಲ್ಲಿಯ ಕೃಷಿ ಕೂಲಿಕಾರರ ಹೋರಾಟಗಳ ಬಗ್ಗೆ ತಿಳಿದುಕೊಂಡರು. ಅಲ್ಲಿಂದ ಹಿಂದಿರುಗಿದ ನಂತರ ಡಿ.ಆರ್.ನಾಗರಾಜ, ಸಿದ್ದಲಿಂಗಯ್ಯ ಮತ್ತು ಬರಗೂರು ರಾಮಚಂದ್ರಪ್ಪನವರ ಮುತುವರ್ಜಿಯಿಂದ 1979ರಲ್ಲಿ ಮೊದಲ ಬಂಡಾಯ ಸಾಹಿತ್ಯ ಸಮ್ಮೇಳನ ನಡೆಯಿತು. "ಖಡ್ಗವಾಗಲಿ ಕಾವ್ಯ" ಎಂಬುದು ಬಂಡಾಯ ಆಂದೋಲನದ ಧ್ಯೇಯವಾಕ್ಯವಾಯಿತು.

ಸಿದ್ದಲಿಂಗಯ್ಯನವರ ತೀಕ್ಷ್ಣವಾದ ಕ್ರಾಂತಿಕಾರಿ ಕವನಗಳು ಮತ್ತು ನಾಟಕಗಳು ಈ 1975-80ರ ಅವಧಿಯವು.ಈ ಅವಧಿಯ ಅವರ ಕವನಸಂಗ್ರಹಗಳಾದ "ಹೊಲೆಮಾದಿಗರ ಹಾಡು' ಮತ್ತು 'ಸಾವಿರಾರು ನದಿಗಳು', ದಲಿತರು, ದಮನಿತರು ಮತ್ತು ಶೋಷಿತರ ಪರವಾದ ಕಾವ್ಯಾಭಿವ್ಯಕ್ತಿಗಳಿಂದ ತುಂಬಿವೆ. ಅವರ ಕವಿತೆಗಳು ಒಂದು ತೀವ್ರಗಾಮಿ ದಲಿತ ಕಾವ್ಯದ ಪ್ರವೃತ್ತಿಯನ್ನು, ಪರಂಪರೆಯನ್ನು ನಿರ್ಮಿಸಿದವು. ಅದು ಇಂದಿಗೂ ಮುಂದುವರೆದಿದೆ.

1980ರ ಅವರ ಎರಡೂ ನಾಟಕಗಳು, "ಪಂಚಮ" ಮತ್ತು "ನೆಲಸಮ" ಗಮನ ಸೆಳೆದವು. ಅವರ ಕವನಗಳು, ನಾಟಕಗಳು ಮತ್ತು ಇತರ ಸಾಹಿತ್ಯಿಕ ಕೃತಿಗಳು "ಬಂಡಾಯ-ದಲಿತ" ಸಾಹಿತ್ಯಿಕ ಚಳುವಳಿಗೆ ನಾಂದಿ ಹಾಕಿದವುಗಳು. ಅವರ ನಾಟಕಗಳು, ಬೀದಿ ನಾಟಕಗಳು, ಹಾಡುಗಳನ್ನು ಸಮುದಾಯ ಸಂಘಟಿಸಿದ ಹಲವು ರಾಜ್ಯವ್ಯಾಪಿ ಸಾಂಸ್ಕೃತಿಕ ಜಾಥಾಗಳು ರಾಜ್ಯದ ಮೂಲೆ-ಮೂಲೆಗೂ ಒಯ್ದುವು. "ಚೋಮನ ದುಡಿ", "ಬೆಲ್ಚಿ", "ತಾಯಿ" ನಾಟಕಗಳಿಗೆ ಬರೆದ ಅವರ ಹಾಡುಗಳು ಬಹಳಷ್ಟು ಜನಪ್ರಿಯವಾದವು. ಅವರ ಕೃತಿಗಳು ಅಸ್ಪೃಶ್ಯತೆ, ಜಾತಿ ದಮನ ಮತ್ತು ವರ್ಗಶೋಷಣೆಯ ವಿರುದ್ಧ ದೃಢ ಹೋರಾಟಗಳನ್ನು ಎತ್ತಿ ಹಿಡಿದಿವೆ. ಈ ಅವಧಿಯಲ್ಲಿಯೇ ಅವರ ಮುತುವರ್ಜಿಯಿಂದ ದಲಿತ ಸಂಘರ್ಷ ಸಮಿತಿ ಸ್ಥಾಪನೆಗೊಂಡಿತು. ಅವರು ರಾಜ್ಯಾದ್ಯಂತ ಸಂಚರಿಸಿ ಬಂಡಾಯ ಸಾಹಿತ್ಯ ಸಂಘಟನೆ ಮತ್ತು ದಲಿತ ಸಂಘರ್ಷ ಸಮಿತಿಯನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದರು. 1978-81ರ ಅವಧಿಯಲ್ಲಿ ಅವರು ಸಿಪಿಐ(ಎಂ)ನೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು. ನಂತರವೂ ಅವರ ದೃಢ ಬದ್ಧತೆ ಮತ್ತು 'ಸಮುದಾಯ' ಹಾಗೂ 'ಬಂಡಾಯ ಸಾಹಿತ್ಯ ಸಂಘಟನೆ' ನೇತೃತ್ವದಲ್ಲಿರುವ ಎಡ-ಪ್ರಗತಿಶೀಲ ಸಾಂಸ್ಕೃತಿಕ-ಸಾಹಿತ್ಯಿಕ ಆಂದೋಲನದೊಂದಿಗೆ ವರ ಸಂಪರ್ಕ-ಸಹಯೋಗ ಮುಂದುವರೆಯಿತು.

ಸಿದ್ದಲಿಂಗಯ್ಯನವರ ಕೃತಿಗಳಿಗೆ ಮುಖ್ಯವಾಹಿನಿಯ ಸಾಹಿತ್ಯ ವಲಯಗಳ ಸ್ವೀಕಾರ ದೊರೆಯಲು ಬಹಳಷ್ಟು ಸಮಯ ಬೇಕಾಯಿತು. ತದನಂತರ ಅವರು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಅಧ್ಯಾಪಕರಾಗಿ ಸೇರಿ, ತಮ್ಮ ಸಾಹಿತ್ಯಿಕ ಚಟುವಟಿಕೆಗಳನ್ನು ಮುಂದುವರೆಸಿದರು. ರಾಜಕೀಯ ಮಾನ್ಯತೆ ಮತ್ತು ಅಂಗೀಕಾರವೂ ದೊರೆಯಲಾರಂಭಿಸಿತು- ಮೊದಲು, ರಾಮಕೃಷ್ಣ ಹೆಗ್ಡೆ ಅವರನ್ನು ವಿಧಾನ ಪರಿಷತ್ ಸದಸ್ಯರಾಗಿ (ಎಂಎಲ್‌ಸಿ) ಮಾಡಿದರು. ಎಂಎಲ್‌ಸಿಯಾಗಿ ಅವರ ಭಾಷಣಗಳ ಎರಡು ಸಂಪುಟಗಳು 1997ರಲ್ಲಿ ಮತ್ತು 2008ರಲ್ಲಿ ಪ್ರಕಟವಾದವು. ಅವು ಬಹಳಷ್ಟು ಪ್ರಶಂಸೆ ಗಳಿಸಿದವು. 1984ರಿಂದ ಪ್ರಶಸ್ತಿಗಳ ಪ್ರವಾಹ ಆರಂಭವಾಯಿತು. ಅವರ ನಾಟಕ "ಏಕಲವ್ಯ", ಆತ್ಮಕಥನ "ಊರುಕೇರಿ", ಗ್ರಾಮದೇವತೆಗಳನ್ನು ಕುರಿತ ಅವರ ಸಂಶೋಧನೆಯನ್ನು ಆಧರಿಸಿದ "ಅವತಾರಗಳು" ಹೊಸ ಹಾದಿ ನಿರ್ಮಿಸಿದ ಕೃತಿಗಳು. ಅವರು ಶ್ರವಣ ಬೆಳಗೊಳದಲ್ಲಿ ನಡೆದ 81ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದರು. ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯಕಾರಿ ಮಂಡಳಿಯ ಸದಸ್ಯರೂ ಆಗಿದ್ದರು.

ಅಧಿಕಾರಸ್ಥರೊಂದಿಗೆ ಸಹಯೋಗದ ಅವರ ದೌರ್ಬಲ್ಯ ಅಂತಿಮವಾಗಿ ಅವರನ್ನು ಆಳುವ ಪಕ್ಷದೊಂದಿಗೆ ಸಹಕರಿಸುವಂತೆ ಮಾಡಿತು. ರಾಜ್ಯಗಳ ಆಳುವ ಪಕ್ಷಗಳು ಪ್ರಭಾವೀ ಸಾಂಸ್ಕೃತಿಕ ವ್ಯಕ್ತಿಗಳನ್ನು ಮತ್ತು ಜನತಾ ಆಂದೋಲನಗಳ ಮುಖಂಡರುಗಳನ್ನು ಓಲೈಸುವ, ತಮ್ಮವರಾಗಿಸಿಕೊಳ್ಳುವ ಪ್ರವೃತ್ತಿ ಜನತಾಪಕ್ಷದ ಆರಂಭದ ದಿನಗಳಿಂದ ಕಂಡು ಬಂದಿದೆ, ಅದು ಈಗಲೂ ಮುಂದುವರೆಯುತ್ತಿದೆ. ಆದಾಗ್ಯೂ, ದಮನಿತರ ಪರವಾದ, ಕ್ರಾಂತಿಕಾರಿ ಭಾವಕ್ಕೆ ಡಾ.ಸಿದ್ದಲಿಂಗಯ್ಯನವರ ಕೊಡುಗೆ ಅವರ ಕೃತಿಗಳ ಮೂಲಕ ಬದುಕುಳಿದಿವೆ. ಅವರ ಕವಿತೆಗಳು 1980ರ ದಶಕದ ನಂತರದ ಹಲವು ಪ್ರಗತಿಶೀಲ ಆಂದೋಲನಗಳ, ಸಾಕ್ಷರತಾ ಆಂದೋಲನ, ಜನವಿಜ್ಞಾನ ಆಂದೋಲನ ಮುಂತಾದವುಗಳ ಭಾಗವಾಗಿ ಬಿಟ್ಟಿವೆ. ಇಂದಿಗೂ ಕೂಡ ಅವರ ಕ್ರಾಂತಿಕಾರಿ ಕವಿತೆಗಳು ಸುಪ್ರಸಿದ್ಧವಾಗುಳಿದಿವೆ; ಪ್ರಗತಿಶೀಲ ಶಕ್ತಿಗಳ ಮತ್ತು ಶ್ರಮಜೀವಿಗಳ ಸಂಘಟನೆಗಳ ಪ್ರತಿಯೊಂದು ಸಭೆಯಲ್ಲಿ ಅವನ್ನು ವಾಚಿಸಲಾಗುತ್ತಿದೆ, ಹಾಡಲಾಗುತ್ತಿದೆ. ಅವು ಶ್ರಮಜೀವಿ ಜನಗಳ ಹೋರಾಟಗಳಿಗೆ ಇಂದು ಕೂಡ ಸ್ಫೂರ್ತಿದಾಯಕವಾಗಿವೆ.



## ಪುಟ 14 ರಿಂದ 100 ದಿನಗಳ ಎಲ್‌ಡಿಎಫ್ ಕ್ರಿಯಾಯೋಜನೆ

ಜನಗಳಲ್ಲಿ ಐವರಿಗೆ ಉದ್ಯೋಗ ನಿರ್ಮಿಸುವ ಕರಡು ಯೋಜನೆಗಳನ್ನು ತಯಾರಿಸುತ್ತವೆ ಎಂದು ಎಲ್‌ಡಿಎಫ್ ಸರಕಾರದ ಪ್ರಕಟಣೆ ತಿಳಿಸಿದೆ.

ವಿವಿಧ ಇಲಾಖೆಗಳಲ್ಲಿ ಈ 100 ದಿನಗಳಲ್ಲಿ ಸುಮಾರು 77,350 ನೇರ ಮತ್ತು ಪರೋಕ್ಷ ಉದ್ಯೋಗಗಳನ್ನು ನಿರ್ಮಿಸಲಾಗುವುದು. ಕೈಗಾರಿಕಾ ಇಲಾಖೆಯಲ್ಲಿ 10,000, ಸಹಕಾರಿ ಇಲಾಖೆಯಲ್ಲಿ 10,000, ಕುಡುಂಬಶ್ರೀಯಲ್ಲಿ 2000, ಕೇರಳ ಹಣಕಾಸು ನಿಗಮದಲ್ಲಿ 2000, ಮಹಿಳಾ ಅಭಿವೃದ್ಧಿ ನಿಗಮದಲ್ಲಿ 2500, ಹಿಂದುಳಿದವರ ಅಭಿವೃದ್ಧಿ ನಿಗಮದಲ್ಲಿ 2500, ಐಟಿ ವಯದಲ್ಲಿ 1000, ಸ್ಥಳೀಯ ಸ್ವಯಮಾಡಳಿತ ಇಲಾಖೆಯಲ್ಲಿ 7000(ಯುವ ಮಹಿಳಾ ಉದ್ಯಮ ಕಾರ್ಯಕ್ರಮದಲ್ಲಿ 5000 ಮತ್ತು ಅತಿ ಸಣ್ಣ ಉದ್ದಿಮೆ ವಲಯದಲ್ಲಿ 2000), ಆರೋಗ್ಯ ಇಲಾಖೆಯಲ್ಲಿ ಪರೋಕ್ಷವಾಗಿ 4142, ಪಶುಸಂಗೋಪನೆ ಇಲಾಖೆಯಲ್ಲಿ ಪರೋಕ್ಷವಾಗಿ 350 ಮತ್ತು ಸಾರಿಗೆ ಇಲಾಖೆಯಲ್ಲಿ 7500 ಉದ್ಯೋಗಗಳನ್ನು ನಿರ್ಮಿಸುವ ನಿರ್ದಿಷ್ಟ ಗುರಿ ಹಾಕಿಕೊಳ್ಳಲಾಗಿದೆ. ಗ್ರಾಮ ಸರ್ವೆ ಚಟುವಟಿಕೆಗಳ ಭಾಗವಾಗಿ ರೆವಿನ್ಯೂ ಇಲಾಖೆ 26,000 ಸರ್ವೆಯರುಗಳು ಮತ್ತು ಚೈನ್‌ಮನ್ ನೇಮಕಗಳನ್ನು ಮಾಡುತ್ತದೆ.

ವಿವಿಧ ಮೂಲಗಳಿಂದ ರೂ. 5898 ಕೋಟಿ ಸಾಲಗಳು ಈ ಪರಿಯೋಜನೆಗಳಿಗೆ ಮಂಜೂರಾಗಿವೆ, ಇದರ ಜೊತೆಗೆ ರಾಜ್ಯ ಸರಕಾರದ ಪಾಲನ್ನು ಸೇರಿಸಿದರೆ ಒಟ್ಟು ರೂ. 8425 ಕೋಟಿ ಈ 'ಕೇರಳ ಪುನರ್‌ನಿರ್ಮಾಣ ಮುತುವರ್ಜಿ'ಗೆ ಲಭ್ಯವಾಗುತ್ತವೆ.

ಮುಂದಿನ 100 ದಿನಗಳಲ್ಲಿ ರೂ.945.35 ಕೋಟಿ ಮೌಲ್ಯದ 9 ರಸ್ತೆ ಪರಿಯೋಜನೆಗಳು ಆರಂಭವಾಗುತ್ತವೆ; ಪಿಡಬ್ಲ್ಯುಡಿ ರೂ.1519.57 ಕೋಟಿ ಮೌಲ್ಯದ ಕಾಮಗಾರಿಗಳನ್ನು ಪೂರ್ಣಗೊಳಿಸುತ್ತದೆ; ರೂ.200.10 ಕೋಟಿ ಮೌಲ್ಯದ ರಸ್ತೆ-ಸೇತುವೆ ಪರಿಯೋಜನೆಗಳ ಉದ್ಘಾಟನೆಯಾಗಲಿದೆ.

ಅಲ್ಲದೆ ರಾಜ್ಯ ಸರಕಾರ ಈ 100ದಿನಗಳಿಗೆ ಹಾಕಿಕೊಂಡ ಇತರ ಗುರಿಗಳು ಹೀಗಿವೆ:

12,000 ಭೂಮಿ ಹಕ್ಕುಪತ್ರಗಳ ವಿತರಣೆ; ಸರಕಾರೀ ಸೇವೆಗಳನ್ನು ಪಡೆಯಲು ಹಲವು ಐಟಿ ಕ್ರಮಗಳ ಆರಂಭ; ಲೈಫ್ ಮಿಷನ್ ಅಡಿಯಲ್ಲಿ ಇನ್ನೂ 10,000 ಮನೆಗಳ ನಿರ್ಮಾಣ; ವಿದ್ಯಾಶ್ರೀ ಯೋಜನೆಯ ಅಡಿಯಲ್ಲಿ 50,000 ಲ್ಯಾಪ್‌ಟಾಪ್‌ಗಳ ವಿತರಣೆ; 200 ಗ್ರಾಮ ಪಂಚಾಯತುಗಳಲ್ಲಿ ನೀಲವ ಪರಿಯೋಜನೆ ಆರಂಭ.

## ಜಾತಿ ಶ್ರೇಷ್ಠತೆಯ ವ್ಯಸನದಿಂದ ಮುಕ್ತರಾಗಬೇಕಿದೆ.... ಪುಟ 6 ರಿಂದ

ವ್ಯಾಧಿ. ಸಾಮುದಾಯಿಕ ನೆಲೆಯಲ್ಲಿ ಮಾತ್ರವೇ ಇದನ್ನು ನಿಷ್ಕರ್ಷೆಗಳಪಡಿಸುವುದರಿಂದ ನಾವು, ಶೋಷಣೆಯ ಮೂಲದಿಂದ ವಿಮುಖರಾಗುತ್ತೇವೆ. ಶ್ರೇಷ್ಠತೆ ಎನ್ನುವುದು ಒಂದು ವ್ಯಸನ, ಶೋಷಕ ಮನಸ್ಥಿತಿ ನಮ್ಮನ್ನು ಕಾಡುತ್ತಿರುವ ವ್ಯಾಧಿ. ಇದರ ಮೂಲ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲೇ ಅಡಗಿದೆ. ಜನರ ಮನಸ್ಥಿತಿಯಲ್ಲಿ ಅಡಗಿದೆ, ಮನೋಭಾವದಲ್ಲಿ ಅಡಕವಾಗಿದೆ ಮತ್ತು ಸಾರ್ವಜನಿಕ ಧೋರಣೆಯಲ್ಲಿ ಅಡಗಿದೆ.

ನಾವು ಎಫ್ ಐ ಆರ್ ದಾಖಲಿಸುವುದೇ ಆದರೆ ಈ ಮನೋಭಾವದ ವಿರುದ್ಧ ದಾಖಲಿಸಬೇಕಿದೆ. ಈ ಮನಸ್ಥಿತಿಯನ್ನು ರಾಜದ್ರೋಹದ ಕಾಯ್ದೆಯಡಿ ಬಂಧಿಸಬೇಕಿದೆ. ಈ ಧೋರಣೆಯ ಗಡೀಪಾರು ಮಾಡಬೇಕಿದೆ. ನಾವು 21ನೆಯ ಶತಮಾನದ ಮೂರನೆಯ ದಶಕದಲ್ಲಿದ್ದೇವೆ ಎನ್ನುವ ಪ್ರಜ್ಞೆಯೂ ನಮ್ಮಲ್ಲಿರಬೇಕಲ್ಲವೇ? ಭಾರತ ಬದಲಾಗಬೇಕಿರುವುದು ಇಲ್ಲಿ.

# ಹೊಸ ಪರಿಸ್ಥಿತಿ - ಸಮಸ್ಯೆಗಳು ಮತ್ತು ನಿರೀಕ್ಷೆಗಳು

## ಅಂತರರಾಷ್ಟ್ರೀಯ ಪರಿಸ್ಥಿತಿಯಲ್ಲಿ ವಿಪರೀತ ಬದಲಾವಣೆಗಳು




**ಎಂಭತ್ತರ ದಶಕದ ಕೊನೆಯಲ್ಲಿ ಮತ್ತು ತೊಂಭತ್ತರ ದಶಕದ ಆರಂಭದಲ್ಲಿ ಅಂತರ್ರಾಷ್ಟ್ರೀಯ ಬೆಳವಣಿಗೆಗಳಿಂದಾಗಿ ಭಾರತದ ರಾಷ್ಟ್ರೀಯ ಸಂದರ್ಭದಲ್ಲಿಯೂ ಕಂಡು ಬಂದ ವ್ಯಾಪಕ ಬೆಳವಣಿಗೆಗಳು ಕಾರ್ಮಿಕ-ವರ್ಗವು ಇತರ ಶ್ರಮಿಕ ಸಮುದಾಯದೊಂದಿಗೆ ಸೇರಿಕೊಂಡು ಐಕ್ಯ ಪ್ರತಿರೋಧದ ಹಾದಿಗೆ ಸಾಗಲೇ ಬೇಕಾದ ಪರಿಸ್ಥಿತಿ ಉಂಟುಮಾಡಿದವು. ಕಾರ್ಮಿಕ ವರ್ಗದ ಸಂರಚನೆಯಲ್ಲಿನ ಬದಲಾವಣೆಗಳು ಹೊಸ ಸಮಸ್ಯೆಗಳೊಂದಿಗೆ ಹೊಸ್ತ ಸಾಧ್ಯತೆಗಳನ್ನೂ ತೆರೆದವು.**

ಮೂಲ ಲೇಖಕರು: **ಸುಕೋಮಲ್ ಸೇನ್** ಸಂಗ್ರಹ-ಅನುವಾದ: **ಸಿ.ಆರ್.ಶಾನಭಾಗ್**

1989ರ ಮಧ್ಯದಲ್ಲಿ ಬರ್ಲಿನ್ ಗೋಡೆಯನ್ನು ಕಿತ್ತುಹಾಕುವ ಮೂಲಕ ಸಮಾಜವಾದಿ ಜಗತ್ತಿನಲ್ಲಿ ಪ್ರಾರಂಭವಾದ ಕಂಪನವು ಸೋವಿಯತ್ ಸರ್ಕಾರದ ಪತನ ಮತ್ತು 1991 ರ ಮಧ್ಯದಲ್ಲಿ ಹಿಂದಿನ ಸೋವಿಯತ್ ಒಕ್ಕೂಟದ ಸಂಪೂರ್ಣ ವಿಘಟನೆಯೊಂದಿಗೆ ಉತ್ತುಂಗಕ್ಕೇರಿತು. ಸಮಾಜವಾದದ ಕಣದಲ್ಲಿಯ ಈ ದುರಂತ ಬದಲಾವಣೆಗಳು ಸಾಮ್ರಾಜ್ಯಶಾಹಿ ಅಧಿಪತಿ– ಅಮೇರಿಕಾ ವಿಶ್ವ ಬೆಳವಣಿಗೆಗಳನ್ನು ಅತಿಕ್ರಮಿಸುವ ಮೂಲಕ ಏಕಧ್ರುವ ಜಗತ್ತನ್ನು ಹೊರತಂದಿತು.

"ಸಮಾಜವಾದವು ಸತ್ತಿದೆ ಮತ್ತು ಬಂಡವಾಳಶಾಹಿಯು ಮಾನವ ಸಮಾಜದ ಅಭಿವೃದ್ಧಿಯ ಅತ್ಯುನ್ನತ ಹಂತವಾಗಿದೆ" ಎಂಬ ಅಪಸ್ವರ ಎಲ್ಲೆಡೆ ಹರಡಿತು ಮತ್ತು ಹಿಂದಿನ ಸಮಾಜವಾದಿ ದೇಶಗಳ ಕಾರ್ಮಿಕ ವರ್ಗ ಮತ್ತು ಇತರ ಶ್ರಮಜೀವಿಗಳು ದಿಗ್ಭ್ರಮೆಗೊಂಡು ಮತ್ತು ಗೊಂದಲಕ್ಕೊಳಗಾದರೆ, ವಿವಿಧ ದೇಶಗಳಲ್ಲಿನ ಕಾರ್ಮಿಕ ವರ್ಗ ಮತ್ತು ಸಮಾಜವಾದಿ ಚಳುವಳಿಯು ಭಯಾನಕ ಕಷ್ಟಕರ ಪರಿಸ್ಥಿತಿಯ ಮೂಲಕ ಸಾಗಬೇಕಾಯಿತು.

ಉಳಿದ ಸಮಾಜವಾದಿ ರಾಷ್ಟ್ರಗಳಾದ ಚೀನಾ. ವಿಯೆಟ್ನಾಂ. ಲಾವೋಸ್. ಉತ್ತರ–ಕೊರಿಯಾ ಮತ್ತು ಕ್ಯೂಬಾ ಹೊಸ ಆರ್ಥಿಕ ಪರಿಸ್ಥಿತಿಗೆ ಹೊಂದಿಕೊಳ್ಳಲು ಮತ್ತು ಮುಂದೆ ಸಾಗಲು ತಮ್ಮ ಆರ್ಥಿಕ ಮತ್ತು ಆಂತರಿಕ ನೀತಿಗಳನ್ನು ಮರುಹೊಂದಿಸುತ್ತಿವೆ. ಸಂಯುಕ್ತರಾಷ್ಟ್ರ ಸಂಸ್ಥೆಯ ನಿರ್ಣಯವನ್ನುಉಲ್ಲಂಘಿಸಿ ಅಮೇರಿಕಾ ಹೇರಿದ ನಿರ್ಬಂಧ ಮತ್ತು ನಿಷೇಧಗಳಿಂದ ಕ್ಯೂಬಾ ತೀವ್ರ ಒತ್ತಡದಲ್ಲಿದೆ ಮತ್ತು ಈ ಪುಟ್ಟ ಕ್ಯಾರಿಬಿಯನ್ ಸಮಾಜವಾದಿ ರಾಷ್ಟ್ರ ಉಳಿವಿಗಾಗಿ ತೀವ್ರವಾಗಿ ಹೆಣಗಾಡುತ್ತಿದೆ.

ಹೊಸ ಪರಿಸ್ಥಿತಿಗೆ ಮರುಸಂಘಟಿಸುವ ಮತ್ತು ಹೊಂದಿಕೊಳ್ಳುವ ಪ್ರಯತ್ನಗಳೊಂದಿಗೆ ಅಂತರರಾಷ್ಟ್ರೀಯ ಟ್ರೇಡ್ ಯೂನಿಯನ್ ಚಳುವಳಿ ಅಸ್ತವ್ಯಸ್ತವಾಗಿದೆ. ಕೆಲವು ಏಷ್ಯನ್, ಲ್ಯಾಟಿನ್ ಅಮೇರಿಕನ್ ಮತ್ತು ಆಫ್ರಿಕನ್ ದೇಶಗಳಲ್ಲಿ ಮಾತ್ರ ಟ್ರೇಡ್ ಯೂನಿಯನ್ ಆಂದೋಲನ ಇನ್ನೂ ಅಖಂಡವಾಗಿ ಇದೆ ಅಥವಾ ಸವೆತ ಮತ್ತು ಅವನತಿಯನ್ನು ತಡೆಯಲು ಹೋರಾಡುತ್ತಿದೆ.

ವಿಶ್ವ ಬಂಡವಾಳಶಾಹಿ ಆರ್ಥಿಕತೆಯು ಸಹ ಹೊಸ ಹಂತದಲ್ಲಿ ಆಳವಾದ ಬಿಕ್ಕಟ್ಟಿನಲ್ಲಿದೆ. 1970 ರ ದಶಕದ ಮಧ್ಯಭಾಗದಲ್ಲಿ ಪ್ರಾರಂಭವಾದ ತೀವ್ರ ಮತ್ತು ದೀರ್ಘಾವಧಿಯ ಆರ್ಥಿಕ ಹಿಂಜರಿತ ಮುಂದುವರೆದಿದೆ. ನಿಜ, ಬಂಡವಾಳಶಾಹಿಯು ಈ ಆಳವಾದ ಆರ್ಥಿಕ ಹಿಂಜರಿತದಿಂದ ಚೇತರಿಸಿಕೊಳ್ಳುವಲ್ಲಿ ಭಾಗಶಃ ಯಶಸ್ವಿಯಾಗಿದೆ ಮತ್ತು ಈ ಭಾಗಶಃ ಚೇತರಿಕೆಯ ಒಂದು ಕಾರ್ಯವಿಧಾನವೆಂದರೆ ವಿಶ್ವಬ್ಯಾಂಕ್, ಐಎಂಎಫ್ ನಂತಹ ಅಂತರರಾಷ್ಟ್ರೀಯ ಏಜೆನ್ಸಿಗಳ 'ರಚನಾತ್ಮಕ ಹೊಂದಾಣಿಕೆ ಕಾರ್ಯಕ್ರಮ'ದ ಮತ್ತು ಡಂಕೆಲ್ ಪ್ರಸ್ತಾಪದ ಕುರಿತು ತೀರ್ಮಾನಿಸಲಾದ ಗ್ಯಾಟ್ ಒಪ್ಪಂದದ ಮೂಲಕ ಮೂರನೇ ವಿಶ್ವದ ರಾಷ್ಟ್ರಗಳ ಮೇಲೆ ಹೆಚ್ಚು ಹೆಚ್ಚು ಹೊರೆ ಹೇರುತ್ತಿರುವದು. ಈಗ ಬಹುರಾಷ್ಟ್ರೀಯ–ನಿಗಮಗಳು ಸ್ಥಳೀಯ ಕೈಗಾರಿಕೆಗಳ ವೆಚ್ಚದಲ್ಲಿ ಪಶ್ಚಿಮದ ಕೈಗಾರಿಕೆಗಳ ಮಹಾನಗರಗಳಿಗೆ ಸೂಪರ್–ಲಾಭಗಳನ್ನು ರಫ್ತು ಮಾಡುವ ಮೂಲಕ ಮೂರನೇ ಪ್ರಪಂಚದಾದ್ಯಂತ ಅನಿಯಂತ್ರಿತ ನಿಯಂತ್ರಣವನ್ನು ಹೊಂದುತ್ತಿವೆ.

ಭಾರತದ ರಾಷ್ಟ್ರೀಯ ಸನ್ನಿವೇಶದಲ್ಲಿನ ವ್ಯಾಪಕವಾದ ಬೆಳವಣಿಗೆಗಳನ್ನು ಈ ಅಂತರರಾಷ್ಟ್ರೀಯ ಸಂದರ್ಭದಲ್ಲಿ ನಿರ್ಣಯಿಸಬೇಕಾಗಿದೆ.

ಅಲ್ಪಮತದ ಚಂದ್ರಶೇಖರ್ ಸರ್ಕಾರದ ಪತನ ಮತ್ತು 21 ಮೇ 1991 ರಂದು ರಾಜೀವ್ ಗಾಂಧಿಯವರ ದುರಂತ ಹತ್ಯೆಯೊಂದಿಗೆ, ನರಸಿಂಹ ರಾವ್ ಸರ್ಕಾರ 1991 ರ ಜೂನ್‌ನಲ್ಲಿ ಅಧಿಕಾರಕ್ಕೆ ಬಂದಿತು ಮತ್ತು ರಾಜೀವ್ ಗಾಂಧಿ ಸರ್ಕಾರವು ಕೈಗೊಂಡ ಹೊಸ ಆರ್ಥಿಕ ನೀತಿಗೆ ಈ ಹೊಸ ಸರ್ಕಾರದ ಅಡಿಯಲ್ಲಿ ಭಾರಿ ಪ್ರಮಾಣದ ವ್ಯಾಪ್ತಿಯನ್ನು ನೀಡಲಾಯಿತು. ಇದು ಸಾರ್ವಜನಿಕ ವಲಯದ ಘಟಕಗಳನ್ನು ಖಾಸಗೀಕರಣಗೊಳಿಸುವ ಪ್ರಕ್ರಿಯೆಗೆ ಕಾರಣವಾಯಿತು ಮತ್ತು ವಿದೇಶಿ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ನಿರ್ದಾಕ್ಷಿಣ್ಯವಾಗಿ ಬಾಗಿಲು ತೆರೆಯಲಾಯಿತು, ಭಾರತದ ವ್ಯಾಪಾರ ಮತ್ತು ಆರ್ಥಿಕತೆಯ ಸ್ವಾವಲಂಬನೆಯನ್ನು ತೀವ್ರವಾಗಿ ದುರ್ಬಲಗೊಳಿಸಿತು.

ರಾವ್ ಸರ್ಕಾರದ ಹೊಸ ಆರ್ಥಿಕ ಮತ್ತು ಕೈಗಾರಿಕಾ ನೀತಿಗಳು ಕಾರ್ಮಿಕ ವರ್ಗವನ್ನು ತೀವ್ರ ಒತ್ತಡಕ್ಕೆ ಸಿಲುಕಿಸಿದವು ಮತ್ತು ಕಾರ್ಮಿಕ–ವರ್ಗವು ಇತರ ಶ್ರಮಿಕ ಸಮುದಾಯದೊಂದಿಗೆ ಸೇರಿಕೊಂಡು ಐಕ್ಯ ಪ್ರತಿರೋಧದ ಹಾದಿಗೆ ಸಾಗಲೇ ಬೇಕಾದ ಪರಿಸ್ಥಿತಿ ಉಂಟಾಯಿತು. ಈ ಹೊಸ ಆರ್ಥಿಕ ಮತ್ತು ಕೈಗಾರಿಕಾ ನೀತಿಗಳ ದಾಳಿಯ ವಿರುದ್ಧ–ಸತತ ನಾಲ್ಕು ವರ್ಷಗಳಲ್ಲಿ ನಾಲ್ಕು ಅಖಿಲ ಭಾರತ ಸಾರ್ವತ್ರಿಕ ಐಕ್ಯ ಮುಷ್ಕರಗಳನ್ನು 29 ನವೆಂಬರ್ 1991, 16 ಜೂನ್ 1992, 9 ಸೆಪ್ಟೆಂಬರ್ 1993 ಮತ್ತು ಮತ್ತೆ 29 ಸೆಪ್ಟೆಂಬರ್ 1994 ರಂದು ನಡೆಸಲಾಯಿತು. ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿಯ ಕರೆಯ ಮೇರೆಗೆ 1992 ರ ನವೆಂಬರ್ 25 ರಂದು ದೆಹಲಿಯ ಬೋಟ್ ಕ್ಲಬ್‌ನಲ್ಲಿ ಅಭೂತಪೂರ್ವ ಬೃಹತ್ ಕಾರ್ಮಿಕ ವರ್ಗದ ರ್‍ಯಾಲಿ ಕಾರ್ಮಿಕ ವರ್ಗದ ಈ ಐಕ್ಯತೆಗೆ ಮತ್ತೊಂದು ಸೂಚಕವಾಯಿತು.

ಸಿಐಟಿಯು ಸ್ಥಾಪಕ ಅಧ್ಯಕ್ಷ ಮತ್ತು ದೇಶದ ಸಮರಶೀಲ ಟ್ರೇಡ್ ಯೂನಿಯನ್ ಮತ್ತು ಕಮ್ಯುನಿಸ್ಟ್ ಚಳವಳಿಯ ಶಿಲ್ಪಿ ಮತ್ತು ತಮ್ಮ ಜೀವನದ ಕೊನೆಯ ದಿನದವರೆಗೂ ಸಕ್ರಿಯರಾಗಿದ್ದ, ಬಿ.ಟಿ. ರಣದಿವೆ. ಏಪ್ರಿಲ್ 6, 1990 ರಂದು ನಿಧನರಾದರು.

ಐಕ್ಯ ಮತ್ತು ಸಮರಶೀಲ ಟ್ರೇಡ್ ಯೂನಿಯನ್ ಹೋರಾಟವನ್ನು ಕಟ್ಟುವುದು ಸುಲಭದ ಕೆಲಸವಲ್ಲ. ಕೋಮು ಹಿಂಸಾಚಾರ, ಜಾತಿ ಕಲಹದ ಪ್ರಚೋದನೆಗಳೊಂದಿಗೆ ಪದೇ ಪದೇ ಎದ್ದು ಬರುತ್ತಿರುವ, ಪ್ರತ್ಯೇಕತಾವಾದಿ ಹಿಂಸೆ ಮತ್ತು ಧಾರ್ಮಿಕ ಮೂಲಭೂತವಾದದ ಏರಿಕೆಯ ಸಮಯದಲ್ಲಿ, ಕಾರ್ಮಿಕ ವರ್ಗವನ್ನು ಒಗ್ಗೂಡಿಸಿ ಪ್ರಜಾಪ್ರಭುತ್ವದ ಹೋರಾಟದ ಹಾದಿಯಲ್ಲಿ ನಡೆಸುವುದು ಕಠಿಣ ಕಾರ್ಯವಾಗಿತ್ತು. ಆದ್ದರಿಂದ ಕಾರ್ಮಿಕ ಸಂಘಗಳು, ಈ ಅವಧಿಯಲ್ಲಿ, ಒಂದು ಕಡೆ ಆಂದೋಲನವನ್ನು ಸಂಘಟಿಸಬೇಕಾಗಿತ್ತು, ಮತ್ತು ಇನ್ನೊಂದೆಡೆ, ಕೋಮು ಮತ್ತು ಜಾತಿ ಸೌಹಾರ್ದತೆಗಾಗಿ, ಪ್ರತ್ಯೇಕತಾವಾದ ಮತ್ತು ಧಾರ್ಮಿಕ ಮೂಲಭೂತವಾದದ ಉತ್ಕರ್ಷದ ವಿರುದ್ಧ ಶೈಕ್ಷಣಿಕ ಅಭಿಯಾನವನ್ನು ನಡೆಸಬೇಕಾಗಿತ್ತು. ಈ ಶೈಕ್ಷಣಿಕ ಪ್ರಯತ್ನಗಳು ಮತ್ತು ಸಾಮೂಹಿಕ ಅಣಿನೆರಸುವಿಕೆ, ಸರ್ಕಾರದ ಆರ್ಥಿಕ ಮತ್ತು ಇತರ ನೀತಿ ವಿಷಯಗಳ ಬಗ್ಗೆ ಐಕ್ಯ ಹೋರಾಟವನ್ನು ನಿರ್ಮಿಸುವ ಪ್ರಯತ್ನಗಳೊಂದಿಗೆ ಕೈಜೋಡಿಸಿತು. ಇದು ಭಾರತದ ಟ್ರೇಡ್ ಯೂನಿಯನ್ ಆಂದೋಲನಕ್ಕೆ ಸಾಧಾರಣ ಸಾಧನೆಯಾಗಿರಲಿಲ್ಲ.

### ಕಾರ್ಮಿಕ ವರ್ಗದ ಏಕತೆ ಮತ್ತು ಐಕ್ಯ ಹೋರಾಟದ ಪ್ರಶ್ನೆ

ತಾತ್ಕಾಲಿಕ ಏಕತೆಯ ಪ್ರಯತ್ನಗಳ ಈ ಹಿನ್ನೆಲೆಯಲ್ಲಿಯೇ, 1979 ರಲ್ಲಿ ಸಿಐಟಿಯು ಶಾಶ್ವತ ಮತ್ತು ಸಂಬದ್ಧ ಸ್ವರೂಪದ ಟ್ರೇಡ್ ಯೂನಿಯನ್ ಐಕ್ಯತೆಯನ್ನು ನಿರ್ಮಿಸುವ ದೃಢವಾದ ಪ್ರಸ್ತಾಪವನ್ನು ಮುಂದಿಟ್ಟಿತು.

1979 ರ ಏಪ್ರಿಲ್ 11–15 ರಿಂದ ಮದ್ರಾಸ್‌ನಲ್ಲಿ ನಡೆದ ಸಿಐಟಿಯು ನಾಲ್ಕನೇ ಅಖಿಲ ಭಾರತ ಸಮ್ಮೇಳನದ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಬಿ.ಟಿ. ರಣದಿವೆ, ಟ್ರೇಡ್ ಯೂನಿಯನ್ ಐಕ್ಯತೆಯ ವಿಷಯದ ಕುರಿತು ಯೋಚಿಸಿದರು ಮತ್ತು ದೃಢವಾದ ಪ್ರಸ್ತಾಪವನ್ನು ಮುಂದಿಟ್ಟರು.

"ಸರ್ಕಾರದ ನೀತಿ ನಿರ್ಧಾರಗಳನ್ನು ರೂಪಿಸಲು ಕಾರ್ಮಿಕ ಚಳುವಳಿ ತನ್ನ ಸಂಪೂರ್ಣ ಶಕ್ತಿಯನ್ನು ಬಳಸದಿದ್ದರೆ, ಅದು ಕಾರ್ಮಿಕರ ಹಿತಾಸಕ್ತಿಗಳನ್ನು ಕಾಪಾಡುವಲ್ಲಿ ಯಶಸ್ವಿಯಾಗುವುದಿಲ್ಲ. ಸಿಐಟಿಯು ಎಲ್ಲಾ ಕೇಂದ್ರ ಕಾರ್ಮಿಕ ಸಂಘಗಳು, ಎಲ್ಲಾ ನೌಕರರ ಸಂಘಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರು ಮತ್ತು ಶಿಕ್ಷಕರು ಮತ್ತು ಪ್ರಾಧ್ಯಾಪಕರ ಸಂಘಗಳು ಒಟ್ಟಾಗಿ ಸೇರಿಕೊಂಡು ಸಾರ್ವತ್ರಿಕ ಕಾರ್ಮಿಕ–ಪರ ನೀತಿಗಾಗಿ ಒತ್ತಡ ಹೇರಲು ಮತ್ತು ಎಲ್ಲಾ ವಿಭಾಗಗಳ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವಂತೆ ಕೋರುತ್ತದೆ. ..ಎಲ್ಲ ಸಂಘಗಳು ಕೂಡಲೇ ಪರಿಸ್ಥಿತಿಯನ್ನು ನಿಭಾಯಿಸಲು ಒಗ್ಗೂಡಬೇಕು, ಬೇಡಿಕೆಗಳು ಮತ್ತು ಶಾಸನಗಳ ಪ್ರಶ್ನೆಯನ್ನು ಸಾಮಾನ್ಯ ವೇದಿಕೆಯಲ್ಲಿ ಪ್ರಸ್ತುತಪಡಿಸಬೇಕು ಮತ್ತು ಕಾರ್ಮಿಕ ಚಳುವಳಿ ಒಂದು ಮತ್ತು ಅವಿನಾಭಾವ ಎಂದು ಮಾಲಿಕರಿಗೆ ತೋರಿಸಬೇಕು ಎಂಬುದು ನಮ್ಮ ಆಸೆ. ಈ ಸಾಮಾನ್ಯ ಕಾರ್ಯದಲ್ಲಿ, ನಾವು ಹಾಕುವ ಏಕೈಕ ಷರತ್ತು ಕಾರ್ಮಿಕ ವರ್ಗಕ್ಕೆ ನಿಷ್ಠೆ ಮತ್ತು ಎಲ್ಲರೂ ಒಪ್ಪಿದ ಬೇಡಿಕೆಗಳು. ಆದ್ದರಿಂದ ನಾವು ಯು.ಸಿ.ಟಿ.ಯು. ಅನ್ನು ಹೆಚ್ಚು ದೊಡ್ಡ ಪ್ರಮಾಣದಲ್ಲಿ ಪುನರುಜ್ಜೀವನಗೊಳಿಸಲು ಬಯಸುತ್ತೇವೆ ಮತ್ತು 1974 ರ ಐತಿಹಾಸಿಕ ವೇತನ–ಸ್ತಂಭನ ವಿರೋಧಿ ಸಮಾವೇಶದಂತೆ ಎಲ್ಲರನ್ನು ಒಳಗೊಳಿಸಲು ಬಯಸುತ್ತೇವೆ."

ಏಕತೆಗಾಗಿ ಅವರು ಮಾಡಿದ ಮನವಿಯ ಮುಕ್ತಾಯದ ಭಾಗದಲ್ಲಿ ಬಿ.ಟಿ. ರಣದಿವೆ ಅವರು "ಸಾಮಾನ್ಯ ಸಲಹೆ ಮತ್ತು ಸರ್ವಾನುಮತದ ನಿರ್ಧಾರ ತೆಗೆದುಕೊಳ್ಳಲು ನಾವು ಸಡಿಲವಾದ ಮಹಾಒಕ್ಕೂಟ(ಕಾನ್‌ಫೆಡರೇಶನ್) ಅಥವಾ ಕನಿಷ್ಟ ಕಾರ್ಮಿಕ ಸಮನ್ವಯ ಸಮಿತಿಯ ರೂಪದಲ್ಲಿ ಒಟ್ಟಿಗೆ ಸೇರಬೇಕು" ಎಂದು ಕರೆ ನೀಡಿದರು.

1987 ರಲ್ಲಿ ಮುಂಬೈಯಲ್ಲಿ ನಡೆದ ಅಖಿಲ ಭಾರತ ಆರನೇ ಸಮ್ಮೇಳನದಲ್ಲಿ, ಸಿಐಟಿಯು ವಿವಿಧ ಕಾರ್ಮಿಕ ಸಂಘಗಳು ಮತ್ತು ರಾಷ್ಟ್ರೀಯ ಒಕ್ಕೂಟಗಳ ಮಹಾಒಕ್ಕೂಟವನ್ನು(ಕಾನ್‌ಫೇಡರೇಶನ್) ರಚಿಸುವ ಮನವಿಯನ್ನು ಪುನರುಚ್ಚರಿಸಿತು.

ಸಿ.ಐ.ಟಿ.ಯು 1994 ರ ಡಿಸೆಂಬರ್ 19 ರಂದು ದೆಹಲಿಯಲ್ಲಿ ಬಿ.ಟಿ.ರಣದಿವೆ.ಯವರ 90 ನೇ ಜನ್ಮದಿನದ ಸಂದರ್ಭದಲ್ಲಿ, ಟ್ರೇಡ್ ಯೂನಿಯನ್ ಐಕ್ಯತೆ ಕುರಿತು ಸೆಮಿನಾರ್ ಅನ್ನು ಆಯೋಜಿಸಿದಾಗ, ವಿವಿಧ ಕಾರ್ಮಿಕ ಸಂಘಗಳನ್ನು ಸೆಮಿನಾರ್‌ನಲ್ಲಿ ಭಾಗವಹಿಸಲು ಆಹ್ವಾನಿಸಲಾಯಿತು.

ಸೆಮಿನಾರ್‌ನಲ್ಲಿ ಚರ್ಚೆಗೆ ಸಿಐಟಿಯು ಮಂಡಿಸಿದ ಪ್ರಸ್ತಾವನಾ–ಪತ್ರ (ಅಪ್ರೋಚ್ ಪೇಪರ್) ಟ್ರೇಡ್ ಯೂನಿಯನ್ ಐಕ್ಯತೆಯ ಬಗ್ಗೆ ಸಿಐಟಿಯುನ ತಿಳುವಳಿಕೆಯನ್ನು ಸ್ಪಷ್ಟಪಡಿಸಲು ಪ್ರಯತ್ನಿಸಿತು. ವಿಲೀನಕ್ಕೆ ಪೂರ್ವಾಪೇಕ್ಷಿತವಾಗಿ ಕಾರ್ಮಿಕ ಸಂಘಗಳ ಪ್ರಜಾಸತ್ತಾತ್ಮಕ ಕಾರ್ಯಚಟುವಟಿಕೆಗೆ ಒತ್ತು ನೀಡಿತು.

"ಕಾರ್ಮಿಕ ವರ್ಗವು ರಾಜಕೀಯ ಹೋರಾಟದಲ್ಲಿ ಭಾಗವಹಿಸದಿದ್ದರೆ, ದೇಶ ಎದುರಿಸುತ್ತಿರುವ ರಾಜಕೀಯ ನೀತಿಗಳಿಗೆ ಸಂಬಂಧಿಸಿದ ಎಲ್ಲಾ ಅಂಶಗಳನ್ನು ನಿರ್ಧರಿಸುವಲ್ಲಿ ಬಂಡವಾಳಶಾಹಿ ವರ್ಗಕ್ಕೆ ಪ್ರಾಬಲ್ಯ ಇರುತ್ತದೆ. ಆದ್ದರಿಂದ ಟ್ರೇಡ್ ಯೂನಿಯನ್ ಆಂದೋಲನ ರಾಜಕೀಯೇತರ ಚಳುವಳಿಯಾಗಿರಲು ಸಾಧ್ಯವಿಲ್ಲ ಆದಾಗ್ಯೂ, ಎಲ್ಲಾ ರಾಜಕೀಯ ಶಕ್ತಿಗಳು ಒಗ್ಗೂಡಿದಾಗ, ಎಲ್ಲರಿಗೂ ಸ್ವೀಕಾರಾರ್ಹವಾದ ನೀತಿಯು ಟ್ರೇಡ್ ಯೂನಿಯನ್ ಆಂದೋಲನದ ರಾಜಕೀಯ ನೀತಿಯಾಗಿ ಪರಿಣಮಿಸುತ್ತದೆ. ಭಾರತದ ಟ್ರೇಡ್ ಯೂನಿಯನ್ ಕಾಯ್ದೆ 1926 ಕಾರ್ಮಿಕ ಸಂಘಗಳಿಗೆ ರಾಜಕೀಯ ನಿಧಿಯನ್ನು ಒದಗಿಸಿದೆ, ಅಂದರೆ ಅದು ಕಾರ್ಮಿಕ ಸಂಘಗಳ ರಾಜಕೀಯ ಚಟುವಟಿಕೆಗಳ ಅಗತ್ಯವನ್ನು ಸಹ ಸ್ವೀಕರಿಸಿದೆ. " ಎಂದು ಹೇಳಿತು.

ಪ್ರಸ್ತಾವಿತ ಮಹಾ–ಒಕ್ಕೂಟದ ಕಾರ್ಯಮಾಡುವ ವಿಧಾನವನ್ನು ವಿವರಿಸುತ್ತಾ, ಪ್ರಸ್ತಾವನಾ ಪತ್ರ "ಕಾರ್ಮಿಕ ವರ್ಗ ಎದುರಿಸುತ್ತಿರುವ ಎಲ್ಲಾ ವಿಷಯಗಳ ಬಗ್ಗೆ ಮಹಾ–ಒಕ್ಕೂಟವು ಘಟಕಗಳಲ್ಲಿ ಸಾಮಾನ್ಯ ತಿಳುವಳಿಕೆಯನ್ನು ವಿಕಸಿಸುತ್ತದೆ. ಆದ್ದರಿಂದ, ಮಹಾ–ಒಕ್ಕೂಟವು ಬಹುಮತ ಮತ್ತು ಅಲ್ಪಮತ ನಿರ್ಧಾರ ತೆಗೆದುಕೊಳ್ಳುವುದಿಲ್ಲ, ಬದಲಾಗಿ, ಸರ್ವಾನುಮತದಿಂದ. ಸಾಮಾನ್ಯವಾಗಿ ಎಲ್ಲರೂ ಒಪ್ಪುವ ಸಂಗತಿಗಳು ಮಹಾ–ಒಕ್ಕೂಟದ ನೀತಿಯಾಗಿರುತ್ತದೆ. ಒಪ್ಪಿಗೆಯಿಲ್ಲದ ವಿಷಯಗಳ ಬಗ್ಗೆ, ಸಾಮಾನ್ಯ ವಿಧಾನವನ್ನು ತಲುಪಲು ಸಮಗ್ರ ಚರ್ಚೆಗಳು ಮತ್ತು ಸಂವಾದಗಳನ್ನು ಮಾಡುವ ಪ್ರಯತ್ನಗಳನ್ನು ಮುಂದುವರಿಸಲಾಗುತ್ತದೆ." ಎಂದು ಹೇಳಿತು.

ಸೆಮಿನಾರ್ ನಲ್ಲಿ ಎ.ಐ.ಟಿ.ಯು.ಸಿ. ಮಂಡಿಸಿದ ದಸ್ತಾವೇಜು ಟ್ರೇಡ್ ಯೂನಿಯನ್ ಐಕ್ಯತೆಯ ಬಗ್ಗೆ ಅವರ ದೃಷ್ಟಿಕೋನಗಳನ್ನು ಸ್ಪಷ್ಟವಾಗಿ ವಿವರಿಸಿತು.

ಎಚ್‌ಎಂಎಸ್ ಪ್ರತಿನಿಧಿಗಳು ಕೇಂದ್ರ ಕಾರ್ಮಿಕ ಸಂಘಗಳನ್ನು ಸಂಪೂರ್ಣವಾಗಿ ವಿಲೀನಗೊಳಿಸುವಂತೆ ಮನವಿ ಮಾಡಿದರು. ಬಿಎಂಎಸ್ ಪ್ರತಿನಿಧಿಗಳು 'ಶ್ರಮಜೀವಿ' ಎಂಬ ಪದವನ್ನು ಆಕ್ಷೇಪಿಸಿದರು. ಆದಾಗ್ಯೂ, ಸೆಮಿನಾರ್ ಒಂದು ಫಲಪ್ರದವಾದ ಅಭಿಪ್ರಾಯ ವಿನಿಮಯವಾಗಿತ್ತು ಮತ್ತು ಶಾಶ್ವತ ಆಧಾರದ ಮೇಲೆ ಕಾರ್ಮಿಕ ಸಂಘಗಳ ಐಕ್ಯತೆಗಾಗಿ ನಡೆಯುತ್ತಿರುವ ಪ್ರಯತ್ನಗಳಲ್ಲಿ ಪ್ರಗತಿಯನ್ನು ಗುರುತಿಸಿತು.

### ಕಾರ್ಮಿಕ ವರ್ಗದ ಸಂರಚನೆಯಲ್ಲಿನ ಬದಲಾವಣೆಗಳು – ಸಮಸ್ಯೆಗಳು ಮತ್ತು ಸಾಧ್ಯತೆಗಳು

ಪ್ರಚಲಿತ ವೈಜ್ಞಾನಿಕ ಮತ್ತು ತಂತ್ರಜ್ಞಾನದ ಕ್ರಾಂತಿಯು ಉತ್ಪಾದಕ ಶಕ್ತಿಗಳ ಹೊಸ ಪಥವನ್ನು ತೆರೆದಿದೆ ಮತ್ತು ಕಾರ್ಮಿಕ ವರ್ಗದ ಸಾಂಪ್ರದಾಯಿಕ ಸಂರಚನೆಯಲ್ಲಿ ಬದಲಾವಣೆಗಳನ್ನು ಉಂಟುಮಾಡಿದೆ.

ಉತ್ಪಾದಕ ಶಕ್ತಿಗಳಲ್ಲಿ ಕ್ರಾಂತಿಯನ್ನುಂಟುಮಾಡುವ ಈ ವೈಜ್ಞಾನಿಕ ಮತ್ತು ತಂತ್ರಜ್ಞಾನ ಕ್ರಾಂತಿಯು ಕೆಲಸದ ಪ್ರಕ್ರಿಯೆಯನ್ನೂ ಅಗಾಧವಾಗಿ ಬದಲಾಯಿಸಿದೆ. ಈಗಾಗಲೇ ಏಕಸ್ವಾಮ್ಯ ಬಂಡವಾಳದ ಏರಿಕೆಯು ಗುಮಾಸ್ತ(ಕ್ಲೆರಿಕಲ್) ಕಾರ್ಮಿಕರ ದೊಡ್ಡ ಶ್ರೇಣಿಯನ್ನು

**ಪುಟ 14 ನೋಡಿ**

# ವ್ಯಾಕ್ಸಿನ್ ಎಂಬ ಉಸಿರು ನಿರಾಕರಿಸುತ್ತಿರುವ ಸರ್ಕಾರ!!.......

ಪುಟ 8 ರಿಂದ

100% ಜನರಿಗೆ ಲಸಿಕೆ ನೀಡಬೇಕಾದರೆ ಈಗಿರುವ ಉತ್ಪಾದನೆಯ ಹಲವು ಪಟ್ಟು ಹೆಚ್ಚಾಗಬೇಕು. ಕೊವ್ಯಾಕ್ಸಿನ್ ಇಲ್ಲದಿದ್ದರೆ ಬೇರೆ ಸಂಸ್ಥೆಗಳು ಮತ್ತಷ್ಟು ಉತ್ಪಾದನೆಯನ್ನು ಹೆಚ್ಚಿಸಬೇಕು. ಈಗಿನ ದರದ ಇಮ್ಮಡಿ ದರದಲ್ಲಿ ಲಸಿಕೆ ಉತ್ಪಾದನೆ ಮತ್ತು ವಿತರಣೆ ಮಾಡಿದರೂ ಸಹ ಇಡೀ ದೇಶದಲ್ಲಿ ಡಿಸೆಂಬರ್ 2023 ಕ್ಕೆ ಮುನ್ನ ಲಸಿಕೆ ನೀಡುವ ಕಾರ್ಯಕ್ರಮ ಮುಗಿಯುವುದಿಲ್ಲ. (ಚಿತ್ರ–1 ನೋಡಿ) ಹಾಕಿರುವ ಲಸಿಕೆಯೂ ಕೆಲಸಕ್ಕೆ ಬರುವುದಿಲ್ಲ. ಎಲ್ಲವನ್ನೂ ನುಂಗಿ ನೊಣೆದು ಬಿಸಾಡುವ ಸುಳಿಯಂತಾಗುತ್ತದೆ ಭಾರತ ಸರ್ಕಾರದ ಲಸಿಕಾ ಕಾರ್ಯಕ್ರಮ.

**ಲಸಿಕಾ ಕಾರ್ಯಕ್ರಮ ಹಳ್ಳ ಹಿಡಿದದ್ದು ಏಕೆ?**

ಈ ರೀತಿಯಲ್ಲಿ ಲಸಿಕೆ ಉತ್ಪಾದನೆ ಮತ್ತು ವಿತರಣೆಯಲ್ಲಿ ವಿಳಂಬವಾಗುವುದು ನಮ್ಮ ದೇಶದ ಜನರ ತಲೆಯ ಮೇಲೆ ಎಳೆಯುವ ಚಪ್ಪಡಿ ಕಲ್ಲು ಮಾತ್ರವೇ ಅಲ್ಲ, ನಮ್ಮಲ್ಲಿ ಉತ್ಪಾದನೆ ಆಗುವ ಲಸಿಕೆಯನ್ನೇ ಅವಲಂಭಿಸಿ ವಿಶ್ವ ಆರೋಗ್ಯ ಸಂಸ್ಥೆ (WHO) ನಡೆಸುವ ಲಸಿಕಾ ಕಾರ್ಯಕ್ರಮ ಕೊವ್ಯಾಕ್ಸ್ ಕೂಡ ದಿಕ್ಕು ತಪ್ಪುತ್ತದೆ. ವಿಶ್ವ ಆರೋಗ್ಯ ಸಂಸ್ಥೆಯ ಕೊವ್ಯಾಕ್ಸ್ ಲಸಿಕೆಯನ್ನೇ ನಂಬಿಕೊಂಡಿರುವ 92 ಬಡ ದೇಶಗಳ ತಲೆಯ ಮೇಲೂ ಚಪ್ಪಡಿ ಕಲ್ಲು ಎಳೆದಂತಾಗುತ್ತದೆ. ಈಗಾಗಲೇ ಆಫ್ರಿಕಾದ, ಲ್ಯಾಟಿನ್ ಅಮೆರಿಕದ ಅನೇಕ ದೇಶಗಳು ಲಸಿಕೆ ಸರಬರಾಜಿಲ್ಲದೆ ಲಸಿಕಾ ಕಾರ್ಯಕ್ರಮವನ್ನೇ ಆರಂಭಿಸಿಲ್ಲ.

ಲಸಿಕಾ ಕಾರ್ಯಕ್ರಮ ಈ ರೀತಿಯಲ್ಲಿ ಹಳ್ಳ ಹಿಡಿದದ್ದು ಏಕೆ? ಏಕೆಂದರೆ ಅಂತಿಮ ಗೆರೆ ಮುಟ್ಟುವ ಮೊದಲೇ ಓಟಗಾರನೊಬ್ಬ ಗೆಲುವನ್ನು ಆಚರಿಸಿ ಅವಮಾನಕ್ಕೀಡಾದಂತೆ ಕೇಂದ್ರ ಸರ್ಕಾರ ನಡೆದುಕೊಂಡಿತು. ಈಗ ಮೋದಿ ಮತ್ತವರ ಸರ್ಕಾರದ ಕತೆ ಸೀಟಿ ಊದುವ ಮೊದಲೇ ಓಟ ಮುಗಿಸಿದಂತಾಗಿದೆ.

ದಿಢೀರ್ ಎಂದು ಬೇಡಿಕೆ ಹೆಚ್ಚಾಯಿತು, ಹಾಗಾಗಿ ಪೂರೈಕೆ ಕಷ್ಟವಾಯಿತು ಎಂಬ ಸಬೂಬುಗಳನ್ನು ಹೇಳಲಾಗುತ್ತಿದೆ. ಆದರೆ ಎಲ್ಲ ವಿಜ್ಞಾನಿಗಳು, ತಜ್ಞರು, ವೈದ್ಯಕೀಯ ಸಮುದಾಯ ಬಾಯಿ ಬಡಿದುಕೊಂಡರೂ ಕಿವಿಗೆ ಹಾಕಿಕೊಳ್ಳದ ಕೇಂದ್ರ ಸರ್ಕಾರ ಸೋಂಕು ಹರಡುವುದನ್ನು ತಡೆಯಲು ಮತ್ತು ಲಸಿಕೆ ನೀಡುವುದಕ್ಕೆ ಸಜ್ಜಾಗಲು ಬೇಕಾದ ಯಾವ ಕ್ರಮಗಳನ್ನೂ ಕೈಗೊಳ್ಳಲಿಲ್ಲ. ಕೇಂದ್ರ ಸರ್ಕಾರ ವಾಸ್ತವವಾಗಿ ಡಿಸೆಂಬರ್ 2021 ಅಂತ್ಯದವರೆಗೆ ಪೂರೈಸಲು ಕೇಳಿಕೊಂಡಿದ್ದ ಲಸಿಕೆಯ ಪ್ರಮಾಣವೇ ಕೇವಲ 44 ಕೋಟಿ ಡೋಸ್‌ಗಳು. ಅದರಲ್ಲಿ ಜನವರಿಯಲ್ಲಿ 1.1 ಕೋಟಿ ಡೋಸ್‌ಗಳಿಗೆ ಆರ್ಡರ್ ಮಾಡಿದ್ದರೆ, ಮಾರ್ಚ್‌ನಲ್ಲಿ 12 ಕೋಟಿ ಡೋಸ್ ಲಸಿಕೆಗೆ ಆರ್ಡರ್ ನೀಡಲಾಗಿದೆ. ಈ ಲಸಿಕೆಯ ಪೂರೈಕೆ ಮತ್ತು ವಿತರಣೆಯಲ್ಲಿ ಯಾವುದೇ ರೀತಿಯ ಪಾರದರ್ಶಕತೆ ಇಲ್ಲದೆ, ಎಷ್ಟು ಉತ್ಪಾದನೆ ಆಗಿದೆ, ಎಷ್ಟು ಪೂರೈಕೆ ಆಗಿದೆ, ಎಷ್ಟು ವಿತರಣೆ ಆಗಿದೆ ಎಂಬ ಯಾವುದೇ ಮಾಹಿತಿ ಲಭ್ಯವಿಲ್ಲದೆ ಎಲ್ಲವೂ ಕತ್ತಲೆಯಲ್ಲಿ ಕಲಸು ಮೇಲೋಗರವಾಗಿದೆ.

ಜೂನ್ 7 ರಂದು ಎರಡನೇ ಲಸಿಕಾ ಯೋಜನೆಯನ್ನು ಪ್ರಕಟಿಸುತ್ತಾ ಪ್ರಧಾನ ಮಂತ್ರಿಗಳು, ಈ ಹಿಂದೆ ಪೋಲಿಯೋ, ದಡಾರ, ಹೆಪಟೈಟಿಸ್ ಬಿ. ಸೋಂಕುಗಳಿಗೆ ಲಸಿಕೆಗಳು ದಶಕಗಳ ನಂತರ ಬಂದವು, ನಾವು ಅಧಿಕಾರಕ್ಕೆ ಬಂದಾಗ 2014 ರಲ್ಲಿ ದೇಶದ 60% ಭಾಗಕ್ಕೆ ಮಾತ್ರ ಲಸಿಕೆ ತಲುಪಿತ್ತು. ಇದು ನಮಗೆ ದಿಗಿಲು ಹುಟ್ಟಿಸಿತ್ತು. ಇದೇ ದರದಲ್ಲಿ ಲಸಿಕೆ ನೀಡಿಕೆ ಮುಂದುವರೆದರೆ ಎಲ್ಲರಿಗೂ ಲಸಿಕೆ ನೀಡಲು 40 ವರ್ಷಗಳೇ ಬೇಕಾದೀತು ಎಂದೆಲ್ಲಾ ಹೇಳಿದರು. ಮುಂದುವರಿದು ಈಗಾಗಲೇ 23 ಕೋಟಿ ಡೋಸ್ ಲಸಿಕೆ ನೀಡಿದ್ದೇವೆ, ಇನ್ನು ಕೆಲವೇ ದಿನಗಳಲ್ಲಿ ಎಲ್ಲರಿಗೂ ಲಸಿಕೆ ನೀಡುವ ವಿಶ್ವಾಸವಿದೆ ಎಂದು ಎದೆ ತಟ್ಟಿಕೊಂಡರು.

**ಭಾರತದ ಲಸಿಕಾ ಉತ್ಪಾದನಾ ಸಾಮರ್ಥ್ಯ**

ಜನವರಿ 2 ರಂದು ಸುಪ್ರೀಂ ಕೋರ್ಟ್ ಬೀಸಿದ ಚಾಟಿಗೆ ಬೆಚ್ಚಿ ಬಿದ್ದ ಸರ್ಕಾರ ದಡಬಡನೆ ತಡವರಿಸಿ ಏನೇನೋ ಮಾತನಾಡಿದೆ. ಆದರೆ ಲಸಿಕೆ ತಯಾರಿಯೂ ಸೇರಿದಂತೆ ಸ್ವಾವಲಂಬನೆಯ ಕಣ್ಣೋಟ ಬೆಳೆದು ಬಂದದ್ದು ನಮ್ಮ ವಸಾಹತುಶಾಹಿ–ವಿರೋಧಿ ಸ್ವಾತಂತ್ರ್ಯ ಚಳವಳಿಯ ಜೊತೆ, ಜೊತೆಯಲ್ಲಿ. ಅಂದರೆ ದೇಶದ ಆರ್ಥಿಕತೆಯನ್ನು ಸಾಮ್ರಾಜ್ಯಶಾಹಿ ಹಿಡಿತದಿಂದ ಬಿಡುಗಡೆಗೊಳಿಸಲು ಕೈಗಾರಿಕೆ ಸೇರಿದಂತೆ ಇನ್ನಿತರೆ ಸಂಸ್ಥೆಗಳನ್ನು ನಮ್ಮ ಜನರ ಸಾಮರ್ಥ್ಯದಲ್ಲೇ ಬೆಳೆಸುವುದು ಎಂದು ಅರ್ಥ. ಈ ರೀತಿಯಲ್ಲಿ ಸ್ವಾವಲಂಬನೆ ಸಾಧಿಸಿದ ಭಾರತ ಅಗತ್ಯ ಔಷಧ ಉತ್ಪಾದನೆಯಲ್ಲಿ ಪಾರಮ್ಯ ಸಾಧಿಸಿ, ಈ ಕ್ಷೇತ್ರದಲ್ಲಿದ್ದ ಬಹುರಾಷ್ಟ್ರೀಯ ಔಷಧ ಕಂಪನಿಗಳ ಏಕಸ್ವಾಮ್ಯ ಮುರಿದು ಭಾರತ ಇಂದು ಜಗತ್ತಿನ ಬಡವರ ಔಷಧ ಕಣಜ ಎಂದು ಹೆಸರು ಮಾಡಿದೆ. 1970 ರ ಭಾರತೀಯ ಪೇಟೆಂಟ್ ಕಾಯಿದೆಯ ಬಲ ಪಡೆದು ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ(CSIR)ಯ ಪ್ರಯೋಗಾಲಯಗಳು ನಡೆಸಿದ ಸಂಶೋಧನೆಗಳಿಂದ ಔಷಧ ಕ್ಷೇತ್ರದಲ್ಲಿ (ವಿಶೇಷವಾಗಿ ಪ್ರಮುಖ ಅಗತ್ಯ ಔಷಧಿಗಳಲ್ಲಿ) ನಾವು ಬಹುಪಾಲು ಸ್ವಾವಲಂಬಿಗಳಾಗಿದ್ದೇವೆ. ಸಾರ್ವಜನಿಕ ಕ್ಷೇತ್ರ ಮತ್ತು ಇತರೆ ದೇಶಿ ಕಂಪನಿಗಳು ಎಡಬಿಡದೆ ದುಡಿದು ಭಾರತವನ್ನು ಜಗತ್ತಿನ ಅತಿ ದೊಡ್ಡ ಔಷಧ ಉತ್ಪಾದಕನ ಸ್ಥಾನದಲ್ಲಿ ನಿಲ್ಲಿಸಿವೆ.

ಲಸಿಕೆ ಉತ್ಪಾದನೆಯಲ್ಲಿ ಭಾರತಕ್ಕೆ ದೊಡ್ಡ ಇತಿಹಾಸವಿರುವುದರಿಂದ ಮತ್ತು ಲಸಿಕೆ ಉತ್ಪಾದನೆಗೆ ಬೇಕಾದ ಬಹುದೊಡ್ಡ ಮೂಲ ಸೌಕರ್ಯಗಳನ್ನು ಹೊಂದಿರುವುದರಿಂದ ಕೋವಿಡ್–19 ಸಾಂಕ್ರಾಮಿಕ ರೋಗಕ್ಕೆ ಮುನ್ನ ಜಗತ್ತಿಗೆ ಬೇಕಾದ ಇತರೆ ಲಸಿಕೆಗಳ 60% ನ್ನು ಭಾರತವೇ ಉತ್ಪಾದನೆ ಮಾಡಿದೆ. CDSCO (Central Drug Standard Control Organisation)ಪ್ರಕಾರ ಭಾರತದಲ್ಲಿ 21 ಲಸಿಕೆ ಉತ್ಪಾದನಾ ಸಂಸ್ಥೆಗಳಿದ್ದು, ಅವುಗಳ ಒಟ್ಟು ಉತ್ಪಾದನಾ ಸಾಮರ್ಥ್ಯ ವಾರ್ಷಿಕವಾಗಿ 800 ಕೋಟಿ ಡೋಸ್‌ಗಳಿಗೂ ಹೆಚ್ಚು. ಈ ಸಂಸ್ಥೆಗಳು ಕೊವ್ಯಾಕ್ಸಿನ್ ಮಾದರಿಯ ಲಸಿಕೆಯನ್ನು ತಯಾರು ಮಾಡುವುದರಲ್ಲಿ ಪರಿಣತಿ ಹೊಂದಿವೆ.

ಇದರ ಜೊತೆಗೆ ಕೋವಿಶೀಲ್ಡ್ ಮಾದರಿಯ ಲಸಿಕೆ ಉತ್ಪಾದನೆ ಮಾಡುವ 30 ಕ್ಕೂ ಹೆಚ್ಚು ಕಂಪನಿಗಳು ನಮ್ಮ ದೇಶದಲ್ಲಿವೆ. ಆಕ್ಸ್‌ಫರ್ಡ್– ಆಸ್ಟ್ರಜೆನಿಕಾ ಜೊತೆಯಲ್ಲಿ ಒಡಂಬಡಿಕೆ ಮಾಡಿಕೊಂಡಿರುವ ಸೀರಮ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ ಸೇರಿದಂತೆ ಅನೇಕ ಕಂಪನಿಗಳಿವೆ. ಭಾರತದ ಐದು ಕಂಪನಿಗಳು ಗಮಲೇಯಾ ಎನ್ನುವ ಸಂಸ್ಥೆಗೆ 850 ದಶಲಕ್ಷ ಸ್ಪೂಟ್ನಿಕ್ ಗಿ ಲಸಿಕೆ ತಯಾರಿಸಿ ಕೊಡಲು, ಜಾನ್ಸನ್ ಮತ್ತು ಜಾನ್ಸನ್‌ನ ಒಂದೇ ಡೋಸ್ ಮಾದರಿಯ ಲಸಿಕೆಯನ್ನು 400 ದಶಲಕ್ಷ ಡೋಸ್ ತಯಾರಿಸಿ ಕೊಡಲು ಬಯಾಲಾಜಿಕ್–ಇ ಎನ್ನುವ ಕಂಪನಿ ಒಡಂಬಡಿಕೆ ಮಾಡಿಕೊಂಡಿದೆ. ಸೀರಮ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ ಕೂಡ ನೋವಾವ್ಯಾಕ್ಸ್ ಎನ್ನುವ ಕಂಪನಿಯ ಜೊತೆ ಒಡಂಬಡಿಕೆ ಮಾಡಿಕೊಂಡು ಅಮೆರಿಕಾಗೆ 100 ಕೋಟಿ ಡೋಸ್ ಲಸಿಕೆ ತಯಾರು ಮಾಡಿಕೊಡುತ್ತಿದೆ.

ನಮ್ಮ ದೇಶದಲ್ಲಿ ಇಷ್ಟೆಲ್ಲಾ ಸಾಮರ್ಥ್ಯ, ಮೂಲಸೌಕರ್ಯಗಳು ಇದ್ದರೂ ತಿಂಗಳಿಗೆ ಕೇವಲ 60–70 ದಶಲಕ್ಷ ಡೋಸ್ ಲಸಿಕೆಗಳನ್ನು ಮಾತ್ರ ಏಕೆ ಉತ್ಪಾದನೆ ಮಾಡಲಾಗುತ್ತಿದೆ? ಏಕೆಂದರೆ ಮೋದಿ ಸರ್ಕಾರ ಕೋವಿಡ್ ಸಾಂಕ್ರಾಮಿಕ ರೋಗವನ್ನು ಗೆದ್ದೇಬಿಟ್ಟೆವು ಎಂದು ಬೀಗಿಕೊಂಡು, ನಮಗೆ ಲಸಿಕೆ ನೀಡಲು ಸಾಕಷ್ಟು ಸಮಯವಿದೆ ಅಥವಾ ಲಸಿಕೆ ನೀಡದಿದ್ದರೂ ನಡೆಯುತ್ತದೆ ಎಂಬ ಉಮೇದಿನಲ್ಲಿ ಲಸಿಕೆ ತಯಾರು ಮಾಡಲು ಬೇಕಾದ ಆದೇಶವನ್ನೇ ನೀಡದೆ ಭಾಷಣ ಹೊಡೆದು ಕೊಂಡು ತಿರುಗಾಡಿತು. ವಿಜ್ಞಾನ ಮತ್ತು ತಂತ್ರಜ್ಞಾನದ ಸಂಸದೀಯ ಸ್ಥಾಯಿ ಸಮಿತಿಯ ಮುಂದೆ ಕೇಂದ್ರ ಸರ್ಕಾರವೇ ಹೇಳಿದಂತೆ "ಕೋವಿಶೀಲ್ಡ್ ಲಸಿಕೆಗಳು ತಿಂಗಳಿಗೆ 70 ರಿಂದ 100 ದಶಲಕ್ಷ ಡೋಸ್‌ಗಳು ಮತ್ತು ಕೊವ್ಯಾಕ್ಸಿನ್ ತಿಂಗಳಿಗೆ 12.5 ದಶಲಕ್ಷ ಡೋಸ್‌ಗಳು ಲಭ್ಯವಾಗುತ್ತಿವೆ. ಇವು ನಮ್ಮ ಆಂತರಿಕ ಬಳಕೆಗೆ ಮತ್ತು ವಿದೇಶಗಳಿಗೆ ರಫ್ತು ಮಾಡಲು ಸಾಕಾಗುತ್ತವೆ" ಎಂದು ಹೇಳಿ ಕ್ರಿಮಿನಲ್ ಉದಾಸೀನ ಮಾಡಿತು. ವಾಸ್ತವವಾಗಿ ನಮಗೆ ಈಗ ಸರ್ಕಾರ ನಂಬಿಕೊಂಡಷ್ಟೂ ಪ್ರಮಾಣದ ಲಸಿಕೆಯೂ ಲಭ್ಯವಾಗುತ್ತಿಲ್ಲ. ಈಗ ಎರಡೂ ಲಸಿಕೆಗಳು ಸೇರಿ ತಿಂಗಳಿಗೆ ಕೇವಲ 60 ದಶಲಕ್ಷ ಲಸಿಕೆಗಳು ಮಾತ್ರ ಲಭ್ಯವಾಗುತ್ತಿವೆ.

**ಏನು ಮಾಡಬಹುದಾಗಿತ್ತು? ಮಾಡಬೇಕಾಗಿದೆ?**

ಇದೇ ವೇಗದಲ್ಲಿ ಲಸಿಕೆ ಉತ್ಪಾದನೆ ಮುಂದುವರೆದರೆ ಕೇಂದ್ರ ಸರ್ಕಾರ ತಾನೇ ಗುರಿ ನಿಗದಿಪಡಿಸಿಕೊಂಡಿರುವ ಜನರಿಗೆ ಲಸಿಕೆ ನೀಡಲು ಬೇಕಾಗುವ 200 ಕೋಟಿ ಡೋಸ್ ಲಸಿಕೆ ತಯಾರಿಸಲು ಎರಡು ವರ್ಷಗಳು ಬೇಕಾಗುತ್ತದೆ. ರಫ್ತು ಮಾಡಲು ಬೇಕಾಗುವ ಲಸಿಕೆಯನ್ನು ಗಮನಕ್ಕೆ ತೆಗೆದುಕೊಂಡರೆ ಇನ್ನೂ ಹೆಚ್ಚಿನ ಸಮಯ ಬೇಕಾಗಬಹುದು. ಸರ್ಕಾರದ ಇಂತಹ ಬೇಜವಾಬ್ದಾರಿ ಮತ್ತು ನಿರ್ಲಕ್ಷ್ಯ ಧೋರಣೆಯಿಂದ ಭಾರತವು ಕೋವಿಡ್ ಸೋಂಕಿನ ಮೂರು ಮತ್ತು ನಾಲ್ಕನೇ ಅಲೆಗೂ ತುತ್ತಾಗಬಹುದು ಹಾಗೂ ಜಾಗತಿಕ ಲಸಿಕೆ ಮಾರುಕಟ್ಟೆಯಿಂದ ಸಂಪೂರ್ಣವಾಗಿ ಕಣ್ಮರೆಯಾಗಬೇಕಾಗಬಹುದು.

ಇದಕ್ಕಿಂತ ಭಿನ್ನವಾಗಿ ಭಾರತ ಮಾಡಬಹುದಾಗಿದ್ದು ಏನು? ಏನೆಂದರೆ ಚೀನಾ ಮತ್ತು ಅಮೆರಿಕಾ ಮಾಡಿದಂತೆ ತನಗಿದ್ದ ಎಲ್ಲಾ ಸಾಮರ್ಥ್ಯವನ್ನು ಬಳಸಿ ಲಸಿಕೆ ಉತ್ಪಾದನೆಯನ್ನು ಹೆಚ್ಚಿಸಬೇಕಿತ್ತು. ಅಮೆರಿಕಾ ಒಂದು ರೀತಿಯಲ್ಲಿ ಕಾರ್ಯ ಪ್ರವೃತ್ತವಾದರೆ, ಚೀನಾ ಮೂರು ಲಸಿಕೆಯನ್ನು ಅಭಿವೃದ್ಧಿಪಡಿಸಿ ಉತ್ಪಾದನೆಯನ್ನು ಆರಂಭಿಸಿತು. ಸಾಂಕ್ರಾಮಿಕದ ಆರಂಭಕ್ಕೂ ಮುನ್ನ ಲಸಿಕೆ ಉತ್ಪಾದನೆಯಲ್ಲಿ ಭಾರತಕ್ಕಿಂತ ಕಡಿಮೆ ಸಾಮರ್ಥ್ಯ ಹೊಂದಿದ್ದ ಚೀನಾ ತನ್ನ ದೇಶದಲ್ಲೇ ಹಲವಾರು ಕಡೆ ಉತ್ಪಾದನೆ ಆರಂಭಿಸಿತಲ್ಲದೆ, ಜಗತ್ತಿನ ಬೇರೆ, ಬೇರೆ ಕಡೆಗಳಲ್ಲೂ ಉತ್ಪಾದನೆ ಆರಂಭಿಸಲು ಬೇಕಾದ ಒಡಂಬಡಿಕೆ ಮತ್ತು ಸಿದ್ಧತೆಗಳನ್ನು ಮಾಡಿಕೊಂಡಿತು.

ಬದಲಾಗಿ ಸಾಂಕ್ರಾಮಿಕವನ್ನು ಗೆದ್ದೇ ಬಿಟ್ಟಿರುವುದಾಗಿ ಭಾವಿಸಿದ ಭಾರತ ಸರ್ಕಾರ ಮುಂಗಡವಾಗಿ ಲಸಿಕೆ ಉತ್ಪಾದನೆಗೆ ಬೇಡಿಕೆ ಸಲ್ಲಿಸಲಿಲ್ಲ. ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಲಸಿಕಾ ಕಂಪನಿಗಳಿಗೆ ಸಾಲ, ಸಹಕಾರ ನೀಡಲಿಲ್ಲ. ಬ್ಯಾಂಕುಗಳಿಂದಲೂ ಸಾಲ ಕೊಡಿಸಲಿಲ್ಲ. ಜನತೆಯ ತೆರಿಗೆ ಹಣದಲ್ಲಿ ಭಾರತದ ವಿಜ್ಞಾನಿಗಳು ಅಭಿವೃದ್ಧಿಪಡಿಸಿದ ಕೊವ್ಯಾಕ್ಸಿನ್ ಲಸಿಕೆಯ ತಂತ್ರಜ್ಞಾನವನ್ನು ಭಾರತ್ ಬಯೋಟೆಕ್ ಎಂಬ ಖಾಸಗಿ ಕಂಪನಿಗೆ ನೀಡಿತೇ ಹೊರತು ಸಾರ್ವಜನಿಕ ವಲಯದ ಕಂಪನಿಗಳಲ್ಲಿ ತಯಾರಿಸಲು ಕ್ರಮ ಕೈಗೊಳ್ಳಲಿಲ್ಲ. ಅದೂ ಒಂದೇ ಕಂಪನಿಗೆ ತಂತ್ರಜ್ಞಾನ ನೀಡಿ ಆ ಕಂಪನಿಯ ಸೀಮಿತ ಲಸಿಕೆಗಳಿಗೆ ಕಾದು ಕುಳಿತದ್ದು ಬಿಟ್ಟರೆ ದೇಶದ ಇತರೆ ಕಂಪನಿಗಳ ಜೊತೆ ತಂತ್ರಜ್ಞಾನ ಹಂಚಿಕೊಂಡು ವ್ಯಾಪಕವಾಗಿ ಉತ್ಪಾದನೆ ಮಾಡಲು ಕ್ರಮ ವಹಿಸಲಿಲ್ಲ. ಸೋಂಕು ವ್ಯಾಪಕವಾಗಿ ಹರಡಿ, ರೋಗ ಉಲ್ಬಣಿಸಿ ಬೀದಿಯಲ್ಲೆಲ್ಲಾ ಹಾಹಾಕಾರ ಶುರುವಾದ ಮೇಲೆ ಸಣ್ಣ ಪ್ರಮಾಣದಲ್ಲಿ ಲಸಿಕೆಗೆ ಬೇಡಿಕೆ ಸಲ್ಲಿಸಿದ್ದು ಬಿಟ್ಟರೆ ಬೇರೇನೂ ಮಾಡಲಿಲ್ಲ.

ಲಸಿಕೆ ಉತ್ಪಾದನೆಯನ್ನು ಹೆಚ್ಚಿಸಲು ಸರ್ಕಾರಕ್ಕೆ ತಗಲುತ್ತಿದ್ದ ವೆಚ್ಚವಾದರೂ ಎಷ್ಟು? ಈಗಿರುವ ಮೂಲಸೌಕರ್ಯಗಳ ಜೊತೆಗೆ 3000 ಕೋಟಿ ರೂಪಾಯಿ ಹಣ ತೊಡಗಿಸಿದ್ದರೆ ಹೆಚ್ಚುವರಿಯಾಗಿ 100 ಕೋಟಿ ಡೋಸ್ ಲಸಿಕೆಯನ್ನು ಉತ್ಪಾದನೆ ಮಾಡಬಹುದಿತ್ತು. 6000 ಕೋಟಿ ರೂಪಾಯಿ ತೊಡಗಿಸಿದ್ದರೆ ಹೆಚ್ಚುವರಿಯಾಗಿ 200 ಕೋಟಿ ಡೋಸ್ ಲಸಿಕೆಯನ್ನು ಉತ್ಪಾದನೆ ಮಾಡಬಹುದಿತ್ತು. ಒಂದು ವೇಳೆ 9000 ಕೋಟಿ ರೂಪಾಯಿ ತೊಡಗಿಸಿದ್ದರೆ 300 ಕೋಟಿ ಡೋಸ್ ಲಸಿಕೆಯನ್ನು ಹೆಚ್ಚುವರಿಯಾಗಿ ಉತ್ಪಾದನೆ ಮಾಡಬಹುದಿತ್ತು. ಒಂದೇ ವರ್ಷದಲ್ಲಿ ನಮ್ಮೆಲ್ಲಾ ಜನಗಳಿಗೆ ಬೇಕಾದಷ್ಟು ಲಸಿಕೆಯನ್ನು ಬಳಸಿ ವಿದೇಶಗಳಿಗೂ ರಫ್ತು ಮಾಡಬಹುದಿತ್ತು. ಲಸಿಕೆ ಉತ್ಪಾದನೆ ಮತ್ತು ವಿತರಣೆಯಲ್ಲಿ ಜಾಗತಿಕ ಸಮ್ರಾಟನಾಗಬಹುದಿತ್ತು. ಆದರೆ ಕೇಂದ್ರ ಸರ್ಕಾರ ಮತ್ತು ಪ್ರಧಾನ ಮಂತ್ರಿಗಳು ಲಸಿಕೆ ಹೆಸರಿನಲ್ಲಿ ತೆಗೆದಿಟ್ಟುಕೊಂಡಿರುವ ಸಾರ್ವಜನಿಕರ ತೆರಿಗೆ ಹಣ 35,000 ಕೋಟಿ ರೂಪಾಯಿಗಳ ಮೂಟೆಯ ಮೇಲೆ ಕುಳಿತುಕೊಂಡು ಸೆಂಟ್ರಲ್ ವಿಸ್ತಾ ಕಾಮಗಾರಿಯನ್ನು ಕಣ್ತುಂಬಿಕೊಳ್ಳುತ್ತಿದ್ದಾರೆ.


**ನವ–ಉದಾರವಾದದಿಂದ ಬಿಡಿಕೊಳ್ಳದ ಹೊಸ ಲಸಿಕಾ ನೀತಿ**

ಈ ಎಲ್ಲಾ ಕೊರತೆಗಳ ಜೊತೆಗೆ ಕೇಂದ್ರ ಸರ್ಕಾರ ತನ್ನ ಕುತ್ಸಿತ ಲಸಿಕೆ ನೀತಿಯನ್ನು ಹಿಂದೆಗೆದುಕೊಂಡಿದೆ. ಆದರೂ ಈಗಲೂ ಖಾಸಗೀ ಕಾರ್ಪೊರೇಟ್ ಆಸ್ಪತ್ರೆಗಳಿಗೆ 25% ಲಸಿಕೆಯನ್ನು ಮೀಸಲಿಟ್ಟಿದೆ. ಇದಲ್ಲದೆ ಖಾಸಗಿ ಆಸ್ಪತ್ರೆಗಳಿಗೆ ಪೂರೈಕೆಯಾಗುವ ಲಸಿಕೆಗೆ ಭಿನ್ನವಾದ ಮತ್ತು ದುಬಾರಿ ದರವನ್ನು ನಿಗದಿ ಮಾಡಿದೆ. ಖಾಸಗಿ ಆಸ್ಪತ್ರೆಗಳು ಕೊವ್ಯಾಕ್ಸಿನ್ ಪ್ರತಿ ಡೋಸ್‌ಗೆ 1260 ರೂಪಾಯಿ, ಕೋವಿಶೀಲ್ಡ್ ಪ್ರತಿ ಡೋಸ್‌ಗೆ 600 ರೂಪಾಯಿ, ಸ್ಪೂಟ್ನಿಕ್ ಪ್ರತಿ ಡೋಸ್‌ಗೆ 995 ರೂಪಾಯಿ ದರದಲ್ಲಿ ಖರೀದಿಸಲು ಸರ್ಕಾರ ಆದೇಶ ಮಾಡಿದೆ. ಭಾರತ್ ಬಯೋಟೆಕ್‌ನ CEO ಮಾಧ್ಯಮ ಸಂದರ್ಶನದಲ್ಲಿ ಮಾತನಾಡುತ್ತಾ ಪ್ರತಿ ಡೋಸ್ ಲಸಿಕೆ ತಯಾರು ಮಾಡಲು ಅರ್ಧ ಲೀಟರ್ ನೀರಿನ ಬಾಟಲಿಗಿಂತಲೂ ಕಡಿಮೆ ಖರ್ಚಾಗುತ್ತದೆ ಎಂದು ಹೇಳಿದ್ದರು. ಸೀರಮ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾದ CEO ಆದಾರ್ ಪೂನಾವಾಲಾ ಕೇಂದ್ರ ಸರ್ಕಾರಕ್ಕೆ ಸರಬರಾಜು ಮಾಡುವ ಪ್ರತಿ ಡೋಸ್‌ನ ದರ 150 ರೂಪಾಯಿಯಲ್ಲೇ ಲಾಭ ಸಿಗುತ್ತದೆ ಎಂದು ಹೇಳಿದ್ದರು. ಹೀಗಿದ್ದಾಗ್ಯೂ ಇಷ್ಟೊಂದು ದುಬಾರಿ ಬೆಲೆ ನಿಗದಿ ಮಾಡಿರುವುದು ಏಕೆ? ಪ್ರಧಾನಿಗಳೇನಾದರೂ ಲಸಿಕೆ ಕಂಪನಿಗಳ ಕಮೀಷನ್ ಏಜೆಂಟರಾದರೆ? ಅಥವಾ ಲಾಭದಲ್ಲಿ ಪಾಲುದಾರಿಕೆಯೆ? ಎಂಬ ಪ್ರಶ್ನೆಗಳಿಗೆ ಉತ್ತರ ಕೊಡಲೇ ಬೇಕಾಗುತ್ತದೆ.

ಮಾರುಕಟ್ಟೆ ಆಧಾರಿತ ಆರ್ಥಿಕ ವ್ಯವಸ್ಥೆಯಲ್ಲಿ ಸಹಜವಾಗಿಯೇ ಎಲ್ಲಿ ಗರಿಷ್ಠ ಲಾಭ ಸಿಗುತ್ತದೆಯೋ ಅಲ್ಲಿಗೆ ವಸ್ತುಗಳು ಸರಬರಾಜು ಆಗುತ್ತವೆ. ಅದರಂತೆ ಲಸಿಕೆಯೂ ಕೂಡ, ಕಾರ್ಪೊರೇಟ್ ಆಸ್ಪತ್ರೆಗಳಿಗೆ 25% ಎಂದು ಇದ್ದಾಗಲೂ, ಹೆಚ್ಚಿನ ಪ್ರಮಾಣದಲ್ಲಿ, ಹವಾಲ ಮಾರ್ಗಗಳ ಮೂಲಕ ಸರಬರಾಜಾಗುತ್ತದೆ. ಅದನ್ನು ನಿಯಂತ್ರಿಸಲು ದಿನ ನಿತ್ಯದ ಲೆಕ್ಕ ಪಡೆಯಲು ಯಾವ ವ್ಯವಸ್ಥೆಯೂ ಇಲ್ಲದಿರುವುದರಿಂದ ಮತ್ತು ಈಗಾಗಲೇ ನೋಡುತ್ತಿರುವಂತೆ ಸರ್ಕಾರಿ ಆಸ್ಪತ್ರೆಗಳಲ್ಲಿ ಲಸಿಕೆ ಇಲ್ಲದಿದ್ದರೂ ಕಾರ್ಪೊರೇಟ್ ಆಸ್ಪತ್ರೆಗಳಲ್ಲಿ ಲಸಿಕೆ ಸಿಗುತ್ತಿರುವಂತೆ ಮುಂದೆಯೂ ಆಗಲಿದೆ. ಕಾರ್ಪೊರೇಟ್ ಆಸ್ಪತ್ರೆಗಳಲ್ಲಿ ಮಾತ್ರ ಲಸಿಕೆ ಸಿಗುವಂತಾದರೆ ಆಶ್ಚರ್ಯವೇನೂ ಇಲ್ಲ. ಮಾಡೆರ್ನಾ,ಫೈಜರ್ ಕಂಪನಿಗಳು ಉಚಿತವಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿ ಲಸಿಕೆ ನೀಡಲು ಸರಬರಾಜು ಮಾಡುವುದಿಲ್ಲ. ಖಾಸಗಿ ಆಸ್ಪತ್ರೆಗಳಿಗೆ ಮಾತ್ರ ನೀಡುತ್ತೇವೆ, ಅದೂ ಬೃಹತ್ ಕಾರ್ಪೊರೇಟ್ ಆಸ್ಪತ್ರೆಗಳಿಗೆ ಮಾತ್ರ ನೀಡುತ್ತೇವೆ ಎಂದು ಘೋಷಣೆ ಮಾಡಿರುವುದರ ಹಿಂದೆ ಇಂತಹ ಲಾಭಕೋರತನವೇ ಕೆಲಸ ಮಾಡುತ್ತಿದೆ.

ಈ ರೀತಿಯಾಗಿ ದುಬಾರಿ ದರದಲ್ಲಿ ಖಾಸಗಿ ಆಸ್ಪತ್ರೆಗಳಿಗೆ ಲಸಿಕೆಯನ್ನು ಮೀಸಲಿಟ್ಟ ಪರಿಣಾಮ ಬಹುವಿಧದಲ್ಲಿ ಆಗಲಿದೆ. ಈಗಾಗಲೇ ಖಾಸಗೀ ಆಸ್ಪತ್ರೆಗಳಿಗೆ ಮೀಸಲಿಟ್ಟ ಲಸಿಕೆಯಲ್ಲಿ 50% ಲಸಿಕೆಯನ್ನು ಕೇವಲ 9 ಕಾರ್ಪೊರೇಟ್ ಆಸ್ಪತ್ರೆಗಳು ಕಬಳಿಸಿಕೊಂಡವೆ. ಎಲ್ಲಾ ಕಾರ್ಪೊರೇಟ್ ಆಸ್ಪತ್ರೆಗಳು ಮುಂಬಯಿ, ಕೊಲ್ಕತ್ತಾ, ಬೆಂಗಳೂರಿನಂತಹ ಮಹಾನಗರಗಳಲ್ಲೇ ಇರುವುದರಿಂದ ಈ 25% ಲಸಿಕೆಯಲ್ಲಿ ಗ್ರಾಮೀಣ, ಹಿಂದುಳಿದ ರಾಜ್ಯ ಅಥವಾ ಪ್ರದೇಶಗಳ ಭಾರತೀಯರಿಗೆ ಯಾವ ಪಾಲೂ ಸಿಗುವುದಿಲ್ಲ. ಖಾಸಗೀ ಆಸ್ಪತ್ರೆಗಳಲ್ಲಿ ನೀಡುವ ಲಸಿಕೆ ದುಬಾರಿಯಾಗಿರುವುದರಿಂದ ಮಹಾನಗರಗಳಲ್ಲೇ ಇರುವ ಸ್ಲಂ ನಿವಾಸಿಗಳಿಗೆ, ದಲಿತರಿಗೆ, ಅಸಂಘಟಿತ ವಲಯದ ಕಾರ್ಮಿಕರಿಗೆ, ಮಹಿಳೆಯರಿಗೆ ಲಸಿಕೆ ನಿರಾಕರಣೆಯೇ ಆಗಿದೆ. ಆ ಮೂಲಕ ಬದುಕಿನ ನಿರಾಕರಣೆಯೂ ಆಗಿದೆ. ಸಂವಿಧಾನದ ಸಮಾನತೆಯ ಆಶಯಗಳ ಉಲ್ಲಂಘನೆಯೂ ಆಗಿದೆ. ಭಾರತ ಸರ್ಕಾರ ಲಸಿಕೆ ಎಂಬ ಉಸಿರನ್ನು ಎಲ್ಲಾ ಭಾರತೀಯರಿಗೂ ನೀಡಲು ನಿರಾಕರಿಸುತ್ತಿದೆ. ●

# ಆಸ್ತಿಯ ಹಕ್ಕುಗಳೂ ಮತ್ತು ಸಾಂಕ್ರಾಮಿಕ ಸಾವುಗಳೂ




**ಲಸಿಕೆಗಳ ಒಟ್ಟಾರೆ ಕೊರತೆಯು ಕೃತಕವಾದದ್ದು. ಈ ಕೊರತೆಯ ಪರಿಣಾಮವಾಗಿ ಒಂದು ಗುಂಪಿನ ಜನರ ಜೀವನವನ್ನು ಇನ್ನೊಂದು ಗುಂಪಿನ ಜನರ ಜೀವನದ ವಿರುದ್ಧ ನಿಲ್ಲಿಸಲಾಗುತ್ತಿದೆ. ಒಂದು ಗುಂಪಿನ ಜನರ ಖಾಸಗಿ ಆಸ್ತಿ-ಹಕ್ಕುಗಳನ್ನು ರಕ್ಷಿಸುವ ಸಲುವಾಗಿ ಲಸಿಕೆಗಳ ಉತ್ಪಾದನೆಯ ಹೆಚ್ಚಳವನ್ನು ತಡೆಹಿಡಿಯಲಾಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಇದು ಜನರು ಮತ್ತು ಜನರ ನಡುವಿನ ಪ್ರಶ್ನೆಯಲ್ಲ, ಆದರೆ ಜನರು ಮತ್ತು ಲಾಭಗಳ ವಿರುದ್ಧದ ಒಂದು ಪ್ರಶ್ನೆ. ಗಮನಾರ್ಹವಾದ ವಿಷಯವೆಂದರೆ, ಮುಂದುವರಿದ ದೇಶಗಳಲ್ಲಿನ ಜನರು ಈ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುತ್ತಿದ್ದಾರೆ.**

**ಪ್ರೊ. ಪ್ರಭಾತ್ ಪಟ್ನಾಯಕ್** ಅನು: ಕೆ.ಎಂ.ನಾಗರಾಜ್

ಇದ್ದದ್ದನ್ನು ಇದ್ದ ಹಾಗೆ ಹೇಳಲೇ ಬೇಕು. ಮಾನವಕುಲವನ್ನು ಇಂದು ನಿರ್ನಾಮಗೊಳಿಸಲು ತೊಡಗಿರುವ ಕೊರೊನಾ ವೈರಸ್ ಎಂಬ ಶತ್ರು ಏಕಾಂಗಿಯಲ್ಲ. ಈ ಶತ್ರುವಿಗೊಬ್ಬ ಬಲಶಾಲಿಯಾದ ಮಿತ್ರನೂ ಇದ್ದಾನೆ. ಈ ಮಿತ್ರ ಯಾರೆಂದರೆ, ಸಾಂಸ್ಥಿಕ ಸ್ವರೂಪದ ಬಂಡವಾಳಶಾಹಿ ಆಸ್ತಿ ಹಕ್ಕುಗಳು. ಜಗತ್ಪ್ರಸಿದ್ಧ 'ದಿ ಎಕನಾಮಿಸ್ಟ್' ಪತ್ರಿಕೆಯ ಅಂದಾಜಿನ ಪ್ರಕಾರ, ಕೊರೊನಾ ವೈರಸ್ ಸಾಂಕ್ರಾಮಿಕದಿಂದ ಪ್ರಪಂಚದಾದ್ಯಂತ ಇಲ್ಲಿಯವರೆಗೆ ಸತ್ತವರ ಸಂಖ್ಯೆಯು ಅಧಿಕೃತವಾಗಿ ಹೇಳಲಾಗುತ್ತಿರುವ ಮೂವ್ವತ್ತು ಲಕ್ಷವಲ್ಲ, ಬದಲಿಗೆ, ಸುಮಾರು ಒಂದು ಕೋಟಿಯಷ್ಟು. ವೈರಸ್ ಹಾವಳಿ ಇನ್ನೂ ಅಂತ್ಯಗೊಂಡಿಲ್ಲ. ಆದ್ದರಿಂದ. ಇದು ಅಂತಿಮ ಸಂಖ್ಯೆಯಲ್ಲ. ಹಾಗಾಗಿ, ಅದರ ಮಾರಣಾಂತಿಕ ಯಾತ್ರೆಯನ್ನು ಕೊನೆಗೊಳಿಸಬಹುದಾದ ಏಕೈಕ ಮಾರ್ಗವೆಂದರೆ ವಿಶ್ವದ ಪ್ರತಿಯೊಬ್ಬ ವ್ಯಕ್ತಿಗೂ ಲಸಿಕೆ ಹಾಕುವ ಕ್ರಮವೇ.

ಐಎಂಎಫ್ ಸೇರಿದಂತೆ ಎಲ್ಲರೂ ಈ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮವನ್ನು ಒಪ್ಪುತ್ತಾರೆ. ಆದರೆ, ಮುಂದಿನ ದಿನಗಳಲ್ಲಿ ಲಕ್ಷಾಂತರ ಮಂದಿಯನ್ನು ವೈರಸ್ ಬಲಿ ತೆಗೆದುಕೊಳ್ಳುವ ಮೊದಲೇ ಈ ಸಾರ್ವತ್ರಿಕ ಲಸಿಕೆ ಸಾಕಾರಗೊಳ್ಳಬೇಕು ಎಂದಾದರೆ, ಕೋಟಿ ಕೋಟಿ ಲಸಿಕೆಗಳನ್ನು ಉತ್ಪಾದಿಸಬೇಕಾಗುತ್ತದೆ. ವಿಶ್ವದಲ್ಲಿ ಎಲ್ಲರಿಗೂ ಲಸಿಕೆ ಹಾಕಲು ಬೇಕಾಗುವಷ್ಟು ಬೃಹತ್ ಪ್ರಮಾಣದ ಲಸಿಕೆಗಳ ಉತ್ಪಾದನೆಗೆ ಅವುಗಳನ್ನು ಉತ್ಪಾದಿಸುವ ಬಹುರಾಷ್ಟ್ರೀಯ ಔಷಧ ಕಂಪನಿಗಳೇ ಅಡ್ಡಿಯಾಗಿವೆ. ಈಗ ಬಳಕೆಯಲ್ಲಿರುವ ಲಸಿಕೆಗಳನ್ನು ಅಭಿವೃದ್ಧಿಪಡಿಸಲು ಬಹುಪಾಲು ಸಾರ್ವಜನಿಕ ಹಣದ ನೆರವನ್ನೇ ಬಳಸಿರುವ ಈ ಕೆಲವು ಬಹುರಾಷ್ಟ್ರೀಯ ಔಷಧ ಕಂಪನಿಗಳು ಈ ಲಸಿಕೆಗಳ ಮೇಲೆ ತಾವು ಹೊಂದಿರುವ ಬೌದ್ಧಿಕ ಆಸ್ತಿ ಹಕ್ಕುಗಳ ಏಕಸ್ವಾಮ್ಯದ ಕತೆ ಹೇಳುತ್ತವೆ. ಲಸಿಕೆ ಉತ್ಪಾದಿಸಲು ಕೇವಲ ತಾವಷ್ಟೇ ಮಾಡಿರದ ಹೂಡಿಕೆಯನ್ನು ಹಿಂಪಡೆಯುವ ಹೆಸರಿನಲ್ಲಿ ಮಾನವ ಕಷ್ಟಕೋಟಲೆಯನ್ನು ತಮ್ಮ ಲಾಭದಾಹಕ್ಕಾಗಿ ಬಳಸಿಕೊಳ್ಳಲು ಈ ಔಷಧ ಕಂಪನಿಗಳಿಗೆ ಎಳ್ಳಷ್ಟೂ ಅಳುಕಿಲ್ಲ.

ಲಸಿಕೆಗಳ ಮೇಲೆ ಔಷಧ ಕಂಪನಿಗಳು ಹೊಂದಿರುವ ಪೇಟೆಂಟ್ ಹಕ್ಕುಗಳ ಅಧಿಕಾರವನ್ನು ತಾತ್ಕಾಲಿಕವಾಗಿ ಬಿಟ್ಟುಕೊಡುವ ಪ್ರಸ್ತಾಪವನ್ನು ಅಮೆರಿಕ ಅಧ್ಯಕ್ಷ ಜೋ ಬಿಡೆನ್ ಅವರು ಒಪ್ಪಿರುವುದು ಒಂದು ಮಹತ್ವದ ಬೆಳವಣಿಗೆ. ಆದರೆ, ವಿಶ್ವ ವಾಣಿಜ್ಯ ಸಂಸ್ಥೆಯ ಸದಸ್ಯರಲ್ಲಿ ಈ ಬಗ್ಗೆ ಸರ್ವಾನುಮತವಿಲ್ಲದಿದ್ದರೆ, ಅದನ್ನು ಅನುಷ್ಠಾನಗೊಳಿಸುವುದು ಸಾಧ್ಯವಿಲ್ಲ. ಈಗಾಗಲೇ ಯುರೋಪಿನ ಬಂಡವಾಳಶಾಹಿ ಸರ್ಕಾರಗಳು ಹಕ್ಕುಗಳನ್ನು ಬಿಟ್ಟುಕೊಡುವ ಕ್ರಮವನ್ನು ವಿರೋಧಿಸುವಲ್ಲಿ ತಮ್ಮ ತಮ್ಮ ದೇಶಗಳ ಬಹುರಾಷ್ಟ್ರೀಯ ಔಷಧ ಕಂಪನಿಗಳ ಹಿಂದೆ ಬಲವಾಗಿ ನಿಂತಿವೆ.

ಪೇಟೆಂಟ್ ಹಕ್ಕುಗಳ ತೊಡರುಗಳು ಅಡ್ಡ ಬರದಿದ್ದರೆ ಲಭ್ಯವಿರುವ ಲಸಿಕೆಗಳ ಉತ್ಪಾದನಾ ಸೌಲಭ್ಯವನ್ನು ಪೂರ್ಣವಾಗಿ ಬಳಸಿಕೊಂಡು ವಿಶ್ವದ ಜನಸಂಖ್ಯೆಯ ಶೇಕಡಾ 60ರಷ್ಟು ಜನರಿಗೆ ಈ ವರ್ಷದ ಅಂತ್ಯದೊಳಗೆ ಲಸಿಕೆ ಹಾಕಬಹುದು ಎಂಬ ಒಂದು ಅಂದಾಜಿದೆ. ಈ ಕಾರ್ಯವು ಈಡೇರಿದಲ್ಲಿ ವೈರಸ್‌ನ ಹತ್ಯಾಕಾಂಡವನ್ನು ಪರಿಣಾಮಕಾರಿಯಾಗಿ ಕೊನೆಗೊಳಿಸಬಹುದು. ಆದರೆ, ಜರ್ಮನಿ ಮತ್ತು ಇತರ ದೇಶಗಳು ಪೇಟೆಂಟ್ ಹಕ್ಕುಗಳನ್ನು ತಾತ್ಕಾಲಿಕವಾಗಿ ಬಿಟ್ಟುಕೊಡುವ ಕ್ರಮವನ್ನೂ ಸಹ ದೃಢವಾಗಿ ವಿರೋಧಿಸುತ್ತಿರುವುದರಿಂದಾಗಿ ವಿಶ್ವ ವಾಣಿಜ್ಯ ಸಂಸ್ಥೆಯಲ್ಲಿ ನಡೆಯುತ್ತಿರುವ ಮಾತುಕತೆಗಳು ವರ್ಷಾಂತ್ಯದವರೆಗೂ ಲಂಬಿಸುತ್ತವೆ. ಇಂಗ್ಲೆಂಡ್ ಪ್ರಧಾನಿ ಬೋರಿಸ್ ಜಾನ್ಸನ್, 2022ರ ಅಂತ್ಯದ ವೇಳೆಗೆ ಇಡೀ ವಿಶ್ವಕ್ಕೆ ಲಸಿಕೆ ಹಾಕಬೇಕೆಂಬ ಪ್ರಸ್ತಾಪವನ್ನು ಜಿ-7 ಶೃಂಗಸಭೆಯ ಮುಂದೆ ಇಡಲು ಹವಣಿಸಿದ್ದರು. ಒಂದು ವೇಳೆ ಈ ಪ್ರಸ್ತಾಪವನ್ನು ಜಿ-7 ಒಪ್ಪಿದರೂ ಸಹ ಮತ್ತು ಅದನ್ನು ಸಾಧಿಸಿದರೂ ಸಹ, ಮಧ್ಯಂತರದ ಅವಧಿಯಲ್ಲೇ ಲಕ್ಷಾಂತರ ಮಂದಿ ಸಾಂಕ್ರಾಮಿಕದಿಂದ ಸಾಯುತ್ತಾರೆ. ಹಾಗಾಗಿ, ಬಹಳ ಮುಖ್ಯವಾದ ಅಂಶವೆಂದರೆ, ಬೌದ್ಧಿಕ ಆಸ್ತಿಯ ಖಾಸಗಿ ಹಕ್ಕುಗಳನ್ನು ತಾತ್ಕಾಲಿಕವಾಗಿ ಮೊಟಕುಗೊಳಿಸಿ ಜನರ ಪ್ರಾಣ ಉಳಿಸುವುದು ಈಗ ಬಹಳ ಮುಖ್ಯವಾದ ಕಾರ್ಯವಾಗುತ್ತದೆ.

ಇಲ್ಲಿಯವರೆಗೆ ಉತ್ಪಾದಿಸಿದ ಲಸಿಕೆಗಳ ಬಹು ದೊಡ್ಡ ಭಾಗವನ್ನು ಬಂಡವಾಳಶಾಹಿ ದೇಶಗಳು ಖರೀದಿಸಿ ಇಟ್ಟುಕೊಂಡಿರುವ ಕ್ರಮವನ್ನು ಅನೇಕರು "ಲಸಿಕೆ ವರ್ಣಭೇದ ನೀತಿ" ಎಂದು ವರ್ಣಿಸಿದ್ದಾರೆ. ಹಾಗಾಗಿ, ಮೂರನೇ ಜಗತ್ತಿನ ದೇಶಗಳಿಗೆ ಕೊಳ್ಳಲೂ ಲಸಿಕೆಗಳು ಲಭ್ಯವಿಲ್ಲ. ಉದಾಹರಣೆಗೆ, ಏಪ್ರಿಲ್ ಅಂತ್ಯದ ವೇಳೆಗೆ, ಅಮೆರಿಕಾದ ಜನಸಂಖ್ಯೆಯ ಶೇಕಡಾ 40ರಷ್ಟು ಮತ್ತು ಯೂರೋಪಿನ ಶೇಕಡಾ 20ರಷ್ಟು ಜನರು ಕನಿಷ್ಠ ಒಂದು ಡೋಸ್ ಲಸಿಕೆ ಪಡೆದಿದ್ದರೆ, ಆಫ್ರಿಕಾದಲ್ಲಿ ಕೇವಲ ಶೇಕಡಾ ಎರಡರಷ್ಟು ಮಾತ್ರ ಮತ್ತು ಭಾರತದಲ್ಲಿ, ಇಲ್ಲಿಯವರೆಗೆ, ಕೇವಲ ಶೇಕಡಾ ಮೂರರಷ್ಟು ಜನರು ಎರಡು ಡೋಸ್ ಲಸಿಕೆ ಪಡೆದಿದ್ದಾರೆ. ಮುಂದುವರಿದ ದೇಶಗಳು ಇಲ್ಲಿಯವರೆಗೆ ಮಾತ್ರವಲ್ಲ, ಭವಿಷ್ಯದ ನಿರೀಕ್ಷಿತ ಉಪಯೋಗಕ್ಕಾಗಿ, ಉತ್ಪಾದನೆಯ ಬಹುಪಾಲು ಲಸಿಕೆಗಳನ್ನು ಜೋಪಾನ ಮಾಡಿಕೊಂಡಿವೆ.

ಈ ಲಸಿಕೆ ವರ್ಣಭೇದ ನೀತಿಯಲ್ಲಿ ಎರಡು ಅಂಶಗಳಿವೆ. ಇವೆರಡೂ ಮೆಟ್ರೋಪಾಲಿಟನ್ ಬಂಡವಾಳಶಾಹಿಯೊಂದಿಗೆ ಸಂಬಂಧ ಹೊಂದಿವೆ. ಮೊದಲನೆಯದು, ಪೇಟೆಂಟ್ ಆಧಾರಿತ ಏಕಸ್ವಾಮ್ಯ ನಿರ್ಬಂಧಗಳಿಂದಾದ ಲಸಿಕೆಗಳ ಅಸಮರ್ಪಕ ಪ್ರಮಾಣದ ಉತ್ಪಾದನೆಯ ಬಹು ದೊಡ್ಡ ಭಾಗವನ್ನು ಮುಂದುವರಿದ ದೇಶಗಳೇ ಖರೀದಿಸಿವೆ. ಈ ವಿದ್ಯಮಾನವು ಆಸ್ತಿ ಹಕ್ಕುಗಳೊಂದಿಗೆ ತಳುಕು ಹಾಕಿಕೊಂಡಿದೆ. ಎರಡನೆಯದು, ಮುಂದುವರಿದ ಬಂಡವಾಳಶಾಹಿ ರಾಷ್ಟ್ರಗಳಿಗೆ ಹೋಲಿಸಿದರೆ ಮೂರನೇ ಜಗತ್ತಿನ ದೇಶಗಳಲ್ಲಿ ಲಸಿಕೆ ಕಾರ್ಯಕ್ರಮಗಳಿಗೆ ಹಣಕಾಸಿನ ಕೊರತೆ ಅಡ್ಡಿಯಾಗುತ್ತದೆ. ಮುಂದುವರೆದ ದೇಶಗಳು ಮತ್ತು ಮೂರನೆಯ ಜಗತ್ತಿನ ದೇಶಗಳ ನಡುವಿನ ಈ ದ್ವಂದ್ವವು ಕೆಲವು ಸಮಯದಿಂದಲೂ ಕಾಣಿಸಿಕೊಳ್ಳುತ್ತಿದೆ: ಸಾಂಕ್ರಾಮಿಕದ ಸಮಯದಲ್ಲಿ ಅನೇಕ ಮುಂದುವರಿದ ದೇಶಗಳಲ್ಲಿ ಜನರಿಗೆ ದೊರೆತ ನೆರವು/ಬೆಂಬಲವು ಬಜೆಟ್‌ನ ಶೇಕಡಾ 20ರಷ್ಟಿದ್ದರೆ, ಮೂರನೆಯ ಜಗತ್ತಿನ ದೇಶಗಳಲ್ಲಿ ಅದು ಕೇವಲ ಶೇಕಡಾ ಎರಡರ ಆಸುಪಾಸಿನಲ್ಲಿದೆ. ಲಸಿಕೆಗೆ ಒದಗಿಸಿದ ಸಬ್ಸಿಡಿಯ ವಿಷಯದಲ್ಲೂ ಇದೇ ದ್ವಂದ್ವವನ್ನು ಕಾಣಬಹುದು. ಮುಂದುವರಿದ ದೇಶಗಳಲ್ಲಿ ಜನರಿಗೆ ಲಸಿಕೆಗಳು ಉಚಿತವಾಗಿ ದೊರಕಿದರೆ, ಮೂರನೆಯ ಜಗತ್ತಿನ ದೇಶಗಳಲ್ಲಿ ಲಸಿಕೆಗಳ ಬೆಲೆಗಳು ಬಡವರಿಗೆ ಕೈಗೆಟುಕದ ಮಟ್ಟದಲ್ಲಿವೆ. ಹಾಗಾಗಿ ಅವರು ಲಸಿಕೆ ಚುಚ್ಚಿಸಿಕೊಳ್ಳುವ ಸಾಧ್ಯತೆಗಳು ಕಡಿಮೆಯೇ.

ವಿಪರ್ಯಾಸವೆಂದರೆ, ವಿಶ್ವದ ಪ್ರತಿಯೊಬ್ಬ ವ್ಯಕ್ತಿಗೂ ಲಸಿಕೆ ಹಾಕುವ ಕ್ರಮವನ್ನು ಒಪ್ಪುವ ಇದೇ ಐಎಂಎಫ್, ಮೂರನೇ ಜಗತ್ತಿನ ದೇಶಗಳಿಗೆ ಸಾಲ ಕೊಡುವಾಗ ಅಥವಾ ಅವರ ಹಳೆಯ ಸಾಲಗಳನ್ನು ನವೀಕರಿಸುವ ಸಂದರ್ಭಗಳಲ್ಲಿ ಮಿತವ್ಯಯ ಕ್ರಮಗಳನ್ನು ಪಾಲಿಸಬೇಕೆಂಬ ಒಂದು ಷರತ್ತನ್ನು ಹೇರುತ್ತದೆ. ಹಾಗಾಗಿ, ಲಸಿಕೆ ವರ್ಣಭೇದ ನೀತಿಯ ಈ ಎರಡನೇ ಅಂಶವು ಹಣಕಾಸು ಬಂಡವಾಳವು ಹೊಂದಿರುವ ಹಿಡಿತಕ್ಕೆ ಸಂಬಂಧಿಸುತ್ತದೆ. ಈ ಹಣಕಾಸು ಬಂಡವಾಳವು ತನ್ನ ಸ್ವಂತ ಹಿತಾಸಕ್ತಿಗಳನ್ನು ಹೊರತುಪಡಿಸಿ, ಸರ್ಕಾರದ ಯಾವುದೇ ಕ್ರಿಯಾಶೀಲತೆಯನ್ನು ವಿರೋಧಿಸುತ್ತದೆ. ಐಎಂಎಫ್ ಮತ್ತು ಹಣಕಾಸು ಬಂಡವಾಳಗಳ ಮನೋಭಾವದ ಬಗ್ಗೆ ಮಾತನಾಡುವ ಈ ಸಂದರ್ಭದಲ್ಲಿ ಭಾರತದ ಮಟ್ಟಿಗೆ ಹೇಳುವುದಾದರೆ, ಎಲ್ಲರಿಗೂ ಉಚಿತ ಲಸಿಕೆಗಳನ್ನು ಒದಗಿಸಲು ಸರ್ಕಾರ ಹಿಂಜರಿಯುತ್ತಿರುವುದು ಐಎಂಎಫ್ ಹೇರಿದ ಮಿತವ್ಯಯದ ಷರತ್ತಿನಿಂದಾಗಿ ಅಲ್ಲ, ಬದಲಿಗೆ, ಅದು ಮೋದಿ ಸರ್ಕಾರದ ನಿರ್ದಯ ಮತ್ತು ದಬ್ಬಾಳಿಕೆಯ ಮನೋಭಾವದಿಂದಾಗಿ ಎಂದು ಹೇಳಲಡ್ಡಿಯಿಲ್ಲ.


ಒಂದು ಅಂದಾಜಿನ ಪ್ರಕಾರ, ವಿಶ್ವದ ಪ್ರತಿಯೊಬ್ಬ ವ್ಯಕ್ತಿಗೂ ಲಸಿಕೆ ಹಾಕುವ ಕಾರ್ಯಕ್ರಮಕ್ಕೆ ಸುಮಾರು $50 ಬಿಲಿಯನ್‌ಗಿಂತ ಹೆಚ್ಚು ವೆಚ್ಚವಾಗಲಾರದು. ಅಷ್ಟು ಹಣವನ್ನು ಮುಂದುವರೆದ ಬಂಡವಾಳಶಾಹಿ ದೇಶಗಳು ಸುಲಭವಾಗಿ ಹೊಂದಿಸಬಹುದು ಮತ್ತು ಅದನ್ನು ಮರುಪಾವತಿ ಇಲ್ಲದ ಒಂದು ವರ್ಗಾವಣೆಯಾಗಿ ಮೂರನೇ ಜಗತ್ತಿನ ದೇಶಗಳಿಗೆ ನೀಡಬಹುದು. ವಿಪರ್ಯಾಸವೆಂದರೆ, "ಎಲ್ಲರೂ ಕ್ಷೇಮವಾಗಿರದ ಹೊರತು ಯಾರೂ ಕ್ಷೇಮವಲ್ಲ" ಎಂಬ ಹಳಸಲು ಸತ್ಯವನ್ನು ಜಿಗುಪ್ಸೆ ಬರುವ ಮಟ್ಟಿಗೆ ಕಿಸಬಾಯಿ ದಾಸರಂತೆ ಎಲ್ಲರೂ ಹಾಡುತ್ತಾರಾದರೂ, ಅಂತಹ ಕ್ರಮವನ್ನು ಜಾರಿಗೊಳಿಸುವ ಯಾವ ಸೂಚನೆಯೂ ಗೋಚರಿಸುತ್ತಿಲ್ಲ.

ಪೇಟೆಂಟ್ ಹಕ್ಕುಗಳ ಅಧಿಕಾರವನ್ನು ತಾತ್ಕಾಲಿಕವಾಗಿ ಬಿಟ್ಟುಕೊಡುವುದು ತಕ್ಷಣವೇ ಶಕ್ಯವಲ್ಲದಿದ್ದರೆ, ಕಡ್ಡಾಯ ಲೈಸೆನ್ಸಿಂಗ್ ಮೂಲಕವೂ ಲಸಿಕೆಗಳ ಉತ್ಪಾದನೆಯನ್ನು ಹೆಚ್ಚಿಸಬಹುದು. ಇಂತಹ ಉದ್ದೇಶಗಳಿಗಾಗಿಯೇ "ರಾಷ್ಟ್ರೀಯ ತುರ್ತುಪರಿಸ್ಥಿತಿಯ ಸಂದರ್ಭ" ಎಂಬ ಒಂದು ನಿಬಂಧನೆಯನ್ನು ವಿಶ್ವ ವ್ಯಾಪರ ಸಂಸ್ಥೆಯು ಕಲ್ಪಿಸಿದೆ. ಈ ನಿಯಮವನ್ನು ಬಳಸಿಕೊಳ್ಳಲು ಪ್ರಸ್ತುತ ಪರಿಸ್ಥಿತಿಯು ಅತ್ಯಂತ ಸೂಕ್ತವೂ ಹೌದು ಮತ್ತು ಅರ್ಹವೂ ಹೌದು. ಭಾರತದ ಪೇಟೆಂಟ್ ಕಾಯ್ದೆಯ 16ನೇ ಅಧ್ಯಾಯವನ್ನು "ಟ್ರಿಪ್ಸ್-ಸಂಗತ" ವಾಗಿರುವಂತೆ ಮಾಡಲಾಗಿರುವ ತಿದ್ದುಪಡಿಯು ಕಡ್ಡಾಯ ಲೈಸೆನ್ಸ್ ನೀಡುವ ಅವಕಾಶವನ್ನೂ ಕಲ್ಪಿಸಿದೆ.


ಕಡ್ಡಾಯ ಲೈಸೆನ್ಸಿಂಗ್ ಮತ್ತು ಪೇಟೆಂಟ್ ಹಕ್ಕುಗಳನ್ನು ತಾತ್ಕಾಲಿಕವಾಗಿ ಬಿಟ್ಟುಕೊಡುವುದು ಈ ಎರಡೂ ಕ್ರಮಗಳ ಸದ್ಯದ ಉದ್ದೇಶ ಒಂದೇ. ಒಂದು "ರಾಷ್ಟ್ರೀಯ ತುರ್ತುಪರಿಸ್ಥಿತಿಯ ಸಂದರ್ಭ"ದಲ್ಲಿ, ಲಸಿಕೆಗಳ ಉತ್ಪಾದನೆಯನ್ನು ಘನವಾಗಿ ವಿಸ್ತರಿಸಬೇಕಾದ ಅವಶ್ಯಕತೆ ಇರುವಾಗ, ಮೂಲ ಪೇಟೆಂಟ್‌ದಾರರು ತಮಗೆ ತೋಚಿದಾಗ ಲಸಿಕೆಗಳನ್ನು ಉತ್ಪಾದಿಸುವವರೆಗೂ ಜಗತ್ತು ಕಾಯಲು ಸಾಧ್ಯವಿಲ್ಲ. ಪರಿಸ್ಥಿತಿ ಹಾಗಿದ್ದರೂ ಸಹ, ಬಹುರಾಷ್ಟ್ರೀಯ ಔಷಧ ಕಂಪನಿಗಳು ಮತ್ತು ಅವುಗಳನ್ನು ಬೆಂಬಲಿಸುವ ಬಂಡವಾಳಶಾಹಿ ದೇಶಗಳ ಸರ್ಕಾರಗಳು ಮಾತ್ರವಲ್ಲದೆ, ಪೇಟೆಂಟ್-ಮನ್ನಾವನ್ನು ಬೆಂಬಲಿಸುವ ಹಲವಾರು ಸಂಸ್ಥೆಗಳು ಮತ್ತು ವ್ಯಕ್ತಿಗಳ ನಡುವೆ ಕಡ್ಡಾಯ ಲೈಸೆನ್ಸಿಂಗ್ ಬಗ್ಗೆ ಹೆಚ್ಚಿನ ವಿರೋಧವಿದೆ. ಕುತೂಹಲಕಾರಿ ಸಂಗತಿಯೆಂದರೆ, ಪೇಟೆಂಟ್ ಹಕ್ಕುಗಳನ್ನು ತಾತ್ಕಾಲಿಕವಾಗಿ ಬಿಟ್ಟುಕೊಡುವಂತೆ ಬೇರೆ ಬೇರೆ ದೇಶಗಳನ್ನು ದಕ್ಷಿಣ ಆಫ್ರಿಕಾದ ಜೊತೆಗೂಡಿ ಕೋರಿದ್ದ ಇದೇ ಭಾರತ ಸರ್ಕಾರವು ಯಾವ ಅಳುಕೂ ಇಲ್ಲದೆ ಇದೇ ಕಡ್ಡಾಯ ಲೈಸೆನ್ಸಿಂಗ್ ಕ್ರಮವನ್ನು ತಳ್ಳಿಹಾಕಿದೆ. ಅದರ "ಚಿಂತಕರ ಚಾವಡಿ" ಎಂದೇ ಕರೆಯಲಾದ ನೀತಿ ಆಯೋಗವು ಈ ವಿಚಾರವನ್ನು ಸಾರ್ವಜನಿಕವಾಗಿಯೇ ತಳ್ಳಿಹಾಕಿದೆ.

ಪರಿಸ್ಥಿತಿ ಹೀಗಿರಬೇಕು ಏಕೆ ಎಂಬುದು ರಹಸ್ಯವಾಗಿಯೇ ಉಳಿದಿದೆ. ಕಡ್ಡಾಯ ಲೈಸೆನ್ಸಿಂಗ್‌ನಂತಹ ಒಂದು ಏಕಪಕ್ಷೀಯ ಕ್ರಮವನ್ನು ಕೈಗೊಂಡಾಗ ಬಹುರಾಷ್ಟ್ರೀಯ ಔಷಧ ಕಂಪನಿಗಳಿಗೆ ಮತ್ತು ಅವುಗಳ ಹಿಂದೆ ನಿಂತಿರುವ ಮುಂದುವರೆದ ದೇಶಗಳ ಸರ್ಕಾರಗಳಿಗೆ ಕೋಪ ಬರುತ್ತದೆ ಎಂಬ ಅಳುಕು ಅಥವಾ ಭಯ ಮೋದಿ ಸರ್ಕಾರದ ಹಿಂಜರಿಕೆಗೆ ಒಂದು ವಿವರಣೆಯಾಗಬಹುದು. ಆದರೆ, ಈ ಭಯ ಅಥವಾ ಅಳುಕಿನ ಪರಿಣಾಮವಾಗಿ ಸಾವಿರಾರು ಜೀವಗಳನ್ನು ಕಳೆದುಕೊಳ್ಳಬೇಕಾಗುತ್ತದೆ. ಮೋದಿ ಸರ್ಕಾರದ ಪುಕ್ಕಲುತನವು ಎದ್ದು ಕಾಣುತ್ತದೆ

**ಪುಟ 14 ನೋಡಿ**



**ಈ ವಿಷಯವು ಒಂದು ಮೂಲಭೂತ ತತ್ವವನ್ನು ಒಳಗೊಂಡಿದೆ: ಒಬ್ಬ ಭಾರತೀಯ ಅಥವಾ ಆಫ್ರಿಕನ್ ಅಥವಾ ಲ್ಯಾಟಿನ್ ಅಮೇರಿಕನ್ ವ್ಯಕ್ತಿಯ ಜೀವಿಸುವ ಹಕ್ಕು ಯಾವ ರೀತಿಯಲ್ಲಿ ಒಬ್ಬ ಯುರೋಪಿಯನ್ ಅಥವಾ ಅಮೇರಿಕನ್ ವ್ಯಕ್ತಿಯ ಜೀವಿಸುವ ಹಕ್ಕಿಗಿಂತ ಭಿನ್ನವಾಗಿದೆ? ಅಂತರರಾಷ್ಟ್ರೀಯ ಮಟ್ಟದಲ್ಲಿ ಬಯಸುವ ಯಾವುದೇ ಸಹಕಾರವು, ಒಂದು ಬಡ ದೇಶದ ವ್ಯಕ್ತಿಯ ಜೀವನವು ಶ್ರೀಮಂತ ದೇಶದ ವ್ಯಕ್ತಿಯ ಜೀವನದಷ್ಟೇ ಅಮೂಲ್ಯವಾದದ್ದು ಎಂಬ ಮೂಲಭೂತ ಭಾವನೆಯನ್ನು ಆಧರಿಸಿರಬೇಕು.**






# ಆಸ್ತಿಯ ಹಕ್ಕುಗಳೂ ಮತ್ತು ಸಾಂಕ್ರಾಮಿಕ ಸಾವುಗಳೂ

ಪುಟ 13 ರಿಂದ

– ರಾಜಧಾನಿ ದೆಹಲಿಯಲ್ಲಿ ಲಸಿಕೆಗಳ ದಾಸ್ತಾನು ಇಂಗಿ ಹೋಗಿ ಈಗ (ಜೂನ್ 7) ಎರಡು ವಾರಗಳಾಗಿವೆ.

ಅಂತರರಾಷ್ಟ್ರೀಯ ಸಹಕಾರದ ಬಗ್ಗೆ ಮನಸ್ಸು ಕರಗುವಂತೆ ಹೇಳುವ ಧರ್ಮೋಪದೇಶದ ಮಾತುಗಳಲ್ಲಿ ಅಥವಾ ವಿಶ್ವದ ಪ್ರತಿಯೊಬ್ಬ ವ್ಯಕ್ತಿಗೂ ಲಸಿಕೆ ಹಾಕುವ ಅಗತ್ಯದ ಬಗ್ಗೆ ಹೇಳುವ ಉಪಚಾರದ ಮಾತುಗಳಲ್ಲಿ ತೂಕ ಇದ್ದರೆ, ತಕ್ಷಣವೇ, ಅಂದರೆ ಈ ಮಾತುಗಳನ್ನು ಹೇಳುವ ಸಮಯದಲ್ಲೇ, ಪೇಟೆಂಟ್ ಮನ್ನಾ ಅಥವಾ ಕಡ್ಡಾಯ ಲೈಸೆನ್ಸಿಂಗ್ ಕ್ರಮವನ್ನು ಒತ್ತಾಯಿಸಬೇಕಾಗುತ್ತದೆ. ಏಕೆಂದರೆ, ಈ ವಿಷಯವು ಒಂದು ಮೂಲಭೂತ ತತ್ವವನ್ನು ಒಳಗೊಂಡಿದೆ: ಒಬ್ಬ ಭಾರತೀಯ ಅಥವಾ ಆಫ್ರಿಕನ್ ಅಥವಾ ಲ್ಯಾಟಿನ್ ಅಮೇರಿಕನ್ ವ್ಯಕ್ತಿಯ ಜೀವಿಸುವ ಹಕ್ಕು ಯಾವ ರೀತಿಯಲ್ಲಿ ಒಬ್ಬ ಯುರೋಪಿಯನ್ ಅಥವಾ ಅಮೇರಿಕನ್ ವ್ಯಕ್ತಿಯ ಜೀವಿಸುವ ಹಕ್ಕಿಗಿಂತ ಭಿನ್ನವಾಗಿದೆ? ಅಂತರರಾಷ್ಟ್ರೀಯ ಮಟ್ಟದಲ್ಲಿ ಬಯಸುವ ಯಾವುದೇ ಸಹಕಾರವು, ಒಂದು ಬಡ ದೇಶದ ವ್ಯಕ್ತಿಯ ಜೀವನವು ಶ್ರೀಮಂತ ದೇಶದ ವ್ಯಕ್ತಿಯ ಜೀವನದಷ್ಟೇ ಅಮೂಲ್ಯವಾದದ್ದು ಎಂಬ ಮೂಲಭೂತ ಭಾವನೆಯನ್ನು ಆಧರಿಸಿರಬೇಕು. ಈ ಭಾವನೆಯನ್ನು ನಿರಾಕರಿಸಿ ಅಂತರರಾಷ್ಟ್ರೀಯ ಸಹಕಾರವನ್ನು ಕೇಳುವುದು ಅನ್ಯಾಯವನ್ನೇ ನ್ಯಾಯವೆಂದು ಸಾಧಿಸುವ ಮೋಸವಾಗುತ್ತದೆ ಅಥವಾ ಒಂದು ವಿತಂಡ ವಾದವಾಗುತ್ತದೆ.

ಯಾವುದೇ ಒಂದು ಸರ್ಕಾರವು ತನ್ನ ಯಾವುದೇ ಅಂತರರಾಷ್ಟ್ರೀಯ ಋಣ ತೀರಿಸುವ ಮೊದಲು ತನ್ನ ದೇಶದ ನಾಗರಿಕರ ಜೀವನಕ್ಕೆ ಆದ್ಯತೆ ನೀಡಬೇಕಾಗುತ್ತದೆ ಎಂಬುದು ಸರಿಯೇ. ಆದರೆ, ಈಗ ಮುಂದುವರಿದ ದೇಶಗಳ ಸರ್ಕಾರಗಳ ಮುಂದಿರುವ ಪ್ರಶ್ನೆ ನಿಜಕ್ಕೂ ತಮ್ಮ ದೇಶದ ನಾಗರಿಕರ ಜೀವನದ ಮತ್ತು ಇತರ ದೇಶಗಳ ನಾಗರಿಕರ ಜೀವನದ ವಿಷಯಕ್ಕೆ ಸಂಬಂಧಿಸಿದ್ದಲ್ಲ. ಅದು ಖಾಸಗಿ ಆಸ್ತಿ–ಹಕ್ಕುಗಳನ್ನು ರಕ್ಷಿಸುವ ಅಗತ್ಯದಿಂದ ಉದ್ಭವವಾದ ಪ್ರಶ್ನೆ. ಈ ಅಗತ್ಯದ ಹಿನ್ನೆಲೆಯಲ್ಲಿ ಲಸಿಕೆಗಳ ಒಟ್ಟಾರೆ ಕೊರತೆ ಉಂಟಾಗಿದೆ. ಈ ಕೊರತೆಯು ಕೃತಕವಾದದ್ದು. ಈ ಕೊರತೆಯ ಪರಿಣಾಮವಾಗಿ ಒಂದು ಗುಂಪಿನ ಜನರ ಜೀವನವನ್ನು ಇನ್ನೊಂದು ಗುಂಪಿನ ಜನರ ಜೀವನದ ವಿರುದ್ಧ ನಿಲ್ಲಿಸಲಾಗುತ್ತಿದೆ. ಒಂದು ಗುಂಪಿನ ಜನರ ಖಾಸಗಿ ಆಸ್ತಿ–ಹಕ್ಕುಗಳನ್ನು ರಕ್ಷಿಸುವ ಸಲುವಾಗಿ ಲಸಿಕೆಗಳ ಉತ್ಪಾದನೆಯ ಹೆಚ್ಚಳವನ್ನು ತಡೆಹಿಡಿಯಲಾಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಇದು ಜನರು ಮತ್ತು ಜನರ ನಡುವಿನ ಪ್ರಶ್ನೆಯಲ್ಲ, ಆದರೆ ಜನರು ಮತ್ತು ಲಾಭಗಳ ವಿರುದ್ಧದ ಒಂದು ಪ್ರಶ್ನೆ.

ಗಮನಾರ್ಹವಾದ ವಿಷಯುವೆಂದರೆ, ಮುಂದುವರಿದ ದೇಶಗಳಲ್ಲಿನ ಜನರು ಈ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುತ್ತಿದ್ದಾರೆ. ಅವರಲ್ಲಿ ಹೆಚ್ಚಿನವರು ವಾಸ್ತವವಾಗಿ ಲಸಿಕೆಗಳ ಮೇಲಿನ ಪೇಟೆಂಟ್ ಹಕ್ಕುಗಳನ್ನು ತಾತ್ಕಾಲಿಕವಾಗಿ ಬಿಟ್ಟುಕೊಡುವುದರ ಪರವಾಗಿದ್ದಾರೆ. ಸರ್ಕಾರಗಳು, ಅದರಲ್ಲೂ ವಿಶೇಷವಾಗಿ ಯುರೋಪಿನ ಕೆಲವು ದೇಶಗಳ ಸರ್ಕಾರಗಳು ಈ ಕ್ರಮವನ್ನು ವಿರೋಧಿಸುತ್ತಿವೆ. ಈ ಸರ್ಕಾರಗಳು ವರ್ಗ ಹಿತಾಸಕ್ತಿಗಳನ್ನು ಮತ್ತು ಅವುಗಳಿಗೆ ಸಂಬಂಧಿಸಿದ ಆಸ್ತಿ ಹಕ್ಕುಗಳನ್ನು ರಕ್ಷಿಸಲು ಹೆಚ್ಚಿನ ಕಾಳಜಿ ವಹಿಸುತ್ತಿರುವ ಸಂದರ್ಭದಲ್ಲಿ, ಈ ದೇಶಗಳ ಜನ ಸಾಮಾನ್ಯರು ಅಂತರರಾಷ್ಟ್ರೀಯ ಐಕ್ಯತೆಯ ಪರವಾಗಿ ನಿಂತಿರುವುದು ಗಮನಾರ್ಹವಾಗಿದೆ.

# ಕೊವಿಡ್–ಬಾಧಿತ ಆರ್ಥಿಕ ನಿಧಾನಗತಿಯನ್ನು ಎದುರಿಸಲು ಎಲ್‌ಡಿಎಫ್ ಸರಕಾರದ 100ದಿನಗಳ ಕ್ರಿಯಾಯೋಜನೆ

ಕೇರಳದ ಎಲ್‌ಡಿಎಫ್ ಸರಕಾರ ಕೊವಿಡ್–19ರ ಎರಡನೇ ಅಲೆ ಉಂಟು ಮಾಡಿರುವ ಆರ್ಥಿಕ ನಧಾನಗತಿಯನ್ನು ಸರಿಪಡಿಸಲು 100 ದಿನಗಳ ಕ್ರಿಯಾ ಯೋಜನೆಯೊಂದನ್ನು ಪ್ರಕಟಿಸಿದೆ.

ಈ ಯೋಜನೆ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದು, ಗುಣಮಟ್ಟದ ಉದ್ಯೋಗಾವಕಾಶ ನಿರ್ಮಿಸುವುದು ಮತ್ತು ಆರೋಗ್ಯ ಮೂಲರಚನೆಯನ್ನು ಗಟ್ಟಿಗೊಳಿಸುವುದರ ಮೇಲೆ ಗಮನ ಕೇಂದ್ರೀಕರಿಸುತ್ತದೆ ಮತ್ತು ಜೂನ್ 11ರಿಂದ ಸಪ್ಟಂಬರ್ 19ರ ಅವಧಿಯಲ್ಲಿ ಅನುಷ್ಠಾನಕ್ಕೆ ಬರುತ್ತದೆ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಜೂನ್ 11ರಂದು ಪತ್ರಿಕಾಗೋಷ್ಠಿಯೊಂದರಲ್ಲಿ ಹೇಳಿದ್ದಾರೆ.

ಕಳೆದ ವರ್ಷ ಕೊವಿಡ್–19ರ ಪರಿಣಾಮಗಳನ್ನು ಎದುರಿಸಲು 100 ದಿನಗಳ ಕಾರ್ಯಕ್ರಮವನ್ನು ಎರಡು ಹಂತಗಳಲ್ಲಿ ಅನುಷ್ಠಾನಗೊಳಿಸಲಾಯಿತು.

ಈಗ ಎರಡನೇ ಅಲೆ ಅಪ್ಪಳಿಸಿರುವಾಗ ಆರ್ಥಿಕ ಬೆಳವಣಿಗೆಯನ್ನು ತ್ವರಿತಗೊಳಿಸಲು ನಿರ್ಮಾಣ ಚಟುವಟಿಕೆಗಳು ಮತ್ತು ಉದ್ಯೋಗ ನಿರ್ಮಾಣದ ಅಗತ್ಯವಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ ಅಭಿವೃದ್ಧಿ ಪಡಿಸುವುದರ ಮೇಲೆ ಗಮನ ಕೇಂದ್ರೀಕರಿಸುವುದರೊಂದಿಗೆ ಒಂದು ಜ್ಞಾನ–ಆಧಾರಿತ ಅರ್ಥವ್ಯವಸ್ಥೆಯನ್ನು ಕಟ್ಟಲು ಅನುವು ಮಾಡಿಕೊಡುವುದು ಈ ಯೋಜನೆಯ ಗುರಿ ಎಂದು ಅವರು ಹೇಳಿದರು.

ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ಭದ್ರತೆಯ ಸಾಧನೆಗಳನ್ನು ಮುಂದಕ್ಕೊಯ್ಯುವ ಧೋರಣೆಗಳು ಮತ್ತು ಸ್ಕೀಮುಗಳ ಮೇಲೆ ಒತ್ತು ನೀಡಲಾಗುವುದು; ಇವುಗಳಲ್ಲಿ ಬಡತನ ನಿರ್ಮೂಲನೆ, ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಗಳ ನಿರ್ಮೂಲನೆ, ಪರಿಸರ –ಸ್ನೇಹಿ ಅಭಿವೃದ್ಧಿ ಕಣ್ಣೋಟಕ್ಕೆ ಅತ್ಯಂತ ಹೆಚ್ಚು ಮಹತ್ವ ನೀಡಲಾಗುವುದು. ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದರೊಂದಿಗೆ, ವಿಷಾಕ್ತವಲ್ಲದ ಆಹಾರ ಉತ್ಪಾದನೆಗೆ ಆದ್ಯತೆ ನೀಡಲಾಗುವುದು ಎಂದು ಮುಖ್ಯಮಂತ್ರಿಗಳು ಹೇಳಿದರು.

ಈ 100 ದಿನಗಳ ಯೋಜನೆಯಲ್ಲಿ ಸಾರ್ವಜನಿಕ ಕಾಮಗಾರಿ ಇಲಾಖೆ(ಪಿಡಬ್ಲ್ಯುಡಿ), ಕೇರಳ ಪುನರ್‌ನಿರ್ಮಾಣ ಮುತುವರ್ಜಿ(ಆರ್‌ಕೆಐ) ಮತ್ತು ಕೇರಳ ಕೈಗಾರಿಕಾ ಹೂಡಿಕೆ ನಿಧಿ ಮಂಡಳಿ(ಕೆಐಐಎಫ್‌ಬಿ) ಮೂಲಕ ರೂ.2464.92 ಕೋಟಿ ಮೌಲ್ಯದ ಪ್ರಾಜೆಕ್ಟ್‌ಗಳಿರುತ್ತವೆ. ರಾಜ್ಯದಲ್ಲಿ 20 ಲಕ್ಷ ವಿದ್ಯಾವಂತರಿಗೆ ಉದ್ಯೋಗ ಒದಗಿಸುವ 'ಕೇರಳ–ಅಭಿವೃದ್ಧಿ ಮತ್ತು ನಾವೀನ್ಯ ರಣನೀತಿ ಪರಿಷತ್'(ಕೆ–ಡಿಐಎಸ್‌ಸಿ) ಒಂದು ಮಹತ್ವಾಕಾಂಕ್ಷೆಯ ಪರಿಯೋಜನೆಯನ್ನು ಪೂರ್ಣಗೊಳಿಸುತ್ತದೆ; ಎಲ್ಲ ಸ್ಥಳೀಯ ಸ್ವಯುವಾಡಳಿತ ಸಂಸ್ಥೆಗಳು 1000

ಪುಟ 10 ನೋಡಿ

# ಹೊಸ ಪರಿಸ್ಥಿತಿ-ಸಮಸ್ಯೆಗಳು ಮತ್ತು ನಿರೀಕ್ಷೆಗಳು



ಪುಟ 11 ರಿಂದ

ಸೃಷ್ಟಿಸಿತ್ತು. ಈಗ ಇತರ ಶಾಖೆಗಳ ನಡುವೆ, ವೈಜ್ಞಾನಿಕ ಮತ್ತು ತಂತ್ರಜ್ಞಾನ ಕ್ರಾಂತಿಯು (ಎಸ್.ಟಿ.ಆರ್.) ಅಪಾರ ದೊಡ್ಡ ಸೇವಾ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚು ನುರಿತ ಕಾರ್ಮಿಕರು, ತಂತ್ರಜ್ಞರು, ಕಂಪ್ಯೂಟರ್ ಆಪರೇಟರ್‌ಗಳು ಮತ್ತು ವಿಶೇಷ ಜ್ಞಾನವನ್ನು ಹೊಂದಿರುವ ಇತರ ಕಾರ್ಮಿಕರನ್ನು ತೊಡಗಿಸಿಕೊಂಡಿದೆ.

ಸೇವಾ ವಲಯದ ಕಾರ್ಮಿಕರ ಸಂಖ್ಯೆಯು ವೇಗವಾಗಿ ಬೆಳೆಯುತ್ತಿರುವ ಜೊತೆಗೆ ಸೇವಾ ಕ್ಷೇತ್ರದ ಈ ಅದ್ಭುತ ಬೆಳವಣಿಗೆಗೆ ಪ್ರತಿ ದೇಶವು ಈಗ ಸಾಕ್ಷಿಯಾಗಿದೆ. ಇದು ಭಾರತಕ್ಕೂ ಅನ್ವಯಿಸುತ್ತದೆ. ದೊಡ್ಡ ರಾಷ್ಟ್ರೀಯ ಫೆಡರೇಶನ್‌ಗಳ ಅಡಿಯಲ್ಲಿ ಕಾರ್ಮಿಕ ಸಂಘಗಳಾಗಿ ಸಂಘಟನೆಗೊಂಡ ಸೇವಾ ವಲಯದ ನೌಕರರು ಅಥವಾ ಕಾರ್ಮಿಕರು ದೇಶದ ಟ್ರೇಡ್ ಯೂನಿಯನ್ ಆಂದೋಲನದಲ್ಲಿ ಬಹಳ ಮುಖ್ಯವಾದ ಸ್ಥಾನವನ್ನು ಪಡೆದುಕೊಂಡಿದ್ದಾರೆ.

ನಿಸ್ಸಂಶಯವಾಗಿ, ಇತ್ತೀಚಿನ ಬಂಡವಾಳ ಶಾಹಿಯಲ್ಲಿ, ಸಂಶೋಧನೆ ಮತ್ತು ಅಭಿವೃದ್ಧಿಯ ಭಾರಿ ನೆಗೆತದ ಬೆಳವಣಿಗೆಯು ಹೆಚ್ಚು ನುರಿತ ಬೌದ್ಧಿಕ ಕಾರ್ಮಿಕ ಶಕ್ತಿಯ ಬೇಡಿಕೆಯಲ್ಲಿ ಹೆಚ್ಚಿನ ಏರಿಕೆಗೆ ಕಾರಣವಾಗಿದೆ. ಆಡಳಿತಾತ್ಮಕ ಹಣಕಾಸು ಕ್ಷೇತ್ರಗಳು, ದೂರಸಂಪರ್ಕ, ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳು ಮತ್ತು ಇತರ ಪೂರಕ ಸೇವಾ ಕ್ಷೇತ್ರಗಳ ವ್ಯಾಪಕ ವಿಸ್ತರಣೆಯಿಂದಾಗಿ–ಕ್ಲೆರಿಕಲ್ ಮತ್ತು ನುರಿತ ಬೌದ್ಧಿಕ ಕಾರ್ಮಿಕರು ಕಾರ್ಮಿಕ ವರ್ಗದ ಸಂರಚನೆಯನ್ನು ಅಪಾರವಾಗಿ ಬದಲಿಸುವ ಅದ್ಭುತ ಬೆಳವಣಿಗೆಯನ್ನು ದಾಖಲಿಸುತ್ತಿದ್ದಾರೆ.

ಆದರೆ ಕ್ರಾಂತಿಕಾರಿ ಟ್ರೇಡ್ ಯೂನಿಯನ್ ದೃಷ್ಟಿಕೋನದಿಂದ, ಕ್ಲೆರಿಕಲ್ ಮತ್ತು ನುರಿತ ಬೌದ್ಧಿಕ ಕಾರ್ಮಿಕರ ವೇಗವಾಗಿ ಹೆಚ್ಚುತ್ತಿರುವ ಈ ಹಂತದ ಪಾತ್ರವೇನು?

ಸೇವಾ ಕಾರ್ಮಿಕರ ವಿಷಯದಲ್ಲಿ, 'ಒಂದು ಸೇವೆಯು ಬಳಕೆಯ ಉಪಯುಕ್ತ ಮೌಲ್ಯದ ಪರಿಣಾಮಕ್ಕಿಂತ ಹೆಚ್ಚೇನೂ ಅಲ್ಲ, ಅದು ಸರಕು ಆಗಿರಲಿ, ಅಥವಾ ಅದು ಶ್ರಮವಾಗಿರಲಿ' ಎಂದು ಮಾರ್ಕ್ಸ್ ಗಮನ ಸೆಳೆದಿದ್ದಾರೆ. ಉತ್ಪಾದನೆಯ ಬಂಡವಾಳಶಾಹಿ ಸಂಬಂಧದಲ್ಲಿ ಸೇವೆಯೂ ಸಹ ಹೆಚ್ಚುವರಿ ಮೌಲ್ಯವನ್ನು ಉತ್ಪಾದಿಸುವ ಉತ್ಪಾದಕ ಶ್ರಮ ವಾಗಿದೆ

ಏಕಸ್ವಾಮ್ಯದ ಬಂಡವಾಳಶಾಹಿಯ ಪ್ರಸ್ತುತ ಹಂತದಲ್ಲಿ ಮತ್ತು ಉನ್ನತ ತಂತ್ರಜ್ಞಾನವನ್ನು ಬಳಸಿಕೊಂಡು ದೇಶೀಯ ಸಂಸ್ಥೆಗಳ ಅಗಾಧ ಹಾದಿಯಲ್ಲಿ, 'ಸೇವೆ' ಸಹ ಬಂಡವಾಳಶಾಹಿಗಳಿಗೆ ಹೆಚ್ಚುವರಿ ಮೌಲ್ಯವನ್ನು ಉತ್ಪಾದಿಸುವ ಪಾತ್ರವನ್ನು ಸ್ಪಷ್ಟವಾಗಿ ವಹಿಸುತ್ತದೆ ಮತ್ತು ಆದ್ದರಿಂದ ಇದು ಉತ್ಪಾದಕ ಕಾರ್ಮಿಕರ ಅವಿಭಾಜ್ಯ ಅಂಗವಾಗುತ್ತದೆ.

ಈಗ ಹೆಚ್ಚು ಉನ್ನತ ಆಧುನೀಕೃತ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಹೆಚ್ಚು ನುರಿತ ತಾಂತ್ರಿಕ ಕಾರ್ಮಿಕರಿಗೆ ಅವರ ಕೌಶಲ್ಯ ಮತ್ತು ತಾಂತ್ರಿಕ ಶಿಕ್ಷಣದ ಹಿನ್ನೆಲೆಯನ್ನು ಪರಿಗಣಿಸಿ, ಅವರಿಗೆ ಹೆಚ್ಚಿನ ಸಂಬಳ ನೀಡಲಾಗುತ್ತದೆ. ಆದರೆ ಆಗಲೂ, ಬಂಡವಾಳಶಾಹಿ ಉತ್ಪಾದನಾ ಸಂಬಂಧದಲ್ಲಿ ಅವರೂ ಸಹ ಹೆಚ್ಚುವರಿ ಮೌಲ್ಯವನ್ನು ಉತ್ಪಾದಿಸುತ್ತಾರೆ ಮತ್ತು ಅದಕ್ಕೆ ತಕ್ಕಂತೆ ಅವರೂ ಸಹ ಉತ್ಪಾದಕ ಕಾರ್ಮಿಕರ ಒಂದು ಭಾಗವಾಗಿದ್ದಾರೆ.

ಈ ವಿಭಾಗದ ಕಾರ್ಮಿಕರು ಇಂದು ಸಾಮಾನ್ಯ ಟ್ರೇಡ್ ಯೂನಿಯನ್ ಆಂದೋಲನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ ಮತ್ತು ಬಿಕ್ಕಟ್ಟು ತೀಕ್ಷ್ಣಗೊಳ್ಳುತ್ತಿದ್ದಂತೆ, ಅವರು ಹೆಚ್ಚು ಹೆಚ್ಚು ಕೈಗಾರಿಕಾ ಶ್ರಮಜೀವಿಗಳತ್ತ ದೂಡಲ್ಪಡುತ್ತಾರೆ. ಹಿಂದಿನ ಪರಂಪರೆ ಮತ್ತು ಸಂಪ್ರದಾಯದಿಂದಾಗಿ ಹಿಂಜರಿಕೆಗಳು ಮತ್ತು ನಿರ್ವಾತಗಳು ಇವೆ, ನುಣುಚಿಕೊಳ್ಳುವ ಸಾಧ್ಯತೆಯನ್ನು ಸಹ ತಳ್ಳಿಹಾಕಲಾಗುವುದಿಲ್ಲ, ಆದರೆ ಬಿಕ್ಕಟ್ಟಿನ ಹೊರೆ ಆ ಪ್ರತಿಬಂಧಗಳನ್ನು ವೇಗವಾಗಿ ಛಿದ್ರಗೊಳಿಸುತ್ತಿದೆ ಮತ್ತು ಅವರನ್ನು ಕೈಗಾರಿಕಾ ಶ್ರಮಜೀವಿಗಳ ಹೋರಾಟದೊಂದಿಗೆ ಸಂಯೋಜಿಸುತ್ತಿದೆ. ಭಾರತದಲ್ಲಿನ ನೇರ ಅನುಭವವು ಈ ಬೆಳೆಯುತ್ತಿರುವ ವಿದ್ಯಮಾನವನ್ನು ಖಚಿತಪಡಿಸುತ್ತದೆ.

ಭಾರತದ ಅಸಂಘಟಿತ ವಲಯದಲ್ಲಿ ಹೆಚ್ಚಿನ ಸಂಖ್ಯೆಯ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ, ಕೆಲಸದ ಪರಿಸ್ಥಿತಿಗಳು, ವೇತನದ ವಿಷಯದಲ್ಲಿ, ಮನವೊಪ್ಪದ ದುಡಿತ ಮತ್ತು ಏಕತಾನತೆ ಮತ್ತು ಪರಿಸರ ಪರಿಸ್ಥಿತಿ, ಎರಡೂ ತುಂಬಾ ಕೆಟ್ಟದಾಗಿವೆ.

ಈ ವೈರುಧ್ಯಾತ್ಮಕ ಪರಿಸ್ಥಿತಿ ಮತ್ತು ಅಸಮಾನ ಸನ್ನಿವೇಶಗಳು ಭಾರತದ ಕಾರ್ಮಿಕ ವರ್ಗದ ಸಂರಚನೆಯಲ್ಲಿನ ಪ್ರಮುಖ ಅಂಶಗಳಾಗಿವೆ.

ಭಾರತದ ಕಾರ್ಮಿಕ ವರ್ಗದ ಸಂರಚನೆಯು ಕೆಲವು ಅಂಶಗಳಿಂದ ಮತ್ತಷ್ಟು ಬಾಧೆಗೊಳಗಾಗಿದೆ, ಇದು ವಿಜ್ಞಾನ ಮತ್ತು ತಂತ್ರಜ್ಞಾನ ಕ್ರಾಂತಿಯ ಅಥವಾ ಏಕಸ್ವಾಮ್ಯದ ಬಂಡವಾಳಶಾಹಿಯ ಅವಧಿಯದಲ್ಲ, ಬದಲಾಗಿ ಬಂಡವಾಳಶಾಹಿ–ಪೂರ್ವಸಂಬಂಧಗಳಿಂದ. ಇವು ಕಾರ್ಮಿಕರ ಜಾತಿ, ಬುಡಕಟ್ಟು ಅಥವಾ ಜನಾಂಗೀಯ ಮೂಲ ಮತ್ತು ಕಾರ್ಮಿಕರ ನಡುವಿನ ಗಂಡು ಮತ್ತು ಹೆಣ್ಣು ಲಿಂಗ ಆಧಾರಿತ ವಿಭಜನೆ ಮತ್ತು ಸಂಬಂಧಿತ ಪಿತೃಪ್ರದಾನವ್ಯವಸ್ಥೆಯ ಪರಿಣಾಮದಿಂದಾಗಿದೆ. ಇದು ಕಾರ್ಮಿಕ ವರ್ಗದಲ್ಲಿ ಜಾತಿ, ಜನಾಂಗೀಯತೆ ಮತ್ತು ಲಿಂಗಕ್ಕೆ ಸಂಬಂಧಿಸಿದ ವಿಭಿನ್ನ ರೀತಿಯ ಅಸಮಾನತೆಗಳಿಗೆ ಕಾರಣವಾಗುತ್ತದೆ.

ವೇತನದಲ್ಲಿನ ಅಸಮಾನತೆ ಮತ್ತು ಜಾತಿ ಮತ್ತು ಜನಾಂಗೀಯತೆಗೆ ಸಂಬಂಧಿಸಿದ, ಲಿಂಗ ತಾರತಮ್ಯವು ಭಾರತದ ಕಾರ್ಮಿಕ ವರ್ಗದ ಸಂರಚನೆಯಲ್ಲಿ ಪ್ರಮುಖ ಅಂಶವಾಗಿದೆ. ಮಹಿಳಾ ಕಾರ್ಮಿಕರು ಪ್ರಧಾನವಾಗಿ ಕಾರ್ಮಿಕ ವರ್ಗದ ಕಡಿಮೆ ಸಂಬಳದ ವಿಭಾಗದಲ್ಲಿ, ಗುತ್ತಿಗೆ ಅಥವಾ ಪ್ರಾಸಂಗಿಕ ಕಾರ್ಮಿಕರಾಗಿ, ಸಣ್ಣ ಕಾರ್ಖಾನೆಗಳಲ್ಲಿ ಅಥವಾ ಬೀಡಿ ತಯಾರಿಕೆಯಲ್ಲಿ ಮನೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ದೊಡ್ಡ ಪ್ರಮಾಣದ ಉದ್ಯಮದಲ್ಲಿ ತಾಂತ್ರಿಕ, ನುರಿತ ಕಾರ್ಮಿಕರಾಗಿ ಮಹಿಳೆಯರು ಬಹುತೇಕ ಇರುವುದಿಲ್ಲ.

ಭಾರತದ ಕಾರ್ಮಿಕ ವರ್ಗದ ಸಂಯೋಜನೆಯ ಈ ವೈರುಧ್ಯಮಯ ಪರಿಸ್ಥಿತಿಯನ್ನು ಸರಿಯಾಗಿ ಗಣನೆಗೆ ತೆಗೆದುಕೊಳ್ಳದೆ ಮತ್ತು ಈ ಅಸಮಾನತೆಗಳ ವಿರುದ್ಧ ಹೋರಾಡಲು ಸರಿಯಾದ ತಂತ್ರಗಳನ್ನು ಅಳವಡಿಸದೆ ಕ್ರಾಂತಿಕಾರಿ ಟ್ರೇಡ್ ಯೂನಿಯನ್ ಚಳುವಳಿ ಮುನ್ನಡೆಯಲು ಸಾಧ್ಯವಿಲ್ಲ.

**ಹೆಚ್ಚುತ್ತಿರುವ ನಿರುದ್ಯೋಗ –ಒಂದು 'ಸಾಮಾಜಿಕ ಸಿಡಿಮದ್ದು'**

ವಿಜ್ಞಾನ ಮತ್ತು ತಂತ್ರಜ್ಞಾನ ಕ್ರಾಂತಿಯ ಮತ್ತು ಉಪಭೋಗದ ಅಭೂತಪೂರ್ವ ಕುಸಿತದ ಅತ್ಯಂತ ಗಂಭೀರ ಪರಿಣಾಮವು ಬಂಡವಾಳಶಾಹಿ ದೇಶಗಳ ಉದ್ಯೋಗದ ಸ್ಥಿತಿಯಲ್ಲಿ ಎದ್ದು ಕಾಣುತ್ತಿದೆ. ಭೀಕರ ನಿರುದ್ಯೋಗವು ಭಾರತ ಸೇರಿದಂತೆ ಎಲ್ಲಾ ಮೂರನೇ ವಿಶ್ವದ ರಾಷ್ಟ್ರಗಳಲ್ಲಿ ಒಂದು ಸಾಮಾನ್ಯ ಸಂಗತಿಯಾಗಿದೆ. ಆದರೆ ಕಳೆದ ಎರಡು ದಶಕಗಳಿಂದ, ನಿರ್ದಿಷ್ಟವಾಗಿ, ಮುಂದುವರಿದ ಬಂಡವಾಳಶಾಹಿ ರಾಷ್ಟ್ರಗಳು ಸಹ ಹೆಚ್ಚುತ್ತಿರುವ ನಿರುದ್ಯೋಗದ ಪ್ರಭಾವದಿಂದ ನಡುಗಲು ಪ್ರಾರಂಭಿಸಿವೆ.

ಕೈಗಾರಿಕೀಕರಣಗೊಂಡ ದೇಶಗಳ ಆರ್ಥಿಕತೆಯಲ್ಲಿ ತೀವ್ರ ಕುಸಿತದ ಈ ಪರಿಸ್ಥಿತಿಯಲ್ಲಿ, ಈ ದೇಶಗಳಲ್ಲಿನ ಉದ್ಯೋಗ ಸಂರಕ್ಷಣಾ ಕಾನೂನುಗಳನ್ನು ಹಿಮ್ಮುಖ ದಿಕ್ಕಿನಲ್ಲಿ ತೀವ್ರವಾಗಿ ಬದಲಾಯಿಸಲಾಗುತ್ತಿದೆ.

ನಿಸ್ಸಂಶಯವಾಗಿ, ಭಾರತದಲ್ಲಿ ನಿರುದ್ಯೋಗ ಪರಿಸ್ಥಿತಿ ಹೆಚ್ಚು ಭೀಕರವಾಗಿದೆ. ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಲಾದ ಒಟ್ಟು ನಿರುದ್ಯೋಗಿಗಳ ಸಂಖ್ಯೆ 1993 ರಲ್ಲಿ 336 ಮಿಲಿಯನ್ ಆಗಿದ್ದರೆ, ಯೋಜನಾ ಆಯೋಗದ ಪ್ರಕಾರ ಅದೇ ವರ್ಷದಲ್ಲಿ ಉದ್ಯೋಗಿಗಳ ಸಂಖ್ಯೆ ಕೇವಲ 307.6 ಮಿಲಿಯನ್ ಆಗಿತ್ತು. ಅಂದರೆ ನೋಂದಾಯಿತ ನಿರುದ್ಯೋಗಿಗಳ ಸಂಖ್ಯೆಯೇ ಉದ್ಯೋಗಿಗಳ ಸಂಖ್ಯೆಗಿಂತ ಹೆಚ್ಚು.

ನಿರುದ್ಯೋಗದ ಈ ಆತಂಕಕಾರಿ ಪರಿಸ್ಥಿತಿಯು, ಬಂಡವಾಳಶಾಹಿಗಳ ತೀಕ್ಷ್ಣವಾದ ಆಕ್ರಮಣದ ಪರಿಣಾಮವಾಗಿದೆ ಎನ್ನುವುದನ್ನು. ಲಾಕ್–ಔಟ್‌ಗಳ ಸಂಖ್ಯೆ ಮುಷ್ಕರಗಳ ಸಂಖ್ಯೆಯನ್ನು ಮೀರಿದನ್ನು ಗಮನಿಸಿದಾಗ ಸ್ಪಷ್ಟವಾಗುತ್ತದೆ.

ಆದ್ದರಿಂದ ಕೈಗಾರಿಕಾ ಲಾಕ್–ಔಟ್‌ಗಳು ಮತ್ತು ಮುಚ್ಚುವಿಕೆಗಳು ಕಾರ್ಮಿಕ ಸಂಘಗಳ ಬಲವನ್ನು ಕಡಿಮೆ ಮಾಡುತ್ತವೆ, ಇದರಿಂದಾಗಿ ನಿಜವಾದ ವೇತನ ಮತ್ತು ಕೆಲಸದ ಪರಿಸ್ಥಿತಿ ಹದಗೆಡುತ್ತದೆ. ತಯಾರಿಕಾ ವಲಯದಲ್ಲಿ, ವೇತನ, ಸಂಬಳ ಮತ್ತು ಬೋನಸ್‌ನ ಪಾಲು, 1970ರ ದಶಕದಲ್ಲಿ ಒಟ್ಟು ವೆಚ್ಚದ ಶೇಕಡಾ 14.8 ಇದ್ದುದು 1980 ರ ದಶಕದಲ್ಲಿ 11.5 ಕ್ಕೆ ಇಳಿದಿದೆ.

# ಸಮುದಾಯ, ರಂಗಭೂಮಿಗಳೊಂದಿಗೆ ದಲಿತಕವಿ ಸಿದ್ಧಲಿಂಗಯ್ಯ ನಂಟು

ಪುಟ 9 ರಿಂದ

ಹೊಸ ನಿರ್ದೇಶಕರ ನಿರ್ದೇಶನದಲ್ಲಿ ಪ್ರಯೋಗ ಮಾಡಿದ್ದಾರೆ. 77–79 ರ ಅಸುಪಾಸಿನಲ್ಲಿ ಬಿಹಾರದ ರಾಜ್ಯದ ಬೆಲ್ಚಿ ಎಂಬ ಗ್ರಾಮದಲ್ಲಿ ಸವರ್ಣೀಯರಿಂದ ಸಜೀವ ದಹನಗೊಂಡ ದಲಿತರ ದಾರುಣ ಕಥೆಯ ವಿಷಯಾಧಾರಿತ ನಾಟಕ ಇದು. ಜೀತ ಪದ್ದತಿಯಲ್ಲಿ ಹೊಲದಲ್ಲಿ ಕೆಲಸ ಮಾಡುತ್ತಿದ್ದ ದಲಿತ ರೈತರು, ತಮ್ಮ ಕೆಲಸಕ್ಕೆ ತಕ್ಕುದಾದ ಕೂಲಿಯನ್ನು ಕೊಡಿ ಎಂದು ಕೇಳಿದ್ದಕ್ಕಾಗಿ, ಜಮೀನುದಾರರ ಕೈಯಲ್ಲಿ ಅವರ ದಾರುಣ ಹತ್ಯೆಯಾಗುತ್ತದೆ. ಅಂದಿನ ಇ.ಪಿ.ಡಬ್ಲ್ಯೂ ಮತ್ತು 'ಪೀಪಲ್ಸ್ ಡೆಮೊಕ್ರಸಿ' ವಾರಪತ್ರಿಕೆಗಳಲ್ಲಿ ಬಂದಿದ ವರದಿಯನ್ನು ಆಧರಿಸಿ, ಅದಕ್ಕೆ ನಾಟಕ ರೂಪ ಕೊಟ್ಟವರು ಸಿದ್ಧಲಿಂಗಯ್ಯ. ಈ ಬೀದಿನಾಟಕದಲ್ಲಿ ಬರುವ "ದೊಡ್ಡ ಗೌಡರ ಬಾಗಿಲೀಗೆ ನಮ್ಮ ಮೂಳೆಯ ತೋರಣ" ಎನ್ನುವ ಹಾಡು, ಕೇವಲ ಈ ಬೀದಿ ನಾಟಕಕ್ಕೆ ಸೀಮಿತವಾಗದೆ ಇಂದಿಗೂ ರೈತ–ಕಾರ್ಮಿಕರ ಬವಣೆಯನ್ನು ದೊಡ್ಡ ಜಮೀನುದಾರರ ಶೋಷಣೆಯ ಮುಖದ ಮುಖವಾಡವನ್ನು ಕಳಚಿ ಹಾಕುವ ಸರ್ವಕಾಲಿಕ ವಾಸ್ತವತೆಯ ಹಾಡಾಗಿದೆ.

ಎಲ್ಲಿಯವರೆಗೂ ದೊಡ್ಡ ಜಮೀನುದಾರರಿಂದ ದಲಿತ ರೈತ ಕೂಲಿಕಾರರ ಶೋಷಣೆ ಇರುತ್ತದೋ, ಜೀತ ಪದ್ಧತಿಯ ಅಸವಾನತೆ ಇರುತ್ತದೋ, ಅಲ್ಲಿಯವರೆಗೂ ಈ ಹಾಡು ಶೋಷಣೆಯ ವಿರುದ್ಧದ ರೈತ ಗೀತೆಯಾಗಿ ಮಾರ್ದನಿಸುತ್ತದೆ. ಇದರ ನಂತರ ಮತ್ತೊಂದು ಬೀದಿನಾಟಕ 'ಪತ್ರೆ ಸಂಗಪ್ಪನ ಕೊಲೆ ಪ್ರಕರಣ' ಸಹ, 'ಬೆಲ್ಚಿ'ಯ ತರಹವೇ ಸಾವಿರಾರು ಪ್ರದರ್ಶನಗಳನ್ನು ಕಂಡಿತು. ಚಿಕ್ಕಮಗಳೂರು ಜಿಲ್ಲೆಯ ಜೀತದಾಳು ಪತ್ರೆ ಸಂಗಪ್ಪ, ಅವನ ಜಮೀನುದಾರನಿಂದ ದಾರುಣವಾಗಿ ಕೊಲೆಯಾಗುವ ಕಥಾ ವಸ್ತುವಿನ ನಾಟಕ ಇದು. 1979, 1981ರ ಜಾಥಾಗಳಲ್ಲಿ, 1978ರ ಚಿಕ್ಕಮಗಳೂರಿನಲ್ಲಿ ಲೋಕಸಭೆ ಕ್ಷೇತ್ರಗಳಲ್ಲಿ ನಡೆಸಿದ ಜಾಥಾಗಳಲ್ಲಿ ಪ್ರದರ್ಶನ ಕಂಡ ಹೆಮ್ಮೆಯ ಬೀದಿನಾಟಕ ಇದು.

ಜಾಥಾದಲ್ಲಿ, ಸಿದ್ಧಲಿಂಗಯ್ಯನವರ ಮತ್ತೊಂದು ಬೀದಿ ನಾಟಕ 'ನೆಲಸಮ', ತುರ್ಕಮನ್ ಕೊಳೆಗೇರಿ ಕುರಿತ ನಾಟಕ. ತುರ್ಕಮನ್ ಗೇಟ್ ಎಂಬುದು ದೆಹಲಿಯಲಿದ್ದ ಸುಪ್ರಸಿದ್ಧ ಮತ್ತು ಬಹಳ ವಿಶಾಲವಾದ ಕೊಳೆಗೇರಿ. ತುರ್ತು ಪರಿಸ್ಥಿತಿಯ ಸಮಯದಲ್ಲಿ, ಈ ಕೊಳೆಗೇರಿಯಿಂದ ದೆಹಲಿಯ ಸೌಂದರ್ಯಕ್ಕೆ ಧಕ್ಕೆಯಾಗುತ್ತದೆ ಎನ್ನುವ ಕಾರಣದಿಂದ, ರಾತ್ರೋರಾತ್ರಿ ಅದನ್ನು ನೆಲಸಮಗೊಳಿಸುತ್ತಾರೆ. ಇದರ ಹಿಂದೆ ಸಂಜಯ ಗಾಂಧಿಯ ಸೂಚನೆ ಇರುತ್ತದೆ. ಮಾರುತಿ ಕಾರಿನ ಕಾರ್ಖಾನೆಗಾಗಿ ಈ ಭೂಮಿ ಬೇಕು ಎಂಬ ವಾದ ಮುಂದಿಟ್ಟು ಅಲ್ಪಸಂಖ್ಯಾತರು ವಾಸಿಸುತ್ತಿದ್ದ ಕೊಳೆಗೇರಿಯನ್ನು ನೆಲಸಮ ಮಾಡುತ್ತಾರೆ. ಇಂದಿರಾಗಾಂಧಿಯ ಸರ್ವಾಧಿಕಾರಿ ಧೋರಣೆ, ತುರ್ತು ಪರಿಸ್ಥಿತಿ ಹೇರುವಿಕೆ ಮುಂತಾದ ವಿಷಯಗಳನ್ನು ಇಟ್ಟುಕೊಂಡು ಅವರನ್ನು ಸೋಲಿಸುವ ಕರೆಕೊಟ್ಟು ಮಾಡಿದ ಜನಜಾಗೃತಿಯ ಜಾಥಾದಲ್ಲಿ ಇದು ಪ್ರದರ್ಶಿತವಾಯಿತು.


ಚಿಕ್ಕಮಗಳೂರಿನ ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ಎರಡು ತಂಡಗಳಾಗಿ ಸಮುದಾಯ ಬೆಂಗಳೂರು ಮಾಡಿದ ಜಾಥಾದಲ್ಲಿ, ಕೆಲವು ಪ್ರದೇಶಗಳಲ್ಲಿ ಸಿದ್ಧಲಿಂಗಯ್ಯ ಅವರು ಸ್ವತಃ ಭಾಗವಹಿಸಿದ್ದರು.

ಸಿದ್ಧಲಿಂಗಯ್ಯನವರ ರಂಗಬಾಂಧವ್ಯ, ಬೆಂಗಳೂರು 'ಸಮುದಾಯ'ಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ತುಮಕೂರು ಸಮುದಾಯ ತಂಡ 'ಪಂಚಮ' ನಾಟಕವನ್ನು ರಂಗದ ಮೇಲೆ (ಸಿಜೆಕೆ ನಿರ್ದೇಶನ) ಪ್ರಯೋಗಿಸಿದರು. ಗೌರಿಬಿದನೂರು ಸಮುದಾಯದಿಂದ ಹ.ವೆಂ. ವೇಣುಗೋಪಾಲ ಅವರ ನಿರ್ದೇಶನದಲ್ಲಿ 'ಕತ್ತೆ ಮತ್ತು ಧರ್ಮ' ನಾಟಕ ಪ್ರಯೋಗಗೊಂಡಿದೆ. ಬೆಂಗಳೂರು ಸಮುದಾಯ 'ಬಡಪಾಯಿ ಮಾದಪ್ಪ' ನಾಟಕವನ್ನು ಜನಾರ್ಧನ ಅವರ ನಿರ್ದೇಶನದಲ್ಲಿ ಪ್ರಯೋಗ ಮಾಡಿದೆ. ಉತ್ತರ ಕರ್ನಾಟಕದ ಹಲವು ಸಮುದಾಯ ಘಟಕಗಳು 'ಬೆಲ್ಚಿ', 'ಪತ್ರೆ ಸಂಗಪ್ಪ..' ಮತ್ತು 'ಏಕಲವ್ಯ' ನಾಟಕಗಳ ಪ್ರಯೋಗಗಳನ್ನು ಮಾಡಿದೆ.

**ದಲಿತ ಶೋಷಿತರ ನೋವು ಹಾಡಾಗಿದ್ದು**

ಸಮುದಾಯದ ಸಾಂಸ್ಕೃತಿಕ ಶಿಬಿರಗಳು, ಸಮುದಾಯದ ಎಲ್ಲಾ ಜಾಥಾಗಳು, ರಾಜ್ಯದಲ್ಲಿ ನಡೆದ ಕಾರ್ಮಿಕರ ಹೋರಾಟಗಳು, ರೈತರ ವಿಧಾನಸೌಧ ಚಲೋ ರಾಜ್ಯ ಮಟ್ಟದ ಜಾಥಾಗಳು, ಸಿದ್ಧಲಿಂಗಯ್ಯನವರು ಬರೆದ ಅನೇಕ ಪ್ರತಿಭಟನಾ ಹಾಡುಗಳನ್ನು ಬಿತ್ತರಿಸುವ ವೇದಿಕೆಗಳಾದವು. ಜನಾರ್ಧನ, ಪಿಚ್ಚಳ್ಳಿ, ರಾಜಣ್ಣ, ಮೋಹನ, ಭಾಸ್ಕರ, ಶೀಲಾಸ್ವಾಮಿ, ಶಿವಶಂಕರ್, ರವೀಂದ್ರ, ಎಂಜಿವಿ, ಬಸು, ನಾನು ಮುಂತಾದವರು ಹಾಡುತ್ತಿದ್ದ ಎಲ್ಲಾ ಹಾಡುಗಳೂ ಸಿದ್ಧಲಿಂಗಯ್ಯನವರ ರಚನೆಯ ಹಾಡುಗಳೇ ಆಗಿದ್ದವು. 'ಹಸಿವಿನಿಂದ ಸತ್ತೋರು', 'ಗುಡಿಸಲುಗಳು ಗುಡುಗುತ್ತಿವೆ', 'ನಾಡನಡುವಿನಿಂದ ಸಿಡಿದ ನೋವಿನ ಕೂಗೇ', 'ಆಕಾಶವ ಎತ್ತಿ ನಿಲ್ಲಿಸಿ', 'ನಿನ್ನೆ ದಿನ ನನ್ನ ಜನ', 'ಯಾರಿಗೆ ಬಂತು ಎಲ್ಲಿಗೆ ಬಂತು 47ರ ಸ್ವಾತಂತ್ರ್ಯ', 'ಎಲ್ಲಿದ್ದರೋ ಅವರು ಎಂಗಿದ್ದರೋ ಅವರು', 'ಚೋಮನ ಮಕ್ಕಳು ನಾವುಗಳು', 'ದೊಡ್ಡಗೌಡರ ಬಾಗಿಲೀಗೆ', 'ದಲಿತರು ಬರುವರು ದಾರಿ ಬಿಡಿ', 'ತುರ್ತು ಪರಿಸ್ಥಿತಿಯ ಕರಾಳ ರಾಣಿಯ', 'ಕುಂತ ಮನಗಳೇ', 'ಓ ಗೆಳತಿ ವ್ಯಾಸೋವಾ', 'ಆ ಬೆಟ್ಟದಲ್ಲಿ ಬೆಳದಿಂಗಳಲ್ಲಿ' – ಹೀಗೆ ಹಾಡುಗಳ ಪಟ್ಟಿ ಸಾಗುತ್ತದೆ. ಈ ಹಾಡುಗಳು ಕೇವಲ ಮನರಂಜನೆಯ ಹಾಡುಗಳಲ್ಲ. ಹಾಡುವ ರಾಗಗಳ ವೈವಿಧ್ಯತೆಯಲ್ಲಿ ಮನರಂಜನೆ ಇದ್ದರೂ ಸಹ, ಸಾಂಸ್ಕೃತಿಕ ಚಟುವಟಿಕೆಗಳ ಮುಖಾಂತರ ಜನರನ್ನು ಹೋರಾಟಕ್ಕೆ ಅಣಿನೆರೆಸುವ ಸಮುದಾಯದ ಆಶಯಗಳಿಗೆ ಚಿಂತನೆಗಳಿಗೆ ರೂಪ ಕೊಟ್ಟ, ನಮ್ಮ ನಡುವೆಯೇ ಬದುಕಿದ್ದೂ ಸತ್ತಂತಾಗಿದ್ದ ಕಾರ್ಮಿಕ–ರೈತರ ಶೋಷಣೆಯ ವಿವಿಧ ಮುಖಗಳನ್ನು ಅನಾವರಣಗೊಳಿಸುವ, ಅವರ ದಾರುಣ ಬದುಕಿನ ಕಥೆಯನ್ನು ಉಳ್ಳವರ ಹಾಗೂ ಮಧ್ಯಮ ವರ್ಗಗಳಿಗೆ ಪರಿಚಯಿಸುವ ಹಾಡುಗಳಾಗಿದ್ದವು.

ಅಂದಿನ ಸಮಯದಲ್ಲಿ ಕಾರ್ಮಿಕ, ರೈತ ಕೂಲಿಕಾರರ ಸಭೆಗಳು, ಸಮಾವೇಶಗಳು, ಪ್ರತಿಭಟನೆಯ ಮುಷ್ಕರಗಳಲ್ಲಿ ಬೆಂಗಳೂರು ಸಮುದಾಯಕ್ಕೆ ಈ ಕ್ರಾಂತಿಕಾರಿ, ಹೋರಾಟ ಮನೋಭಾವದ ಹಾಡುಗಳನ್ನು ಹಾಡಲು ಆಹ್ವಾನವಿರುತ್ತಿತ್ತು. ಸಮಯ ಮಾಡಿಕೊಂಡು ಅರ್ಧಗಂಟೆ ಹಾಡಿನ ಕಾರ್ಯಕ್ರಮದ ನಂತರ ಸಭೆ ಪ್ರಾರಂಭವಾಗುತಿತ್ತು. ಈ ಹಾಡುಗಳು ಮತ್ತು ಬೀದಿ ನಾಟಕಗಳ ಮುಖಾಂತರ,




ಸಮುದಾಯದ ಆಶಯಗಳು, 'ಕಲೆ ಕೇವಲ ಮನರಂಜನೆಗಾಗಿ ಮಾತ್ರ ಅಲ್ಲ' ಎನ್ನುವ ಧ್ಯೇಯ–ಧೋರಣೆಗಳು ಸಂಪೂರ್ಣವಾಗಿ ಈಡೇರುತ್ತಿದ್ದವು. ಇದರೊಟ್ಟಿಗೆ, ಸಿದ್ಧಲಿಂಗಯ್ಯನವರ ಹಾಡುಗಳು, ಅವರ ಕವನ ಸಂಕಲನ ಪ್ರಕಟಗೊಳ್ಳುವುದಕ್ಕೆ ಮುಂಚೆಯೇ ಜನ ಸಾಮಾನ್ಯರಲ್ಲಿ ಮಧ್ಯಮ ಮತ್ತು ಕೂಲಿಕಾರ ವರ್ಗದವರಲ್ಲಿ ಜನಪ್ರಿಯಗೊಳುತ್ತಿದ್ದವು. ಕೇಂದ್ರ ಸರ್ಕಾರಿ ನೌಕರರ ಸಂಘಟನೆಗಳ ಸಮಾವೇಶಗಳು, ಬ್ಯಾಂಕ್, ಎಲ್.ಐ.ಸಿ., ರಾಜ್ಯ ಸರ್ಕಾರಿ ನೌಕರರ ಸಮ್ಮೇಳನಗಳು, ಸಾರ್ವಜನಿಕ ಉದ್ದಿಮೆಗಳ ನೌಕರರ ಸಮ್ಮೇಳನಗಳಲ್ಲಿ ಸಮುದಾಯ ಭಾಗವಹಿಸಿ, ಈ ಎಲ್ಲಾ ಬೀದಿ ನಾಟಕಗಳನ್ನು ಆಡಿ ಹಾಡುಗಳನ್ನು ಹಾಡಿ, ಆ ಸಮಾರಂಭಗಳಲ್ಲಿ ಚರ್ಚೆಯಾಗುವ ಕಾರ್ಮಿಕರ, ರೈತರ ಅಜೆಂಡಾಗಳಿಗೆ ಪ್ರೇರಕಶಕ್ತಿಯಾಗಿ ಕಾರ್ಯನಿರ್ವಹಿಸಿದೆ.

ಸಿದ್ಧಲಿಂಗಯ್ಯನವರ ಹಾಡುಗಳು, ಸಮುದಾಯದ 'ತಾಯಿ', 'ಪಂಚಮ', 'ಅಲ್ಲೇ ಕುಂತವರೆ', 'ಏಕಲವ್ಯ', 'ಚೋರ ಚರಣದಾಸ', ('ಉತ್ತರ ದಿಕ್ಕಿನಲ್ಲಿ ರಾಣಿಯೊಬ್ಬಳು') 'ಬೆಲ್ಚಿ' 'ಪತ್ರೆ ಸಂಗಪ್ಪ', ನಾಟಕಗಳಲ್ಲಿ ಬಳಕೆಯಾದಂತೆ, ರಂಗಸಂಪದ ತಂಡದ 'ಚೋಮ' ನಾಟಕದಲ್ಲಿ ಮತ್ತು ರಂಗನಿರಂತರ ಎರಡನೇ ಬಾರಿಗೆ ಪ್ರಸ್ತುತ ಪಡಿಸಿದ 'ಅಲ್ಲೇ ಕುಂತವರೇ' ನಾಟಕಗಳ ಪ್ರಯೋಗಗಳಲ್ಲೂ ಬಳಕೆಯಾಗಿದೆ. ಸಮುದಾಯ ಬೆಂಗಳೂರು ತಂಡ ಮಾಂಸಾಹಾರಿ ಹೋಟಲ್ಲುಗಳ ನೌಕರರ ಬವಣೆ ಮತ್ತು ಶೋಷಣೆ ಕುರಿತಾದ ನಾಟಕ ರಘುನಂದನ ಅವರ ನಿರ್ದೇಶನದಲ್ಲಿ ಪ್ರಸ್ತುತವಾಯಿತು. ಅದಕ್ಕೆ ಸಿದ್ಧಲಿಂಗಯ್ಯ ಅವರು ಬರೆದ "ರಂಜಾನಿನ ಹಬ್ಬದಲ್ಲಿ ಬಣ್ಣ ಬೆಳಕು ಸುತ್ತಲೂ, ಬಡವರ ಮನೆ ಅಂಗಳದಲ್ಲಿ ಕತ್ತಲೋ ಕತ್ತಲು" ಎಂಬ ಕರುಳು ಹಿಂಡುವ ಹಾಡು, ಇಂದಿಗೂ ಆರ್ಥಿಕ ಸಂಕಷ್ಟದಿಂದಾಗಿ ರಂಜಾನ್ ಹಬ್ಬ ಆಚರಣೆ ಮಾಡಲಾಗದ ನಮ್ಮ ಬಂಧುಗಳ ನೋವಿನ ಹಾಡಾಗಿದೆ.

ಈ ಎಲ್ಲಾ ಹಾಡುಗಳು ಮತ್ತು ನಾಟಕಗಳು ಮಾಡಿದ್ದ ಬಹಳ ದೊಡ್ಡ ಸದ್ದಿನಿಂದಾಗಿ, ಸಿದ್ಧಲಿಂಗಯ್ಯನವರ ಕೆಲವು ಹಾಡುಗಳು ಚಲನಚಿತ್ರದಲ್ಲೂ ಬಳಕೆಯಾದವು. ಆದರೆ, ಆ ಚಿತ್ರರಂಗದ ಸ್ವರ ಮಾಧುರ್ಯದ ಗೀತೆಗಳು, ನಮ್ಮ ಸಮುದಾಯ ಮತ್ತು ರಂಗಭೂಮಿ ತಂಡಗಳಿಗೆ ಇಷ್ಟವಾಗಲಿಲ್ಲ. ಅದು ಬೆರೆಯದೆ ಚರ್ಚೆಗೆ ದಾರಿ ಮಾಡುತ್ತದೆ.

**ದಲಿತ–ಬಂಡಾಯದ ಜೊತೆ ನಂಟು**

ಈ ಅನ್ಯೋನ್ಯ ಸಾಂಸ್ಕೃತಿಕ ಸಂಬಂಧ ಹೇಗೆ ಸಮುದಾಯದ ಬೆಳವಣಿಗೆಗೆ ಸಹಕಾರವಾಗಿತ್ತೋ, ಅದೇ ರೀತಿ, ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿ ಮತ್ತು ಬಂಡಾಯ ಸಾಹಿತ್ಯ ಸಂಘಟನೆಗಳ ಹುಟ್ಟಿಗೆ ಮತ್ತು ನಂತರದ ಸಕ್ರಿಯ ಪ್ರಗತಿಪರ ಚಟುವಟಿಕೆಗಳಿಗೆ ಇಂಬು ಕೊಟ್ಟಿತು. ಈ ಸಂಘಟನೆಗಳು ನಾಡಿನಾದ್ಯಂತ ಪ್ರಸರಿಸಲು ಪೂರಕವಾಯಿತು. ಸಮುದಾಯ ಸಂಘಟನೆ, ರಾಜ್ಯದ ಹಲವು ಜಿಲ್ಲೆಗಳಲ್ಲಿ, ತಾಲ್ಲೂಕು ಕೇಂದ್ರಗಳಲ್ಲಿ ನಡೆಸುತ್ತಿದ್ದ ಚಟುವಟಿಕೆಗಳನ್ನು ದ.ಸಂ.ಸ. ಮತ್ತು ಬಂಡಾಯ ಸಂಘಟನೆಗಳ ಜೊತೆ ಜೊತೆಯಾಗಿ ಮಾಡಲು ಸಾಧ್ಯವಾಯಿತು. ಸಮುದಾಯ ಪ್ರಕಾಶನ, ಸಿದ್ಧಲಿಂಗಯ್ಯನವರ 'ಸಾವಿರಾರು ನದಿಗಳು' ಕವನ ಸಂಕಲನವನ್ನು ಪ್ರಕಟಣೆ ಮಾಡಿತು.

"ಹೊಲೆ ಮಾದಿಗರ ಹಾಡು" ಕವನ ಸಂಕಲನ ಪ್ರಕಟಗೊಂಡಾಗ ಮತ್ತು ಅದರಲ್ಲಿನ ಹಾಡುಗಳು ಜನಪ್ರಿಯಗೊಳ್ಳುತ್ತಿದ್ದಾಗ ನಾಡಿನ ಅನೇಕ ಕವಿಗಳು ಅದನ್ನು ಮೊದಲು ಗಾಬರಿಯಿಂದ ಕೇಳಿದರೂ ಸಹ, ನಂತರದಲ್ಲಿ ಅವುಗಳನ್ನು ಸ್ವಾಗತಿಸಿದ್ದಾರೆ. ಸಮಾಜದ ಸ್ವಾಸ್ಥ್ಯವನ್ನು ಸಮತೋಲನದಲ್ಲಿ ಕಾಪಾಡಲು ಈ ಗೀತೆಗಳು ಅತಿ ಅವಶ್ಯ ಅನ್ನುವ ಮಾತುಗಳು, ಪ್ರತಿಕ್ರಿಯೆಗಳು – ಜಿ.ಎಸ್.ಶಿವರುದ್ರಪ್ಪ, ಚಂ.ಪಾ., ದೇವನೂರ, ಬೆಸಗರಹಳ್ಳಿ ರಾಮಣ್ಣ, ಕಾಳೇಗೌಡ ನಾಗವಾರ, ಡಿ.ಆರ್. ನಾಗರಾಜ್, ಶೂದ್ರ, ಚಂದ್ರಶೇಖರ ಕಂಬಾರ, ದೊಡ್ಡ ರಂಗೇಗೌಡ–ಮುಂತಾದ ನಾಡಿನ ಅನೇಕ ಹೆಸರಾಂತ ಕವಿಗಳಿಂದ ವಿಮರ್ಶಕರಿಂದ ಪ್ರಕಟವಾಗಿವೆ.

ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಎರಡು ಬಾರಿ ವಿಧಾನ ಪರಿಷತ್ ಸದಸ್ಯರಾಗಿ, ತಾವು ಕಾರ್ಯನಿರ್ವಹಿಸಿದ ಎಲ್ಲಾ ಕ್ಷೇತ್ರಗಳಲ್ಲೂ ಸಿದ್ಧಲಿಂಗಯ್ಯ ತಮ್ಮ ಛಾಪನ್ನು ಮೂಡಿಸಿದ್ದಾರೆ. ಸದಾ ಜಾಗೃತ ಮನಸ್ಸಿನಿಂದ ಕಾರ್ಯ ನಿರ್ವಹಿಸಿ, ದಲಿತ ಮತ್ತು ಶೋಷಿತ ಸಮುದಾಯದ ಕಷ್ಟಗಳಿಗೆ ಸ್ಪಂದಿಸಿದ ಮಾನವೀಯ ನಾಯಕರಾಗಿ ಅವರು ಗುರುತಿಸಿಕೊಂಡಿದ್ದಾರೆ. ಸದನದಲ್ಲಿ ಹಲವಾರು ಬಾರಿ. ಬಹಳ ಮೌಲ್ಯಯುತ ಪ್ರಶ್ನೆಗಳನ್ನು ಕೇಳಿ, ಪರಿಹಾರ ಒದಗಿಸಿದ್ದಾರೆ. ಬಾಬ್ರಿ ಮಸೀದಿ ಧ್ವಂಸ ಆದ ನಂತರ, ಅವರು ಮಾಡಿದ ಭಾಷಣ ಕೋಮುವಾದದ ವಿರುದ್ಧ ಅವರು ಎತ್ತಿದ ಧ್ವನಿಯ ಸರ್ವಕಾಲಿಕ ಉತ್ತಮ ಭಾಷಣ.

ನಾನು ನನ್ನ ಲೇಖನದಲ್ಲಿ, ಸಿದ್ಧಲಿಂಗಯ್ಯ ಅವರನ್ನು ಸಾಂಸ್ಕೃತಿಕ ಕ್ಷೇತ್ರದ ಅದರಲ್ಲೂ ರಂಗಭೂಮಿಯ ಚೌಕಟ್ಟಿನಲ್ಲಿ ಮಾತ್ರ ಗುರುತಿಸಲು ಪ್ರಯತ್ನಿಸಿದ್ದೇನೆ. ಅವರ ಸರ್ವತೋಮುಖ ಚಟುವಟಿಕೆಗಳನ್ನು ಗುರುತಿಸಿ, ದಾಖಲು ಮಾಡುವುದು ನನ್ನ ಸಾಮರ್ಥ್ಯಕ್ಕೆ ಮೀರಿದ ಕೆಲಸ.

ಸಮುದಾಯದ ಪ್ರಾರಂಭಿಕ ದಿನಗಳಿಂದ, ಅವರು ಅಗಲುವ ಎರಡು ತಿಂಗಳ ಮುಂಚಿನವರೆಗೂ ಸಂಪರ್ಕದಲ್ಲಿದ್ದ, ಕಂಡಾಗಲೆಲ್ಲಾ ಅತ್ಯಂತ ಗೌರವದಿಂದ ಮತ್ತು ಪ್ರೀತಿಯಿಂದ ಮಾತಾಡಿಸುತ್ತಿದ್ದ, ಅನೇಕ ಬಾರಿ ಮನೆಗೆ ಬರಲು ಆಹ್ವಾನ ನೀಡಿದ ಕಾಮ್ರೇಡ್ (ನಾನು ಅವರನ್ನು ಮತ್ತು ಅವರೂ ಸಹ ನನ್ನನ್ನು ಹಾಗೆಯೇ ಕರೆಯುತ್ತಿದ್ದದ್ದು) ಸಿದ್ಧಲಿಂಗಯ್ಯ ಅವರು ನಮ್ಮೊಟ್ಟಿಗೆ ಇಲ್ಲ ಎನ್ನುವುದು ಊಹೆಗೂ ಮೀರಿದ ಕಟು ಸತ್ಯ ಮತ್ತು ನೋವಿನ ಸಂಗತಿ.

ಕಾಮ್ರೇಡ್‌ಗೆ ನಮನಗಳು,



JANASHAKTHI KANNADA VARA PATRIKE June 21-27, 2021 Price: Rs. 10/- Date of Publication: 18 June 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21






## ಕೋವಿಡ್ ಹಾಗೂ ಲಾಕ್ ಡೌನ್‌ಗಳ ದುಸ್ಥಿತಿಗೆ ಪರಿಹಾರಗಳ ಸಮರ್ಪಕ ಪ್ಯಾಕೇಜ್‌ಗಾಗಿ ಒತ್ತಾಯ













## ಪೆಟ್ರೋಲ್, ಡೀಸೆಲ್, ಗ್ಯಾಸ್ ಬೆಲೆ ಏರಿಕೆ ವಿರೋಧಿಸಿ, ರಾಜ್ಯಾದಾದ್ಯಂತ ಪ್ರತಿಭಟನೆ






**JANASHAKTHI KANNADA VARA PATRIKE:** Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**